ಮಂಗಳವಾರ, ಫೆಬ್ರುವರಿ 27, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 58 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಮನೆ ವೆಚ್ಚ: ಕಡಿಮೆಯಾಗದ ಸಾಮಾಜಿಕ, ಆರ್ಥಿಕ ಅಂತರ

ತಗ್ಗಿದ ಬೆಳ್ಳುಳ್ಳಿ ಧಾರಣೆ 12
ನಿತಾಶಾಗೆ ನಿರ್ಬಂಧ: ತೀವ್ರ ಆಕ್ಷೇಪ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,790 ▼	22,122 ▼	₹64,140 (ಬೆಂಗಳೂರು) ▼	₹71,700 (ಬೆಂಗಳೂರು) ▼	82.88 ▲

ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಚುನಾವಣೆ • ಇಂದು ಮತದಾನ • ಕಣದಲ್ಲಿ ಐವರು ಅಭ್ಯರ್ಥಿಗಳು

ಅಡ್ಡಮತದ ಏಟು ಯಾರಿಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಮಂಗಳವಾರ ಮತದಾನ ನಡೆಯಲಿದ್ದು, ಮೂರೂ ಪಕ್ಷಗಳು ಅಡ್ಡ ಮತದಾನದ ಆತಂಕದಲ್ಲಿವೆ. ತಮ್ಮ ಶಾಸಕರನ್ನು ಬಲವಾಗಿ ಹಿಡಿದಿಟ್ಟುಕೊಳ್ಳುವ ಜತೆಯಲ್ಲೇ ಎದುರಾಳಿಗಳ ಮತ ಕಸಿಯುವ ಕಸರತ್ತನ್ನೂ ಆಡಳಿತಾರೂಢ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ಎನ್‌ಡಿಎ ಮೈತ್ರಿಕೂಟ ಮುಂದುವರಿಸಿವೆ.

ತಮ್ಮ ಮತಗಳನ್ನು ರಕ್ಷಿಸಿಟ್ಟುಕೊಂಡು, ಎದುರಾಳಿಗಳನ್ನು ಅಡ್ಡ ಮತದಾನದ ಉರುಳಿಗೆ ಸಿಲುಕಿಸುವ ಪ್ರಯತ್ನವನ್ನೂ ಆಡಳಿತ ಮತ್ತು ಪ್ರತಿಪಕ್ಷಗಳು ಬಲವಾಗಿಯೇ ಮಾಡುತ್ತಿವೆ. ಯಾವುದೇ ಕಡೆಯಿಂದ ಅಡ್ಡ ಮತದಾನ ನಡೆದರೂ, ಭವಿಷ್ಯದ ದಿನಗಳಲ್ಲಿ ರಾಜ್ಯದ ರಾಜಕೀಯದಲ್ಲಿ ಹೊಸ ಬೆಳವಣಿಗೆಗಳಿಗೆ ಇದು ನಾಂದಿಯಾಗುವ ಸಾಧ್ಯತೆ ಇದೆ.

ನಾಲ್ಕು ಸ್ಥಾನಗಳಿಗೆ ಐವರು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಒಬ್ಬ ಅಭ್ಯರ್ಥಿಯ ಗೆಲುವಿಗೆ ಪ್ರಥಮ ಪ್ರಾಶಸ್ತ್ಯದ 45 ಮತಗಳ ಅಗತ್ಯವಿದೆ. ವಿಧಾನಸಭೆಯ 224 ಸದಸ್ಯ ಬಲದ ಪೈಕಿ ಕಾಂಗ್ರೆಸ್ 135 ಬಲ ಹೊಂದಿತ್ತು. ಸುರಪುರ ಶಾಸಕ ರಾಜಾ ವೆಂಕಟಪ್ಪ ನಾಯಕರ ಅಕಾಲಿಕ ನಿಧನದಿಂದಾಗಿ ಕಾಂಗ್ರೆಸ್ ಸಂಖ್ಯೆ 134ಕ್ಕೆ ಇಳಿದಿದೆ. ಬಿಜೆಪಿಯ 66 ಹಾಗೂ ಜೆಡಿಎಸ್‌ನ 19 ಶಾಸಕರಿದ್ದಾರೆ. ಇಬ್ಬರು ಪಕ್ಷೇತರರು, ಸರ್ವೋದಯ ಕರ್ನಾಟಕ ಪಕ್ಷ ಹಾಗೂ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಒಬ್ಬ ಶಾಸಕರಿದ್ದಾರೆ.

ಕಾಂಗ್ರೆಸ್‌ನಿಂದ ಅಜಯ್ ಮಾಕನ್, ಸೈಯದ್ ನಾಸಿರ್ ಹುಸೇನ್ ಮತ್ತು ಜಿ.ಸಿ. ಚಂದ್ರಶೇಖರ್ ಕಣದಲ್ಲಿದ್ದಾರೆ. ಮೂವರನ್ನೂ ಗೆಲ್ಲಿಸಿಕೊಳ್ಳಲು ಆಡಳಿತ ಪಕ್ಷಕ್ಕೆ ಒಂದು ಮತದ ಕೊರತೆ ಇದೆ. ಸ್ವಂತ ಬಲದ ಜತೆಗೆ ಪಕ್ಷೇತರ ಶಾಸಕರಾದ ಲತಾ ಮಲ್ಲಿಕಾರ್ಜುನ ಮತ್ತು ಕೆ.ಎಚ್. ಪುಟ್ಟಸ್ವಾಮಿ ಗೌಡ ಕಾಂಗ್ರೆಸ್ ಸಹ ಸದಸ್ಯರಾಗಿ ಗುರುತಿಸಿಕೊಂಡಿರುವುದರಿಂದ ಮೂರೂ ಸ್ಥಾನಗಳನ್ನು ನಿರಾಯಾಸವಾಗಿ ಗೆಲ್ಲುವ ನಿರೀಕ್ಷೆಯಲ್ಲಿದೆ. ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಮತ್ತು ಕೆಆರ್‌ಪಿಪಿಯ ಜಿ. ಜನಾರ್ದನ ರೆಡ್ಡಿ ಅವರ ಮತಗಳನ್ನೂ ಸೆಳೆಯುವ ಕಸರತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಾರಥ್ಯದಲ್ಲಿ ನಡೆದಿದೆ.

13 ನೇ ಪುಟ ನೋಡಿ

ಗೆಲುವಿಗೆ ಬೇಕು 45 ಮತ

ಒಬ್ಬ ಅಭ್ಯರ್ಥಿಯ ಗೆಲುವಿಗೆ 45 ಮತಗಳು ಬೇಕು. ಈ ಮತಗಳಿಗೆ 4,461 ಮೌಲ್ಯ ನಿಗದಿಯಾಗಿದೆ. ಒಂದು ವೇಳೆ ಯಾವುದೇ ಒಂದು ಮತ ಅನರ್ಹಗೊಂಡರೆ ಅಥವಾ ಚಲಾಯಿಸದೇ ಇದ್ದರೆ ಆಗ ಮತಗಳ ಮೌಲ್ಯದಲ್ಲಿ ಬದಲಾವಣೆ ಆಗುತ್ತದೆ.

ಮತದಾನ
ಬೆಳಿಗ್ಗೆ 9 ರಿಂದ ಸಂಜೆ 4
ಮತ ಎಣಿಕೆ
ಸಂಜೆ 5ರಿಂದ



* ಸುರಪುರ ಶಾಸಕ ರಾಜಾ ವೆಂಕಟಪ್ಪ ನಾಯಕ ನಿಧನದಿಂದ ಒಂದು ಸ್ಥಾನ ಕಡಿಮೆ

ಕಣದಲ್ಲಿರುವ ಅಭ್ಯರ್ಥಿಗಳು

ಕಾಂಗ್ರೆಸ್
- ಅಜಯ್ ಮಾಕನ್
- ಸೈಯದ್ ನಾಸಿರ್ ಹುಸೇನ್
- ಜಿ.ಸಿ. ಚಂದ್ರಶೇಖರ್

ಎನ್‌ಡಿಎ
- ನಾರಾಯಣ ಸಾ ಭಾಂಡಗೆ (ಬಿಜೆಪಿ)
- ಡಿ. ಕುಪೇಂದ್ರ ರೆಡ್ಡಿ (ಜೆಡಿಎಸ್)

ಹೋಟೆಲ್‌ನಲ್ಲಿ ಕೈ ಶಾಸಕರು

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್‌ನ 134 ಮಂದಿ ಹಾಗೂ ಇಬ್ಬರು ಪಕ್ಷೇತರರು ಮತ್ತು ದರ್ಶನ್ ಪುಟ್ಟಣ್ಣಯ್ಯ ಮಾನ್ಯತಾ ಟೆಕ್ ಪಾರ್ಕ್ ಬಳಿಕ ಹಿಲ್ಟನ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಎಲ್ಲರೂ ಮಂಗಳವಾರ ಬೆಳಿಗ್ಗೆ ಹೋಟೆಲ್‌ನಿಂದ ನೇರವಾಗಿ ವಿಧಾನಸೌಧಕ್ಕೆ ಬಂದು ಮತ ಚಲಾಯಿಸಲಿದ್ದಾರೆ.

ತಮ್ಮ ಶಾಸಕರ ಮತಗಳನ್ನು ಕಸಿಯಲು ಬಿಜೆಪಿಯ ದೆಹಲಿ ನಾಯಕರೇ ಕಾರ್ಯಾಚರಣೆಗೆ ಇಳಿಯಬಹುದು ಎಂಬ ಅನುಮಾನ ಕಾಂಗ್ರೆಸ್ ಪ್ರಮುಖರಲ್ಲಿದೆ. ಇದಕ್ಕಾಗಿಯೇ ಪಕ್ಷೇತರರೂ ಸೇರಿದಂತೆ 137 ಮಂದಿಯನ್ನು ಒಂದೆಡೆ ಇರಿಸಿಕೊಂಡಿದ್ದಾರೆ ಎಂದು ಆಡಳಿತ ಪಕ್ಷದ ಮೂಲಗಳು ತಿಳಿಸಿವೆ.

13 ನೇ ಪುಟ ನೋಡಿ

ಪಾವಗಡ: ಶಸ್ತ್ರ ಚಿಕಿತ್ಸೆಯ ಬಳಿಕ ಮೂವರು ಮಹಿಳೆಯರ ಸಾವು

ಸರ್ಕಾರಿ ಆಸ್ಪತ್ರೆಯಲ್ಲಿ ದುರ್ಘಟನೆ • ಇಬ್ಬರ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಹೆರಿಗೆ ಶಸ್ತ್ರಚಿಕಿತ್ಸೆ ಬಳಿಕ ಮೃತಪಟ್ಟ ಮಹಿಳೆಯರ ಕುಟುಂಬ ಸದಸ್ಯರು ಸೋಮವಾರ ಪಾವಗಡ ಸರ್ಕಾರಿ ಆಸ್ಪತ್ರೆಯ ಮುಂಭಾಗ ರಸ್ತೆ ತಡೆ ನಡೆಸಿದರು

ಪಾವಗಡ: ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಫೆ. 22ರಂದು ಸಿಸೇರಿಯನ್ ಹೆರಿಗೆ ಹಾಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಏಳು ಮಹಿಳೆಯರಲ್ಲಿ ಮೂವರು ಮೃತಪಟ್ಟಿದ್ದಾರೆ. ತೀವ್ರ ಅಸ್ವಸ್ಥರಾಗಿರುವ ಮತ್ತಿಬ್ಬರು ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪಾವಗಡ ತಾಲ್ಲೂಕಿನ ರಾಜವಂತಿ ಗ್ರಾಮದ ಅಂಜಲಿ (20), ವೀರ್ಲಗೊಂದಿಯ ಅನಿತಾ (30) ಹಾಗೂ ಬ್ಯಾಡನೂರಿನ ನರಸಮ್ಮ (40) ಮೃತ ಮಹಿಳೆಯರು. ಅಂಜಲಿ ಮತ್ತು ಅನಿತಾ ಅವರಿಗೆ ಸಿಸೇರಿಯನ್ ಹೆರಿಗೆಯಾಗಿತ್ತು. ನರಸಮ್ಮ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಶಸ್ತ್ರಚಿಕಿತ್ಸೆಗೆ ಒಳಗಾದ ಏಳು ಜನರಲ್ಲಿ ಚೇತರಿಸಿಕೊಂಡ ಇಬ್ಬರನ್ನು ಮನೆಗೆ ಕಳಿಸಲಾಗಿತ್ತು. ಉಳಿದ ಐವರಿಗೆ ಹೊಟ್ಟೆ, ಎದೆ ಭಾಗದಲ್ಲಿ ನೋವು ಕಾಣಿಸಿಕೊಂಡಿತ್ತು. ಆರೋಗ್ಯದಲ್ಲಿ ಏರುಪೇರಾದ ನಂತರ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ವೈದ್ಯರು ಸೂಚಿಸಿದ್ದರು.

ಅದೇ ದಿನ ಐವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅನಿತಾ ಫೆ.22ರಂದು ಸಾವನ್ನಪ್ಪಿದರೆ, ಎರಡು ದಿನದ ಬಳಿಕ (ಫೆ.24ರಂದು) ಅಂಜಲಿ ಮತ್ತು ನರಸಮ್ಮ ಮೃತಪಟ್ಟಿದ್ದಾರೆ.

ನರಸಮ್ಮ ತಮ್ಮ ಊರಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಬೆಂಗಳೂರಿನಲ್ಲಿ ಮನೆಗೆಲಸ ಮಾಡುತ್ತಾ ಬದುಕು ಕಟ್ಟಿಕೊಂಡಿದ್ದ ಅನಿತಾ ಶಸ್ತ್ರಚಿಕಿತ್ಸೆಗಾಗಿ ತಮ್ಮೂರಿಗೆ ಬಂದಿದ್ದರು. ಅವರಿಗೆ ಮೂವರು ಮಕ್ಕಳಿದ್ದಾರೆ. ಅಂಜಲಿಯ ಮೂರು ವರ್ಷದ ಹೆಣ್ಣು ಮಗು ಮತ್ತು ನವಜಾತಶಿಶು ತಬ್ಬಲಿಗಳಾಗಿವೆ.

9ನೇ ಪುಟ ನೋಡಿ

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹ 5660/gm
ಬೆಳ್ಳಿ ದರ: ₹ 71/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
Ph- 080-29909733/ 9513394070

‘ಕರಾವಳಿ ಪಡೆ’ಯಲ್ಲಿ ಮಹಿಳೆಯರಿಗೆ ಕಾಯಂ ನಿಯೋಜನೆ ಹುದ್ದೆ: ತಾಕೀತು

ನವದೆಹಲಿ (ಪಿಟಿಐ): ಭಾರತೀಯ ಕರಾವಳಿ ಕಾವಲು ಪಡೆಯಲ್ಲಿ ಮಹಿಳೆಯರಿಗೆ ಕಾಯಂ ನಿಯೋಜನೆಯ ಹುದ್ದೆಗಳನ್ನು ಕಲ್ಪಿಸಬೇಕು ಎಂದು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೋಮವಾರ ತಾಕೀತು ಮಾಡಿದೆ. ಈ ಕೆಲಸವನ್ನು ಸರ್ಕಾರ ಮಾಡದೆ ಇದ್ದಲ್ಲಿ, ತಾನೇ ಮಾಡುವುದಾಗಿ ಸ್ಪಷ್ಟ ಸಂದೇಶ ರವಾನಿಸಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ಈ ಮಾತು ಹೇಳಿದೆ.

13 ನೇ ಪುಟ ನೋಡಿ

ಗಾಯಕ ಪಂಕಜ್ ಉಧಾಸ್ ನಿಧನ

ಪ್ರಜಾವಾಣಿ ವಾರ್ತೆ

ಮುಂಬೈ: ಗಜಲ್ ಹಾಗೂ ಹಿಂದಿ ಚಿತ್ರರಂಗದ ಹಿನ್ನೆಲೆ ಗಾಯಕ ಪಂಕಜ್ ಉಧಾಸ್ (72) ಸೋಮವಾರ ನಿಧನರಾದರು. ಅವರ ಹಾಡುಗಳಿಗೆ ಹಲವು ತಲೆಮಾರುಗಳ ಅಭಿಮಾನಿಗಳು ಇದ್ದಾರೆ.

ದೀರ್ಘ ಕಾಲದಿಂದ ಅನಾರೋಗ್ಯದ ಸಮಸ್ಯೆಯಿಂದ ಬಳಲಿದ್ದ ಅವರು ಸೋಮವಾರ ಬೆಳಿಗ್ಗೆ ಕೊನೆಯುಸಿರೆಳೆದರು ಎಂದು ಅವರ ಮಗಳು ನಯಾಬ್ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದರು.

13 ನೇ ಪುಟ ನೋಡಿ

ಒಳ ಪುಟ

ನೌಕರಿ ಅರಸಿ ಮೇಳದತ್ತ ದೌಡು 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪತಿ–ಪತ್ನಿ ಪ್ರಕರಣ: ಕಾನ್‌ಸ್ಟೆಬಲ್ ವರ್ಗಾವಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಿ- ಪತ್ನಿ ಪ್ರಕರಣದಲ್ಲಿ ಪೊಲೀಸ್ ಕಾನ್‌ಸ್ಟೆಬಲ್‌ಗಳ ಅಂತರ ಜಿಲ್ಲಾ ವರ್ಗಾವಣೆಗೆ ಕ್ರಮ ಕೈಗೊಳ್ಳುವಂತೆ ರಾಜ್ಯ ಗೃಹ ಸಚಿವ ಜಿ. ಪರಮೇಶ್ವರ್ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿ-ಐಜಿಪಿ) ಸೂಚನೆ ನೀಡಿದ್ದಾರೆ.

ಪತಿ, ಪತ್ನಿ, ಒಂದೇ ಘಟಕ ಅಥವಾ ಜಿಲ್ಲೆಯಲ್ಲಿ ಕೆಲಸ ಮಾಡಲು ಅವಕಾಶ ನೀಡುವಂತೆ ಅರ್ಹ ಕಾನ್‌ಸ್ಟೆಬಲ್‌ಗಳು ಮನವಿ ಸಲ್ಲಿಸಿದ್ದರು. ಭರವಸೆ ನೀಡಿದ್ದ ಸರ್ಕಾರ, ಕೊಟ್ಟ ಮಾತು ಈಡೇರಿಸಿರಲಿಲ್ಲ. ನೊಂದ ಕಾನ್‌ಸ್ಟೆಬಲ್‌ಗಳು, ದಯಾಮರಣ ಕೋರಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಇತ್ತೀಚೆಗೆ ಪತ್ರ ಬರೆದಿದ್ದರು.

ಇದರ ಬೆನ್ನಲ್ಲೇ ಡಿಜಿ-ಐಜಿಪಿಗೆ ಸೋಮವಾರ ಪತ್ರ ಬರೆದಿರುವ ಗೃಹ ಸಚಿವ, 'ಲೋಕಸಭಾ ಚುನಾವಣೆ ಸಂಹಿತೆ ಜಾರಿಯಾಗುವ ಮುನ್ನ ಅರ್ಹ ಕಾನ್‌ಸ್ಟೆಬಲ್‌ಗಳ ವರ್ಗಾವಣೆ ಪ್ರಸ್ತಾವಗಳ ಬಗ್ಗೆ ಕ್ರಮ ಕೈಗೊಂಡು ವರದಿ ನೀಡಿ' ಎಂದು ಸೂಚಿಸಿದ್ದಾರೆ.

ಮೆಟ್ರೊ ಭದ್ರತಾ ಸಿಬ್ಬಂದಿ ವಜಾ • ಪ್ರಯಾಣಿಕನ ಕ್ಷಮೆ ಕೋರಿದ ಬಿಎಂಆರ್‌ಸಿಎಲ್

ಗಲೀಜು ಬಟ್ಟೆ: ಪ್ರವೇಶ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಟ್ಟೆ ಗಲೀಜಾಗಿದೆ' ಎಂಬ ಕಾರಣಕ್ಕೆ ಪ್ರಯಾಣಿಕರೊಬ್ಬರನ್ನು ಮೆಟ್ರೊ ನಿಲ್ದಾಣದೊಳಗೆ ಬಿಡದೇ ಭದ್ರತಾ ಸಿಬ್ಬಂದಿ ಅಮಾನವೀಯವಾಗಿ ವರ್ತಿಸಿದ್ದು, ಈ ಘಟನೆಯ ವಿಡಿಯೊ ಆಧರಿಸಿ ಸೆಕ್ಯುರಿಟಿ ಗಾರ್ಡ್ ಯಾದವ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ರಾಜಾಜಿನಗರ ಮೆಟ್ರೊ ನಿಲ್ದಾಣದಲ್ಲಿ ಫೆ.18ರಂದು ನಡೆದಿರುವ ಘಟನೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿರುವ ಕಾರ್ತಿಕ್ ಐರಾನಿ ಎಂಬುವವರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ. ಇದೇ ವಿಡಿಯೊ ಹಂಚಿಕೊಂಡಿರುವ ಹಲವರು, ಮೆಟ್ರೊ ಭದ್ರತಾ ಸಿಬ್ಬಂದಿ ವರ್ತನೆಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿಡಿಯೊ ಚಿತ್ರೀಕರಣ ಮಾಡಿರುವ ಕಾರ್ತಿಕ್ ಅವರ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

'ಮೆಟ್ರೊ ಸಾರ್ವಜನಿಕರ ಸಾರಿಗೆ. ಗಲೀಜು ಬಟ್ಟೆ ಧರಿಸಿದ್ದಾರೆಂಬ ಕಾರಣಕ್ಕೆ ಪ್ರಯಾಣಿಕನನ್ನು ನಿಲ್ದಾಣದೊಳಗೆ ಬಿಡದಿರುವುದು ಖಂಡನೀಯ. ಭದ್ರತಾ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಸಾರ್ವಜನಿಕರು ಒತ್ತಾಯಿಸಿದ್ದರು.

ವಿಡಿಯೊ ಎಲ್ಲೆಡೆ ಹರಿದಾಡುತ್ತಿದ್ದಂತೆ ಎಚ್ಚೆತ್ತ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ಅಧಿಕಾರಿಗಳು, ಪ್ರಯಾಣಿಕನ ಕ್ಷಮೆ ಕೋರಿದ್ದಾರೆ. ಜೊತೆಗೆ, ಸೆಕ್ಯುರಿಟಿ ಗಾರ್ಡ್ ಯಾದವ್ ಅವರನ್ನು ಸೇವೆಯಿಂದ ವಜಾ ಮಾಡಿದ್ದಾರೆ. ಘಟನೆ ಬಗ್ಗೆ ವಿಸ್ತೃತ ತನಿಖೆ ಆದೇಶ ಹೊರಡಿಸಿದ್ದಾರೆ.

ಘಟನೆ ವಿವರ: 'ಉತ್ತರ ಭಾರತದ ವ್ಯಕ್ತಿಯೊಬ್ಬರು ಬೆಂಗಳೂರಿಗೆ ಬಂದಿದ್ದರು. ಕೆಲಸದ ನಿಮಿತ್ತ ರಾಜಾಜಿನಗರಕ್ಕೆ ಬಂದಿದ್ದ ಅವರು ಮೆಟ್ರೊ ಮೂಲಕ ಮೆಜೆಸ್ಟಿಕ್‌ಗೆ ಹೊರಟಿದ್ದರು. ತಲೆ ಮೇಲೆ ಬಟ್ಟೆಯ ಗಂಟು ಹೊತ್ತಿದ್ದರು. ಬಟ್ಟೆಗಳು ಗಲೀಜಾಗಿದ್ದವು. ಸರದಿಯಲ್ಲಿ ನಿಂತು ಟಿಕೆಟ್ ಪಡೆದು ನಿಲ್ದಾಣದೊಳಗೆ ತೆರಳುತ್ತಿದ್ದರು. ಪ್ರವೇಶ ದ್ವಾರದಲ್ಲಿ ಅವರನ್ನು ತಡೆದಿದ್ದ ಸಿಬ್ಬಂದಿ, 'ನಿನ್ನ ಬಟ್ಟೆಗಳು ಗಲೀಜಾಗಿವೆ. ನಿಲ್ದಾಣದೊಳಗೆ ಬಿಡುವುದಿಲ್ಲ. ಹೊರಗೆ ಹೋಗು' ಎಂದು ಏರುಧ್ವನಿಯಲ್ಲಿ ಬೆದರಿಸಿದ್ದರು. ಮುಗ್ಧರಾಗಿದ್ದ ವ್ಯಕ್ತಿಗೆ ದಿಕ್ಕು ತೋಚದಂತಾಗಿತ್ತು. ಹಿಂದಿ ಮಾತನಾಡುತ್ತಿದ್ದ ವ್ಯಕ್ತಿ, ಒಳಗೆ ಬಿಡುವಂತೆ ಬೇಡಿಕೊಂಡರೂ ಸಿಬ್ಬಂದಿ ಬಿಟ್ಟಿರಲಿಲ್ಲ' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ವ್ಯಕ್ತಿಯ ಸಹಾಯಕ್ಕೆ ಬಂದಿದ್ದ ಸಾರ್ವಜನಿಕರು, ಭದ್ರತಾ ಸಿಬ್ಬಂದಿಯನ್ನು ಪ್ರಶ್ನಿಸಿದ್ದರು. 'ವ್ಯಕ್ತಿ ರೈತರಂತೆ ಕಾಣುತ್ತಿದ್ದಾರೆ. ಬಟ್ಟೆ ಗಲೀಜು ಎಂಬ ಕಾರಣ ನೀಡಿ ತಡೆಯುತ್ತಿದ್ದೀರಾ? ಬಟ್ಟೆ ಗಲೀಜಾದರೆ ಬಿಡುವುದಿಲ್ಲವೆಂದು ಯಾರಾದರೂ ಹೇಳಿದ್ದಾರಾ? ಈ ಮೆಟ್ರೊ ಇರುವುದು ವಿಐಪಿಗಾ? ನಾವು ಚೆನ್ನಾಗಿ ಬಟ್ಟೆ ಧರಿಸಿದ್ದೇವೆ. ಹಾಗಾದರೆ ಉಚಿತವಾಗಿ ಒಳಗೆ ಬಿಡುತ್ತೀರಾ?' ಎಂದು ತರಾಟೆಗೆ ತೆಗೆದುಕೊಂಡಿದ್ದರು. 'ವ್ಯಕ್ತಿ ಬಳಿ ಅನುಮಾನಾಸ್ಪದ ವಸ್ತುಗಳು ಇದ್ದರೆ ಒಳಗೆ ಬಿಡಬೇಡಿ. ಆದರೆ, ಈ ವ್ಯಕ್ತಿ ಹತ್ತಿರ ಕೇವಲ ಬಟ್ಟೆಗಳಿವೆ. ಈ ಕಾರಣ ನೀಡಿ ಒಳಗೆ ಬಿಡದಿರುವುದು ದೊಡ್ಡ ತಪ್ಪು' ಎಂದು ಸಿಬ್ಬಂದಿಗೆ ಬಿಸಿ ಮುಟ್ಟಿಸಿದ್ದರು. 'ಇದಾದ ನಂತರ, ಸಾರ್ವಜನಿಕರೇ ವ್ಯಕ್ತಿಯನ್ನು ನಿಲ್ದಾಣದೊಳಗೆ ಕರೆದೊಯ್ದು ರೈಲು ಹತ್ತಿಸಿ ಕಳುಹಿಸಿದರು' ಎಂದು ಪ್ರತ್ಯಕ್ಷದರ್ಶಿ ತಿಳಿಸಿದರು.

ಮುಖ್ಯಾಂಶಗಳು

- ರಾಜಾಜಿನಗರ ಮೆಟ್ರೊ ನಿಲ್ದಾಣದಲ್ಲಿ ಫೆ.18ರಂದು ನಡೆದಿದ್ದ ಘಟನೆ
- ವ್ಯಕ್ತಿಯ ಸಹಾಯಕ್ಕೆ ಬಂದ ಸಾರ್ವಜನಿಕರು- ಭದ್ರತಾ ಸಿಬ್ಬಂದಿಗೆ ತರಾಟೆ
- ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊ- ಸಹಪ್ರಯಾಣಿಕರಿಂದ ಆಕ್ರೋಶ

ರಾಜಾಜಿನಗರ ಮೆಟ್ರೊ ನಿಲ್ದಾಣದಿಂದ ರೈಲಿನಲ್ಲಿ ಮೆಜೆಸ್ಟಿಕ್ ನಿಲ್ದಾಣಕ್ಕೆ ಬಂದ ಪ್ರಯಾಣಿಕ ತಮಗೆ ಸಹಾಯ ಮಾಡಿದ ಜನರಿಗೆ ಕೈ ಮುಗಿದು ಕೃತಜ್ಞತೆ ಸಲ್ಲಿಸಿದರು

ಸುದ್ದಿ 2 ನಿಮಿಷ

'ಮನೆಮನೆಗೆ ಕೊಳಾಯಿ ನೀರು' ಯೋಜನೆಗೆ ಚಾಲನೆ

ರಾಜರಾಜೇಶ್ವರಿನಗರ: ಚಲ್ಲಘಟ್ಟ, ಭೀಮನಕುಪ್ಪೆಯಲ್ಲಿ ₹2.25ಕೋಟಿ ವೆಚ್ಚದ 'ಮನೆಮನೆಗೆ ನಲ್ಲಿ ನೀರು ಸಂಪರ್ಕ ಕಲ್ಪಿಸುವ ಯೋಜನೆ' ಕಾಮಗಾರಿಕೆ ಶಾಸಕ ಎಸ್‌.ಟಿ.ಸೋಮಶೇಖರ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಮಂಚನಬೆಲೆ ಜಲಾಶಯದಿಂದ ಹಲವು ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿ ಪೂರ್ಣಗೊಂಡರೆ ಕ್ಷೇತ್ರದಲ್ಲಿ ಶೇ 60ರಷ್ಟು ಗ್ರಾಮೀಣ ಭಾಗದಲ್ಲಿನ ನೀರಿನ ಸಮಸ್ಯೆ ಬಗೆ ಹರಿಯಲಿದೆ ಎಂದರು. ರಾಮೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಿ.ವೇಣುಗೋಪಾಲ್ ಮಾತನಾಡಿದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಬಿ.ಎಚ್.ಪ್ರಭು, ಚಂದ್ರು, ಸದಸ್ಯ ಚೇತನ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಕೃಷ್ಣಪ್ಪ, ಗ್ರಾಮ ಪಂಚಾಯಿತಿ ಸದಸ್ಯ ಚೇತನ್ ಇದ್ದರು.

'354 ವಾಣಿಜ್ಯ ಮಳಿಗೆಗಳಿಗೆ ಪರವಾನಗಿ ಇಲ್ಲ'

ಬೆಂಗಳೂರು: ಬಿಬಿಎಂಪಿಯ ಪಶ್ಚಿಮ ವಲಯದ 44 ವಾರ್ಡ್‌ಗಳಲ್ಲಿ 354 ವಾಣಿಜ್ಯ ಮಳಿಗೆಗಳು 'ವ್ಯಾಪಾರ ಪರವಾನಗಿ' (ಟ್ರೇಡ್ ಲೈಸೆನ್ಸ್) ಇಲ್ಲದೆ ವಹಿವಾಟು ನಡೆಸುತ್ತಿವೆ.

2023ರ ಏಪ್ರಿಲ್‌ನಲ್ಲಿ 354 ಮಳಿಗೆಗಳು 'ಟ್ರೇಡ್ ಲೈಸೆನ್ಸ್'ಗೆ ಪಡೆಯಲು ಅರ್ಜಿ ಸಲ್ಲಿಸಿದ್ದವು. ಆದರೆ, ಈ ವಾಣಿಜ್ಯ ಮಳಿಗೆಗಳಿಗೆ ವಲಯ ಆರೋಗ್ಯ ಅಧಿಕಾರಿ ಡಾ. ಸವಿತಾ ಅವರು ಪರವಾನಗಿ ನೀಡದೆ, ಅರ್ಜಿ ತಿರಸ್ಕರಿಸಿದ್ದರು. ಆದರೂ ಈ ಮಳಿಗೆಗಳು ಕಳೆದ ವರ್ಷದ ಏಪ್ರಿಲ್‌ನಿಂದಲೇ ವಹಿವಾಟು ನಡೆಸುತ್ತಿವೆ. ಪಾಲಿಕೆಗೆ ಪರವಾನಗಿಯ ಶುಲ್ಕವೂ ಬಂದಿಲ್ಲ, ಅಕ್ರಮವಾಗಿ ವಹಿವಾಟು ನಡೆಯುತ್ತಿದ್ದರೂ ಅವರ ಮೇಲೆ ಕ್ರಮವಾಗಿಲ್ಲ.

'44 ವಾರ್ಡ್‌ಗಳಲ್ಲಿ ವಾಣಿಜ್ಯ ಮಳಿಗೆಗಳು, ಹೋಟೆಲ್‌ಗಳು, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು ಪರವಾನಗಿ ಪಡೆಯದೆ ವಹಿವಾಟುಗಳನ್ನು ನಡೆಸುತ್ತಲೇ ಇದ್ದಾರೆ. ಅವರಿಗೆ ಪರವಾನಗಿ ಕೊಟ್ಟಿದ್ದರೆ ಪಾಲಿಕೆಗೆ ನಾಲ್ಕೈದು ಕೋಟಿಯಷ್ಟು ಆದಾಯವಾದರೂ ಬರುತ್ತಿತ್ತು. ಅದನ್ನೂ ನೀಡದ ಡಾ. ಸವಿತಾ ಅವರು, ಅಕ್ರಮವಾಗಿ ನಡೆಯುತ್ತಿರುವ ಮಳಿಗೆಗಳ ಮೇಲೆ ಕ್ರಮವನ್ನೂ ಕೈಗೊಂಡಿಲ್ಲ. ಆದ್ದರಿಂದ ಆರೋಗ್ಯ ಅಧಿಕಾರಿ ಮೇಲೆ ಕ್ರಮ ಕೈಗೊಂಡು, ಪಾಲಿಕೆಗೆ ಉಂಟಾಗಿರುವ ನಷ್ಟವನ್ನು ಅವರಿಂದ ವಸೂಲಿ ಮಾಡಬೇಕು' ಎಂದು ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ಎನ್‌.ಆರ್. ರಮೇಶ್ ಅವರು ಆರೋಗ್ಯ ಇಲಾಖೆಯ ವಿಶೇಷ ಆಯುಕ್ತರು ಮತ್ತು ವಲಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

354 ಅರ್ಜಿಗಳ ಅರ್ಜಿ ಸಂಖ್ಯೆ, ಸಲ್ಲಿಸಿದ ದಿನಾಂಕ, ರದ್ದಾದ ದಿನ, ಯಾವ ಲಾಗಿನ್‌ನಿಂದ ರದ್ದಾಗಿದೆ ಎಂಬ ಎಲ್ಲ ವಿವರಗಳನ್ನು 'ಮಾಹಿತಿ ಹಕ್ಕು ಕಾಯ್ದೆಯಡಿ' ಪಡೆದಿರುವ ರಮೇಶ್ ಅವರು, ಅವುಗಳ ಸಹಿತ ದೂರು ನೀಡಿದ್ದಾರೆ.

ಅಣ್ಣಾಮಲೈ ವಿರುದ್ಧದ ಪ್ರಕರಣಕ್ಕೆ ತಡೆ

ನವದೆಹಲಿ (ಪಿಟಿಐ): ತಮಿಳುನಾಡಿನ ಬಿಜೆಪಿ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಅಣ್ಣಾಮಲೈ ಅವರು 2022ರ ಅಕ್ಟೋಬರ್‌ನಲ್ಲಿ ಯೂಟ್ಯೂಬ್ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ, ಪಟಾಕಿ ಸಿಡಿಸುವ ವಿಚಾರವಾಗಿ ಕ್ರೈಸ್ತ ಸಮುದಾಯದ ವಿರುದ್ಧ ದ್ವೇಷದ ಮಾತು ಆಡಿದ್ದರು ಎಂಬ ಆರೋಪ ಇದೆ.

ಅಣ್ಣಾಮಲೈ ಆಡಿದ್ದ ಮಾತುಗಳನ್ನು ಪರಿಶೀಲಿಸಿದ ವಿಭಾಗೀಯ ಪೀಠವು, 'ಮೇಲ್ನೋಟಕ್ಕೆ ಇದರಲ್ಲಿ ದ್ವೇಷದ ಮಾತುಗಳಿಲ್ಲ' ಎಂದಿದೆ. ಅಣ್ಣಾಮಲೈ ವಿರುದ್ಧ ದೂರು ಸಲ್ಲಿಸಿದ್ದ ವಿ. ಪೀಯೂಷ್‌ಗೆ ನೋಟಿಸ್ ಜಾರಿಗೆ ಪೀಠ ಆದೇಶಿಸಿದೆ.

ಪ್ರಕರಣದಲ್ಲಿ ತಮ್ಮ ವಿರುದ್ಧ ಹೊರಡಿಸಲಾಗಿರುವ ಸಮನ್ಸ್ ಪ್ರಶ್ನಿಸಿ ಮದ್ರಾಸ್ ಹೈಕೋರ್ಟ್‌ಗೆ ಅಣ್ಣಾಮಲೈ ಅರ್ಜಿ ಸಲ್ಲಿಸಿದ್ದರು. ಸಮನ್ಸ್ ರದ್ದುಗೊಳಿಸಲು ಮದ್ರಾಸ್ ಹೈಕೋರ್ಟ್ ನಿರಾಕರಿಸಿತ್ತು. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಅಣ್ಣಾಮಲೈ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಆರ್ಯ ಈಡಿಗ ಸಮುದಾಯದ ಪ್ರತಿಭಾವಂತರಿಗೆ ಚೆಕ್ ವಿತರಣೆ

ಪ್ರಜಾವಾಣಿ ವಾರ್ತೆ

ಮಾಗಡಿ: ಭಾರತ ಹುಣ್ಣಿಮೆ ಪ್ರಯುಕ್ತ ತಾಲ್ಲೂಕಿನ ಸೋಲೂರು ಆರ್ಯ ಈಡಿಗ ಮಹಾಸಂಸ್ಥಾನ ಮಠದ ಆವರಣದ ರೇಣುಕಾ ಯಲ್ಲಮ್ಮ ದೇವಾಲಯದಲ್ಲಿ ನಡೆದ ಜಾತ್ರೆಗೆ ಸೋಮವಾರ ತೆರೆ ಬಿದ್ದಿತು.

ಈಡಿಗ ಸಮುದಾಯದ ಪ್ರತಿಭಾವಂತ ಮಕ್ಕಳಿಗೆ ಜೆ.ಪಿ. ನಾರಾಯಣ ಸ್ವಾಮಿ ಪ್ರತಿಷ್ಠಾನದಿಂದ ಪ್ರತಿಭಾ ಪುರಸ್ಕಾರ ನಡೆಯಿತು. ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಜೆ.ಪಿ. ಸುಧಾಕರ್ ಮಕ್ಕಳಿಗೆ ಚೆಕ್ ವಿತರಿಸಿದರು.

ಬಳ್ಳಾರಿ, ರಾಯಚೂರು, ಕೊಪ್ಪಳ, ಕೋಲಾರ, ಕೊಡಗು, ದಾವಣಗೆರೆ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ, ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ 168 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಈಡಿಗ ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಪ್ರತಿ ವರ್ಷದಂತೆ ರಾಜ್ಯದಾದ್ಯಂತ ಅಧಿಕ ಅಂಕ ಗಳಿಸಿದ ಸಮುದಾಯದ ಪ್ರತಿಭಾವಂತ ಮಕ್ಕಳನ್ನು ಪ್ರತಿಷ್ಠಾನ ಸತ್ಕರಿಸಲಿದೆ. ಇದಕ್ಕಾಗಿ ಪ್ರತಿ ವರ್ಷ ₹60 ಲಕ್ಷದಿಂದ ₹ 80 ಲಕ್ಷ ವಿನಿಯೋಗಿಸಲಾಗುತ್ತಿದೆ ಎಂದರು.

ಆರ್ಯ ಈಡಿಗ ಮಹಾಸಂಸ್ಥಾನ ಮಠ, ನಾರಾಯಣ ಗುರು ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ಮಾತನಾಡಿ, 'ಈಡಿಗ ಸಮಾಜದ ಪೋಷಕರು ಮಕ್ಕಳಿಗೆ ಬಾಲ್ಯದಲ್ಲಿಯೇ ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವಾದರ್ಶ ಕಲಿಸುವ ಮೂಲಕ ಸಂಸ್ಕಾರ ನೀಡಬೇಕು' ಎಂದು ಸಲಹೆ ನೀಡಿದರು.

ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಜೆ.ಪಿ.ಸುಧಾಕರ್, ವಿಖ್ಯಾತಾನಂದ ಸ್ವಾಮೀಜಿ, ಲತಾ ಸುಧಾಕರ್, ಕುಸುಮ ಅಜಯ್, ಡಾ.ಲಕ್ಷ್ಮೀನರಸಯ್ಯ, ಪೂರ್ಣೇಶ್, ಮಂಜಪ್ಪ, ಪ್ರಭಾ ವಸಂತ್ ಇದ್ದರು.

ನಗರದಲ್ಲಿ ಇಂದು

ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ದಕ್ಷ ಹಾಗೂ ಪರಿಣಾಮಕಾರಿ ಆಡಳಿತ ನೀಡುವುದಕ್ಕಾಗಿ ಕುಲಪತಿಗಳ ಬಲವರ್ಧನೆ: ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ಎಸ್. ಆರ್. ನಿರಂಜನ, ಅಧ್ಯಕ್ಷತೆ: ಎಸ್. ಚಂದ್ರಶೇಖರ್ ಶೆಟ್ಟಿ, ಕೆ. ನಾರಾಯಣ ಗೌಡ, ಆಯೋಜನೆ: ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ, ಸ್ಥಳ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಸಭಾಂಗಣ, ಗಾಂಧಿನಗರ, ಬೆಳಿಗ್ಗೆ 9.30

ಕೆ.ವಿ. ಪ್ರಭಾಕರ್ ಅವರಿಗೆ 'ಅಭಿನಂದನಾ ಸಮಾರಂಭ': ಸತೀಶ್ ಜಾರಕಿಹೊಳಿ, ಅತಿಥಿ: ಹೇಮಂತ ನಿಂಬಾಳ್ಕರ್, ಅಧ್ಯಕ್ಷತೆ: ಶಿವಾನಂದ ತಗಡೂರು, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘ, ಸ್ಥಳ: ಕೆಯುಡಬ್ಲ್ಯುಜೆ ಸಭಾಂಗಣ, ಕಂದಾಯ ಭವನ, ಬೆಳಿಗ್ಗೆ 11

ಸಾಂಸ್ಕೃತಿಕ ರಂಗೋತ್ಸವ-2024: ಉದ್ಘಾಟನೆ: ನಟೇಶ್ ಬಿ.ಎಚ್., ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಅತಿಥಿಗಳು: ಬೇಲೂರು ರಘುನಂದನ್, ಚಂದ್ರಶೇಖರ್, 'ಸ್ವಪ್ನಸಿದ್ಧಿ' ನಾಟಕ ಪ್ರದರ್ಶನ: ಆಯೋಜನೆ: ರಂಗ ಕಳಸ ಕಲಾವಿದರು, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 50.30

ಕೋಚೆ ನೆನಪಿನ ದತ್ತಿ ಉಪನ್ಯಾಸ: ಕೋಚೆ ಅವರ 'ಬೇಡಿ ಕಳಚಿತು ದೇಶ ಒಡೆಯಿತು' ಕಾದಂಬರಿಯ ಒಳನೋಟ: ರಾಜಶೇಖರ ಮಠಪತಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 5

ಶ್ರೀ ಎಂ ಅವರಿಂದ 'ನಚಿಕೇತ ಎಂಬ ಸತ್ಯಕಾಮನ ಕಥೆ' ಕುರಿತು ಉಪನ್ಯಾಸ: ಆಯೋಜನೆ: ದಿ ಸತ್ಸಂಗ್ ಫೌಂಡೇಷನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸ್ವಾಮಿ ಪ್ರಣವಾನಂದಜೀ ಮಹಾರಾಜ್ ಜನ್ಮದಿನಾಚರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಭಾರತ್ ಸೇವಾಶ್ರಮ ಸಂಘದ ಸಂಸ್ಥಾಪಕ ಸ್ವಾಮಿ ಪ್ರಣವಾನಂದಜೀ ಮಹಾರಾಜ್ ಅವರ 129ನೇ ಜನ್ಮ ದಿನಾಚರಣೆ ಪ್ರಯುಕ್ತ ಸಂಘದ ಜಕ್ಕೂರು ಶಾಖೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಪ್ರಣವಾನಂದಜೀ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಭಕ್ತರು, ಹೋಮ-ಹವನ, ಭಜನೆ, ಗೀತ ಪ್ರವಚನ ಮತ್ತು ಯಜ್ಞ ಸೇರಿ ವಿವಿಧ ರೀತಿಯ ಪೂಜಾಕೈಂಕರ್ಯಗಳನ್ನು ನೆರವೇರಿಸಿದರು.

ಬಿಬಿಎಂಪಿ ಯಲಹಂಕ ವಲಯದ ಸಹಯೋಗದಲ್ಲಿ 410 ಮಹಿಳಾ ಪೌರಕಾರ್ಮಿಕರಿಗೆ ಸೀರೆ ಹಾಗೂ 210 ಪುರುಷ ಪೌರಕಾರ್ಮಿಕರಿಗೆ ಪ್ಯಾಂಟ್ ಮತ್ತು ಶರ್ಟ್ ವಿತರಿಸಲಾಯಿತು. ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ವೇಳೆ ಮಾತನಾಡಿದ ಭಾರತ್ ಸೇವಾಶ್ರಮ ಸಂಘದ ಜಕ್ಕೂರು ಶಾಖೆಯ ಮುಖ್ಯಸ್ಥ ಶಿವಪ್ರೇಮಾನಂದ ಸ್ವಾಮೀಜಿ, 'ಪ್ರಣವಾನಂದಜೀ ಅವರು ಕೆಲವೇ ವರ್ಷಗಳು ಬದುಕಿದ್ದರೂ, ಅವರ ತತ್ವ-ಸಿದ್ಧಾಂತಗಳು ನೂರು ವರ್ಷಗಳನ್ನು ಪೂರೈಸಿ, ಇಂದಿಗೂ ಸಮಾಜಕ್ಕೆ ಆದರ್ಶವಾಗಿವೆ' ಎಂದು ಸ್ಮರಿಸಿದರು.

ಜಕ್ಕೂರು ಶಾಖೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಖೆಯ ಮುಖ್ಯಸ್ಥರಾದ ಶಿವಪ್ರೇಮಾನಂದ ಸ್ವಾಮೀಜಿ, ಪೌರಕಾರ್ಮಿಕರಿಗೆ ಸೀರೆ ವಿತರಿಸಿದರು.

ಸಂಘದ ವತಿಯಿಂದ ಜಕ್ಕೂರು ಮತ್ತು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ನಿತ್ಯ ಅನ್ನದಾನ ನಡೆಯುತ್ತಿದೆ. ಬಡಮಕ್ಕಳ ಶಿಕ್ಷಣಕ್ಕೆ ನೆರವು ಹಾಗೂ ಆರೋಗ್ಯಸೇವೆ ನೀಡಲಾಗುತ್ತಿದೆ. ಅಲ್ಲದೆ ಯೋಗ, ಶಾಸ್ತ್ರೀಯ ಹಾಡುಗಾರಿಕೆ ತರಗತಿಗಳು ನಡೆಯುತ್ತಿವೆ. ಹೆಣ್ಣುಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂಖ್ಯೆ: ಬಿಡಿಎ/ಇಇ/ಎನ್‌ಪಿಕೆಎಲ್(ಡಬ್ಲ್ಯೂಎಸ್&ಯುಜಿಡಿ)/ಟೆಂಡರ್/139/2023-24
ದಿನಾಂಕ: 23.02.2024

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)

(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)
ಆಯುಕ್ತರು, ಬಿಡಿಎ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಎನ್‌ಪಿಕೆಎಲ್ (ಡಬ್ಲ್ಯೂಎಸ್&ಯುಜಿಡಿ) ವಿಭಾಗ, ಬೆಂಅಪ್ರಾ, ಫ್ಲಾಟ್ ಸಂ.3, ನೆಲಮಹಡಿ, 3ನೇ ಬ್ಲಾಕ್, 4ನೇ ಅಡ್ಡರಸ್ತೆ, ಸರ್ ಎಂವಿ ಬಡಾವಣೆ, ಬೆಂಗಳೂರು-560 0056, ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದ್ದಾರೆ. ಕೆಲಸದ ಹೆಸರು: (1) ಕಾಮಗಾರಿ ಹೆಸರು : **ಬೆಂಗಳೂರು ದಕ್ಷಿಣ ತಾಲ್ಲೂಕಿನ ಕನ್ನಹಳ್ಳಿ, ಹಳೆಬೈರೋಹಳ್ಳಿ, ಕೊಡಿಗೇಹಳ್ಳಿ, ಮಂಗನಹಳ್ಳಿ, ರಾಮಸಂದ್ರ ಹಾಗೂ ಕೊಮ್ಮಘಟ್ಟ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಒದಗಿಸುವುದರ ಮೂಲಕ ಮೂಲ ಸೌಕರ್ಯ ಒದಗಿಸುವುದು. (ಪ್ಯಾಕೇಜ್ -1)** ಅಂದಾಜು ಮೊತ್ತ : **ರೂ.30.796 ಕೋಟಿಗಳು.** ಇಎಂಡಿ: **ರೂ. 31.08 ಲಕ್ಷಗಳು**
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಎನ್‌ಪಿಕೆಎಲ್ (ಡಬ್ಲ್ಯೂಎಸ್&ಯುಜಿಡಿ) ವಿಭಾಗ, ಬೆಂಅಪ್ರಾ, ಬೆಂಗಳೂರು

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ
ಸಿಟ್ರಸ್ ಸಿಟಿ ಮೇಡೋಸ್, 4ನೇ ಸೆಕ್ಟರ್, ತುಮಕಲಹಳ್ಳಿ ಗ್ರಾಮ, ಬಿ.ಬಿ.ರಸ್ತೆ, ಚಿಕ್ಕಬಳ್ಳಾಪುರ-562101, Email ID: cuda.cbpur@gmail.com, ದೂರವಾಣಿ ಸಂಖ್ಯೆ: 08156-274501
ಕ್ರ.ಸಂ:ಚಿ.ನ.ಅ.ಪ್ರಾ/ನಿ.ಠೇ/20/2023-24 ದಿನಾಂಕ:22.02.2024

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ನಿಗದಿತ ಠೇವಣಿಯನ್ನು ಬ್ಯಾಂಕ್‌ನಲ್ಲಿ ಇಡಲು ಟೆಂಡರ್ ಕರೆಯಲಾಗಿದ್ದು, ಅರ್ಹ ಬ್ಯಾಂಕ್‌ಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್‌ನ್ನು ಸಲ್ಲಿಸಲು **ಕೊನೆಯ ದಿನಾಂಕ: 07.03.2024 ಸಂಜೆ: 4.00 ಗಂಟೆಗೆ. ಹರಾಜು ಪೂರ್ವಸಭೆ ದಿನಾಂಕ: 29.02.2024 ಬೆಳಿಗ್ಗೆ 11.00 ಗಂಟೆಗೆ. ಹರಾಜಿನ ದಿನಾಂಕ: 12.03.2024 ಮಧ್ಯಾಹ್ನ: 1.30 ಗಂಟೆಯಿಂದ ಸಂಜೆ: 3.00 ರವರೆಗೆ,** ಹೆಚ್ಚಿನ ವಿವರಗಳಿಗಾಗಿ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/- ಆಯುಕ್ತರು,
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:291/ಕೆಎಸ್‌ಎಂಸಿಎ/2023-24

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/26/2023-24 ದಿನಾಂಕ: 26-02-2024

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಶ್ರೀ ಎ. ರಾಮಕೃಷ್ಣಪ್ಪ ಬಿನ್ ಅಬ್ಬಯ್ಯ ||ಉ|| ಮುನಿಶಾಮಪ್ಪ ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ. 41/1 ರ ಪೈಕಿ 04 ಎಕರೆ 06 ಗುಂಟೆ ಮತ್ತು ಸ.ನಂ. 41/2 ರ ಪೈಕಿ 02 ಗುಂಟೆ ವಿಸ್ತೀರ್ಣದ ಜಮೀನುಗಳನ್ನು **"ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನುಗಳು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಕೃಷಿ ವಲಯಕ್ಕೆ ಕಾಯ್ದಿರಿಸಲಾಗಿರುತ್ತದೆ.** ಪ್ರಸ್ತಾಪಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/3867/ಅಡ್ವರ್ಟೋರ್/2023-24

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಆನೇಕಲ್ ತಾಲ್ಲೂಕು ಪಂಚಾಯಿತಿ
ಕರ್ನಾಟಕ ಸರ್ಕಾರ
ಹೆನ್ನಾಗರ ಗ್ರಾಮ ಪಂಚಾಯಿತಿ
ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ

ಶ್ರೀ ಸಿದ್ಧರಾಮಯ್ಯ
ಸನ್ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ

ಆನೇಕಲ್ ತಾಲ್ಲೂಕಿನ ಹೆನ್ನಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಕಾವೇರಿ ಕುಡಿಯುವ ನೀರು ಸಂಪರ್ಕ, ಅಂಗನವಾಡಿ ಕಟ್ಟಡಗಳು, ಶಾಲಾ ಕಟ್ಟಡ, ಹೈಮಾಸ್ಟ್ ದೀಪಗಳು, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ಅರ್ಹ ಫಲಾನುಭವಿಗಳಿಗೆ ರಾಸುಗಳ ವಿತರಣೆ, ಅಂಗವಿಕಲರಿಗೆ ತ್ರಿಚಕ್ರ ವಾಹನ ನೀಡಿಕೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಿ.ಕೆ.ಸುರೇಶ್ ಚಾಲನೆ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷೆ ಲಕ್ಷ್ಮೀ ಇದ್ದರು.

ತಿದ್ದುಪಡಿ:
ಹೆನ್ನಾಗರ ಪಂಚಾಯಿತಿ ವ್ಯಾಪ್ತಿಯ ಕಾರ್ಯಕ್ರಮದ ಜಾಹೀರಾತಿನಲ್ಲಿ ತಾಂತ್ರಿಕ ಕಾರಣಗಳಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳವರ ಭಾವಚಿತ್ರ ಪ್ರಕಟವಾಗಿರಲಿಲ್ಲ. ಇದಕ್ಕಾಗಿ ವಿಷಾಧಿಸುತ್ತೇವೆ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು-560 029. ಫೋನ್: 25536625, 25536789
IFT No. : ಕಹಾಮ/ಅಭಿ/NSS-Submersible pump set/1817/2023-24 ದಿನಾಂಕ: 26-02-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಂಡಳವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸರಬರಾಜು, ಅನುಷ್ಠಾನ ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ KPP portal ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ನಂದಿನಿ ವೀರ್ಯಾಣು ಕೇಂದ್ರಕ್ಕೆ Submersible pump set ಗಳ ಸರಬರಾಜು, ಚಾಲನೆಗೊಳಿಸುವ ಹಾಗೂ ಸಂಬಂಧಿಸಿದ ಕೆಲಸಗಳು.	1 ಜಾಬ್	21,250/-	3 ತಿಂಗಳು

1) ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 27-02-2024 ರಿಂದ 05-03-2024 ರ ಸಾಯಂಕಾಲ 4:00 ಗಂಟೆಯವರೆಗೆ. 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05-03-2024 ಸಾಯಂಕಾಲ 4:00 ಗಂಟೆಯವರೆಗೆ. 3) ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 06-03-2024 ರಂದು ಸಾಯಂಕಾಲ 4:30 ಗಂಟೆಗೆ.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಅಭಿಯಂತರ-2)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.
ಸಂಖ್ಯೆ: ಬೆಂಅಪ್ರಾ/ಅಸ/ಅಅ-1/ಟಿ-357/2023-24 ದಿನಾಂಕ: 23-02-2024

ಪ್ರಕಟಣೆ

ಸರ್ಕಾರದಿಂದ ಅನುಮೋದನೆಗೊಂಡಿರುವ ಮಹಾಯೋಜನೆ – 2015 ರ ವಲಯ ನಿಯಮಾವಳಿಯಲ್ಲಿನ Chapter 4.13.2 (i) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ಪ್ರೈಮರಿ ಶಾಲಾ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ಕೋರಿ** ಅರ್ಜಿ ಸಲ್ಲಿಸಿರುತ್ತಾರೆ. ನಕ್ಷೆ ಮಂಜೂರಾತಿ. ಕೋರಿರುವ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಪ್ರೈಮರಿ ಶಾಲಾ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಅಭಿಯಂತರ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ** ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಕಟ್ಟಡ ನಕ್ಷೆ ಮಂಜೂರಾತಿ ಕೋರಿರುವ ಉದ್ದೇಶ
ಶ್ರೀ. ಗೋಪಾಲರೆಡ್ಡಿ ಕಾಡುಬೀಸನಹಳ್ಳಿ. ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು.	ಆನೇಕಲ್	ಸರ್ಜಾಪುರ	ಹಲಸಹಳ್ಳಿ ತಿಪ್ಪಸಂದ್ರ	27	03-31	ಶೈಕ್ಷಣಿಕ (ಪ್ರೈಮರಿ ಶಾಲೆ)
				ಒಟ್ಟು	03-31	

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ಶೈಕ್ಷಣಿಕ (ಪ್ರೈಮರಿ ಶಾಲೆ) ಉದ್ದೇಶದ ಕಟ್ಟಡ ನಿರ್ಮಿಸುವುದರಿಂದ ಅಕ್ಕಪಕ್ಕದ ಗ್ರಾಮದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನಿನಲ್ಲಿ ಶೈಕ್ಷಣಿಕ (ಪ್ರೈಮರಿ ಶಾಲೆ) ಉದ್ದೇಶಕ್ಕೆ ಕಟ್ಟಡ ನಕ್ಷೆ ಮಂಜೂರಾತಿ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಚಿನ್ನಾಭರಣ ದೋಚಲು ಕೃತ್ಯ ಎಸಗಿದ್ದ ಆರೋಪಿ • ನಕಲಿ ಚಿನ್ನವೆಂದು ಹೇಳಿದ್ದ ವ್ಯಾಪಾರಿ

ವೃದ್ಧೆ ಹತ್ಯೆ: ನೆರೆಮನೆ ನಿವಾಸಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಠಾಣೆ ವ್ಯಾಪ್ತಿಯಲ್ಲಿ ಸುಶೀಲಮ್ಮ (70) ಎಂಬುವವರನ್ನು ಕೊಂದು ಮೃತದೇಹವನ್ನು ತುಂಡರಿಸಿ ಡ್ರಮ್)ನಲ್ಲಿಟ್ಟು ಪರಾರಿಯಾಗಿದ್ದ ಆರೋಪಿ ದಿನೇಶ್‌ನನ್ನು (40) ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಸರೋಜಮ್ಮ

ದಿನೇಶ್

ಅಪರಾಧ ಸುದ್ದಿ

‘ಬಸವನಪುರ ಮುಖ್ಯರಸ್ತೆಯ ನಿಸರ್ಗ ಲೇಔಟ್‌ನ ದಿನೇಶ್, ಚಿನ್ನಾಭರಣ ದೋಚುವ ಉದ್ದೇಶದಿಂದ ಸುಶೀಲಮ್ಮ ಅವರನ್ನು ಫೆ.24ರಂದು ಹತ್ಯೆ ಮಾಡಿ ಪರಾರಿಯಾಗಿದ್ದ. ಸುಶೀಲಮ್ಮ ಅವರ ತುಂಡರಿಸಿದ ಮೃತದೇಹ ಫೆ.25ರಂದು ಡ್ರಮ್‌ನಲ್ಲಿ ಪತ್ತೆಯಾಗಿತ್ತು. ಪ್ರಕರಣ ದಾಖಲಾದ ಕೆಲ ಗಂಟೆಗಳಲ್ಲಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಶಿವಕುಮಾರ್ ಗುಣಾರೆ ತಿಳಿಸಿದರು.

‘ಕೋವಿಡ್ ಲಾಕ್‌ಡೌನ್‌ಗೂ ಮುನ್ನ ದಿನೇಶ್, ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಕೋವಿಡ್ ನಂತರ ಕೆಲಸ ಬಿಟ್ಟಿದ್ದ. ಆಮೇಲೆ ಎಲ್ಲಿಯೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಪತ್ನಿಯೇ ಕೆಲಸ ಮಾಡಿ ಕುಟುಂಬ ನಿರ್ವಹಣೆ ಮಾಡುತ್ತಿದ್ದರು’ ಎಂದು ಹೇಳಿದರು.

ಬಿಜೆಪಿ ಅಭ್ಯರ್ಥಿ ಪರ ಪ್ರಚಾರ: ‘ಚಿಕ್ಕಬಳ್ಳಾಪುರದ ಸುಶೀಲಮ್ಮ ಅವರಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಸ್ವಂತ ಊರಿನಲ್ಲಿದ್ದ ಆಸ್ತಿ ಮಾರಿ ಬೆಂಗಳೂರಿಗೆ ಬಂದಿದ್ದ ಅವರು, ನಿಸರ್ಗ ಲೇಔಟ್‌ನಲ್ಲಿ ಪುತ್ರಿ ಜೊತೆ ನೆಲೆಸಿದ್ದರು. ಇನ್ನೊಬ್ಬ ಮಗಳು ಹಾಗೂ ಮಗ ಪ್ರತ್ಯೇಕವಾಗಿ ವಾಸವಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಿಜೆಪಿ ಕಾರ್ಯಕರ್ತನೆಂದು ಹೇಳಿಕೊಳ್ಳುತ್ತಿದ್ದ ದಿನೇಶ್, ನೆರೆಮನೆಯ ಸುಶೀಲಮ್ಮ ಅವರನ್ನು ಪರಿಚಯಿಸಿಕೊಂಡಿದ್ದ. ಇಬ್ಬರೂ ಕಳೆದ ಚುನಾವಣೆ ಸಂದರ್ಭದಲ್ಲಿ ಸ್ಥಳೀಯರ ಜೊತೆ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಮಾಡಿದ್ದರು. ಮಗಳ ಜೊತೆ ಆಗಾಗ ಜಗಳ ಮಾಡುತ್ತಿದ್ದ ಸುಶೀಲಮ್ಮ, ದಿನೇಶ್ ಮನೆಗೂ ಹೋಗಿ ಬರುತ್ತಿದ್ದರು’ ಎಂದು ಹೇಳಿವೆ.

₹ 20 ಲಕ್ಷ ಸಾಲ, ಆಭರಣ ನೋಡಿ ಸಂಚು: ‘ಆಧಾರ್’, ಪಡಿತರ ಚೀಟಿ, ವೃದ್ಧಾಪ್ಯ ಹಾಗೂ ವಿಧವಾ ವೇತನ ಮಾಡಿಸಿಕೊಡುವುದಾಗಿ ಆರೋಪಿ ದಿನೇಶ್ ಜನರಿಗೆ ಹೇಳುತ್ತಿದ್ದ. ಐಷಾರಾಮಿ ಜೀವನ ನಡೆಸಬೇಕೆಂದು ಬಯಸುತ್ತಿದ್ದ ಈತ, ₹ 20 ಲಕ್ಷ ಸಾಲ ಮಾಡಿದ್ದ. ನಿಗದಿತ ದಿನದಂದು ಸಾಲ ಮರು ಪಾವತಿ ಮಾಡಿರಲಿಲ್ಲ. ಸಾಲ ಕೊಟ್ಟವರು ಪೀಡಿಸಲಾರಂಭಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸುಶೀಲಮ್ಮ ಹೆಚ್ಚು ಚಿನ್ನಾಭರಣ ಧರಿಸುತ್ತಿದ್ದರು. ಮತ್ತಷ್ಟು ಆಭರಣ ಖರೀದಿಸಬೇಕೆಂದು ದಿನೇಶ್ ಬಳಿ ಹೇಳಿಕೊಂಡಿದ್ದರು. ಸುಶೀಲಮ್ಮ ಅವರನ್ನು ಕೊಂದು ಚಿನ್ನಾಭರಣ ದೋಚಿ, ಅದರ ಮಾರಾಟದಿಂದ ಬಂದ ಹಣದಲ್ಲಿ ಸಾಲ ತೀರಿಸಲು ದಿನೇಶ್ ಸಂಚು ರೂಪಿಸಿದ್ದ’ ಎಂದು ಹೇಳಿವೆ.

ದೇವಸ್ಥಾನಕ್ಕೆ ಹೋಗಲೆಂದು ಕರೆಸಿ ಹತ್ಯೆ: ‘ಆರೋಪಿ ದಿನೇಶ್‌ನ ಪತ್ನಿ ಹಾಗೂ ಮಕ್ಕಳು ಫೆ.24ರಂದು ಬೇರೆ ಊರಿಗೆ ಹೋಗಿದ್ದರು. ಒಂಟಿಯಾಗಿದ್ದ ದಿನೇಶ್, ದೇವಸ್ಥಾನಕ್ಕೆ ಹೋಗಿ ಬರೋಣವೆಂದು ಹೇಳಿ ಸುಶೀಲಮ್ಮ ಅವರನ್ನು ಮನೆಗೆ ಕರೆಸಿದ್ದ. ಸುಶೀಲಮ್ಮ ಅವರು ಸರಗಳು, ಬಳೆ, ಉಂಗುರ, ಕಿವಿಯೋಲೆ ಧರಿಸಿಕೊಂಡು ಮನೆಗೆ ಬಂದಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಕೆಲ ನಿಮಿಷ ಸುಶೀಲಮ್ಮ ಜೊತೆ ಮಾತನಾಡುತ್ತ ಕುಳಿತಿದ್ದ ಆರೋಪಿ, ಏಕಾಏಕಿ ದಾಳಿ ಮಾಡಿ ಉಸಿರುಗಟ್ಟಿಸಿ ಕೊಂದಿದ್ದ. ನಂತರ, ಆಭರಣ ಬಿಚ್ಚಿಕೊಂಡು ಮಾರಲು ಆಭರಣ ಮಳಿಗೆಯೊಂದಕ್ಕೆ ಹೋಗಿದ್ದ. ಆಗ ಮನೆಯಲ್ಲೇ ಮೃತದೇಹವಿತ್ತು’ ಎಂದು ಹೇಳಿವೆ.

ಕಿವಿಯೋಲೆ ಚಿನ್ನದ್ದಾಗಿತ್ತು

‘ಆರೋಪಿಯು ಮಾರಲು ಹೋದಾಗ ಚಿನ್ನಾಭರಣ ಪರೀಕ್ಷಿಸಿದ್ದ ಮಳಿಗೆ ವ್ಯಾಪಾರಿ, ಕಿವಿಯೋಲೆ ಹೊರತುಪಡಿಸಿ ಉಳಿದೆಲ್ಲವೂ ನಕಲಿ ಬಂಗಾರವೆಂದು ಹೇಳಿದ್ದರು. ಕಿವಿಯೋಲೆಯನ್ನಷ್ಟೇ ಅಡವಿಟ್ಟಿದ್ದ ಆರೋಪಿ, ಅದರ ಹಣದಲ್ಲಿ ಎರಡು ಡ್ರಮ್ ಖರೀದಿಸಿ ತಂದಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸುಶೀಲಮ್ಮ ಅವರ ದೇಹವನ್ನು ನಾಲ್ಕು ತುಂಡುಗಳಾಗಿ ಕತ್ತರಿಸಿದ್ದ ಆರೋಪಿ, ಡ್ರಮ್‌ನಲ್ಲಿ ಹಾಕಿದ್ದ. ಜೊತೆಗೆ, ನಕಲಿ ಚಿನ್ನಾಭರಣವನ್ನೂ ಅದರಲ್ಲಿ ಎಸೆದಿದ್ದ. ಫೆ. 25ರಂದು ನಸುಕಿನಲ್ಲಿ ಮನೆ ಸಮೀಪದಲ್ಲಿ ಡ್ರಮ್ ಇಟ್ಟು ಪರಾರಿಯಾಗಿದ್ದ’ ಎಂದು ಹೇಳಿವೆ.

ಶ್ವಾನದಳ, ಕ್ಯಾಮೆರಾ ಸುಳಿವು

‘ಆರೋಪಿ ಡ್ರಮ್ ಸಾಗಿಸುತ್ತಿದ್ದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಶ್ವಾನದಳದ ಸಿಬ್ಬಂದಿ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದರು. ಶ್ವಾನವು ಆರೋಪಿ ಮನೆ ಬಾಗಿಲು ಬಳಿ ಹೋಗಿ ನಿಂತಿತ್ತು. ಎರಡೂ ಸುಳಿವು ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗೋದಾಮಿನಲ್ಲಿ ಬೆಂಕಿ ನೆರೆ ಮನೆಗಳಿಗೆ ಹಾನಿ

ಕೆಂಗೇರಿ: ಕೆಂಗೇರಿ ಉಪ ನಗರದಲ್ಲಿ ಪ್ಲಾಸ್ಟಿಕ್ ಸಾಮಗ್ರಿ, ಬಟ್ಟೆ ಸಂಗ್ರಹ ಗೋದಾಮಿನಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಗೋದಾಮಿನಲ್ಲಿದ್ದ ಬಟ್ಟೆಗಳು ಸುಟ್ಟು ಕರಕಲಾಗಿವೆ. ಅಕ್ಕ-ಪಕ್ಕದ ಮನೆಗಳಿಗೂ ಹಾನಿಯಾಗಿದೆ.

ಹೊಯ್ಸಳ ವೃತ್ತದ ಬಳಿ ರಾಘವೇಂದ್ರ ಅವರು ಗೋದಾಮು ನಿರ್ಮಿಸಿ ಬಟ್ಟೆ, ಪ್ಲಾಸ್ಟಿಕ್ ಸಾಮಗ್ರಿ ವ್ಯಾಪಾರ ಮಾಡುತ್ತಿದ್ದರು. ಬಿಬಿಎಂಪಿಯಿಂದ ಅನುಮತಿ ಪಡೆದಿರಲಿಲ್ಲ. ಈ ಗೋದಾಮಿಗೆ 2022ರಲ್ಲಿ ಬಿಬಿಎಂಪಿಯವರು ಬೀಗ ಜಡಿದಿದ್ದರು. ಕೆಲ ತಿಂಗಳ ನಂತರ ಪುನಃ ವ್ಯಾಪಾರ ಆರಂಭಿಸಿದ್ದರು ಎಂದು ಸ್ಥಳೀಯರು ಹೇಳಿದರು.

‘ಗೋದಾಮಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿದಿದೆ. ಬೆಂಕಿಯ ತೀವ್ರತೆಗೆ ಅಕ್ಕ-ಪಕ್ಕದ ಎರಡು ಮನೆಗಳಿಗೆ ಹಾನಿಯಾಗಿದೆ. ಅಗ್ನಿ ಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಪ್ರಾಣಾಪಾಯ ಸಂಭವಿಸಿಲ್ಲ’ ಎಂದರು.

‘ನಿವೇಶನ ಹಾಗೂ ಗೋದಾಮು ಮಾಲೀಕರ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿದೆ’ ಎಂದು ದೂರಿದರು.

ಮಾರಾಟವಾಗಿದ್ದ ಶಿಶುವಿನ ರಕ್ಷಣೆ

ಮಂಡ್ಯ: ‘ಬೆಂಗಳೂರಿನಲ್ಲಿ ಮಾರಾಟ ಮಾಡಲಾಗಿದೆ’ ಎನ್ನಲಾದ ಒಂದೂವರೆ ತಿಂಗಳ ಹೆಣ್ಣು ಶಿಶುವನ್ನು ಮಳವಳ್ಳಿ ತಾಲ್ಲೂಕು ಮಡಹಳ್ಳಿದೊಡ್ಡಿ ಗ್ರಾಮದಲ್ಲಿ ಸೋಮವಾರ ರಕ್ಷಿಸಲಾಗಿದೆ.

ಪೊಲೀಸರು ಗ್ರಾಮದ ಬಸವರಾಜು ಅವರ ಮನೆಯಿಂದ ಮಗುವನ್ನು ವಶಕ್ಕೆ ಪಡೆದು ಮಕ್ಕಳ ಹಕ್ಕುಗಳ ರಕ್ಷಣಾಧಿಕಾರಿಗಳ ಸುಪರ್ದಿಗೆ ನೀಡಿದರು.

‘ಮಗು ಬಸವರಾಜ್ ಅವರ ಮನೆಗೆ ಮಗು ಹೇಗೆ ಬಂತು ಎಂಬ ಬಗ್ಗೆ ವಿಚಾರಣೆ ನಡೆದಿದೆ’ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಶ್ಮಿ ತಿಳಿಸಿದರು.

ಸರ್ಕಾರಿ ನೌಕರರ ಸಮ್ಮೇಳನ ಇಂದು

ಬೆಂಗಳೂರು: ಇಲ್ಲಿನ ಅರಮನೆ ಮೈದಾನದಲ್ಲಿ ಫೆ.27ರಂದು ಸರ್ಕಾರಿ ನೌಕರರ ಮಹಾ ಸಮ್ಮೇಳನ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಸಚಿವರು, ಅಧಿಕಾರಿಗಳು ಭಾಗವಹಿಸುವರು. ‘ಆಡಳಿತದಲ್ಲಿ ಕಾರ್ಯಕ್ಷಮತೆ’ ಕುರಿತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್, ‘ನೌಕರರ ಆರೋಗ್ಯ ಸುಧಾರಣೆ’ ಕುರಿತು ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ವಿಶೇಷ ಉಪನ್ಯಾಸ ನೀಡುವರು ಎಂದರು.

7ನೇ ವೇತನ ಆಯೋಗದಿಂದ ವರದಿ ಪಡೆದು, ಶಿಫಾರಸುಗಳನ್ನು ಜಾರಿಗೊಳಿಸಬೇಕು. ಹಳೆ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕು. ನೌಕರರ ವೇತನದಿಂದ ಕಡಿತ ಮಾಡುತ್ತಿರುವ ಶೇ 10ರಷ್ಟು ವಂತಿಗೆಯನ್ನು ನಿಲ್ಲಿಸಲು ಆದೇಶ ಹೊರಡಿಸಬೇಕು. ನೌಕರರು ಹಾಗೂ ಅವರ ಅವಲಂಬಿತ ಕುಟುಂಬಗಳ ಸದಸ್ಯರಿಗೆ ನಗದು ರಹಿತ ಆರೋಗ್ಯ ಚಿಕಿತ್ಸೆ ‘ಕರ್ನಾಟಕ ಆರೋಗ್ಯ ಸಂಜೀವಿನ ಯೋಜನೆ’ ಅನುಷ್ಠಾನ ಮಾಡಬೇಕು. ಖಾಲಿ ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಬೇಕು ಎಂದು ಸಮ್ಮೇಳನದಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ ಎಂದು ತಿಳಿಸಿದರು.



₹51 ಕೋಟಿ ವೆಚ್ಚ • ಕೆಂಪೇಗೌಡ ಬಿಡಿಎ ಬಡಾವಣೆ ಸುತ್ತಮುತ್ತಲಿನ ಗ್ರಾಮಗಳಿಗೆ ಸೌಲಭ್ಯ

14 ಹಳ್ಳಿಗೆ ಹೈಟೆಕ್ ಒಳಚರಂಡಿ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ (ಎನ್‌ಪಿಕೆಎಲ್) ಸುತ್ತಮುತ್ತಲಿನ ಗ್ರಾಮಗಳ ನಾಗರಿಕರ ಬಹುವರ್ಷಗಳಿಂದ ಬೇಡಿಕೆಗೆ ಬಿಡಿಎ ಇದೀಗ ಸ್ಪಂದಿಸಿದ್ದು, ಈ ಹಳ್ಳಿಗಳಲ್ಲಿ ಹೈಟೆಕ್ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಮುಂದಾಗಿದೆ.

ಸಾಂಪ್ರದಾಯಿಕ ಒಳಚರಂಡಿ ವ್ಯವಸ್ಥೆಯಿಂದ ಹೊರಬಂದಿರುವ ಬಿಡಿಎ, ಮೊದಲ ಬಾರಿಗೆ 'ಎಚ್‌ಡಿಪಿಇಎಂ' ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತಿದೆ. ಸಾಮಾನ್ಯವಾಗಿ ನಿರ್ಮಿಸಲಾಗುವ ಆರ್‌ಸಿಸಿ ಮ್ಯಾನ್‌ಹೋಲ್‌ಗಳಿಗೆ ಬದಲಾಗಿ, 'ಹೈಡೆನ್ಸಿಟಿ ಪಾಲಿಥೀನ್ ಮಷಿನ್' (ಎಚ್‌ಡಿಪಿಇಎಂ) ಅಳವಡಿಸಿಕೊಳ್ಳುತ್ತಿದೆ. ತುಕ್ಕು ಹಿಡಿಯುವ ಸಾಮಾನ್ಯ ಪೈಪುಗಳ ಬದಲಿಗೆ, ದೀರ್ಘಕಾಲ ಬಾಳಿಕೆ ಬರುವ ಡಬಲ್‌ವಾಲ್ ಕರುಗೇಟೆಡ್ (ಡಿಡಬ್ಲ್ಯುಸಿ) ಪೈಪ್‌ಗಳನ್ನು ಬಳಸಲಾಗುತ್ತಿದೆ.

ಎನ್‌ಪಿಕೆಎಲ್‌ನಲ್ಲಿ ಡಿಡಬ್ಲ್ಯುಸಿ ಪೈಪ್‌ಗಳನ್ನು ಬಳಸಿ ಪ್ರತಿ ನಿವೇಶನಕ್ಕೂ ಸಂಪರ್ಕವನ್ನು ಒದಗಿಸಲಾಗಿದೆಯಾದರೂ, ಎಚ್‌ಡಿಪಿಇಎಂ ವ್ಯವಸ್ಥೆ ಅಲ್ಲಿಲ್ಲ. ಬಡಾವಣೆ ವ್ಯಾಪ್ತಿಯ ಸುತ್ತಮುತ್ತಲಿನ 14 ಹಳ್ಳಿಗಳಿಗೆ ಎರಡು ಪ್ಯಾಕೇಜ್‌ನಲ್ಲಿ ₹51 ಕೋಟಿ ವೆಚ್ಚದಲ್ಲಿ ಹೊಸ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಮುಗಿದು ಮಾರ್ಚ್‌ನಲ್ಲಿ ಕಾರ್ಯಾದೇಶ ನೀಡಿದರೆ, ಮುಂದಿನ ಆರ್ಥಿಕ ವರ್ಷ ಮುಗಿಯುವ ಮುನ್ನ ಹಳ್ಳಗಳಲ್ಲಿ ಒಳಚರಂಡಿ ವ್ಯವಸ್ಥೆ ಕಾಮಗಾರಿ ಮುಗಿಯಲಿದೆ.

'ಬಿಡಿಎ ಆಯುಕ್ತ ಜಯರಾಮ್ ಅವರ ಮಾರ್ಗದರ್ಶನದಂತೆ ಹೊಸ ವ್ಯವಸ್ಥೆಯನ್ನು ಹಳ್ಳಿಗಳಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಎನ್‌ಪಿಕೆಎಲ್‌ನಲ್ಲಿ ವೆಚ್ಚವಾಗಿರುವಷ್ಟೇ ಈ ಹೈಟೆಕ್ ವ್ಯವಸ್ಥೆಗೂ ವ್ಯಯವಾಗಲಿದೆ. ಹೆಚ್ಚಿನ ಆರ್ಥಿಕ ವೆಚ್ಚವಿಲ್ಲದೆ, ಸಮಸ್ಯೆ ಬಾರದ ಒಳಚರಂಡಿ ಮಾರ್ಗವನ್ನು ರೂಪಿಸಲಾಗುತ್ತಿದೆ' ಎಂದು ಬಿಡಿಎ ಎಂಜಿನಿಯರ್‌ಗಳು ತಿಳಿಸಿದರು.

ರಸ್ತೆ ಅಗೆಯುವಂತಿಲ್ಲ: ಹೊಸ ಒಳಚರಂಡಿ ವ್ಯವಸ್ಥೆಯಲ್ಲಿ ನಾಗರಿಕರು ಸಂಪರ್ಕ ಪಡೆಯಲು ರಸ್ತೆ ಅಗೆಯುಂವತಿಲ್ಲ. ಬಿಡಿಎ ಮಾರ್ಗ ಅಳವಡಿಸುವ ಸಂದರ್ಭದಲ್ಲಿಯೇ ಪ್ರತಿ ಮನೆಗೂ ಸಂಪರ್ಕ ನೀಡಲು ವ್ಯವಸ್ಥೆ ಮಾಡಲಾಗುತ್ತದೆ. ಎಲ್ಲ ಕಾಮಗಾರಿ ಮುಗಿದ ಮೇಲೆ ನಾಗರಿಕರು ಅದಕ್ಕೆ ಮನೆಯ ಒಳಚರಂಡಿ ನೀರಿನ ಸಂಪರ್ಕ ನೀಡಿದರೆ ಸಾಕು ಎಂದು ಬಿಡಿಎ ಎಂಜಿನಿಯರ್‌ಗಳು ಮಾಹಿತಿ ನೀಡಿದರು.





ನೇರ ಸಂಸ್ಕರಣಾ ಘಟಕಕ್ಕೆ

ಮನೆಗಳಿಂದ ಹೊರಬರುವ ಒಳಚರಂಡಿ ನೀರು ಬಹುಸಂಪರ್ಕದ ಚೇಂಬರ್ ಮೂಲಕ ಎಚ್‌ಡಿಪಿಇಎಂಗೆ ಹರಿದು, ಅಲ್ಲಿಂದ ನೇರವಾಗಿ ಎನ್‌ಪಿಕೆಎಲ್‌ನಲ್ಲಿ ಸ್ಥಾಪಿಸಲಾಗಿರುವ ತ್ಯಾಜ್ಯ ನೀರು ಸಂಸ್ಕರಣ ಘಟಕಗಳಿಗೆ ರವಾನೆಯಾಗುತ್ತದೆ. ಹೀಗಾಗಿ, ಒಳಚರಂಡಿ ನೀರು ಎಲ್ಲೂ ಹೊರಭಾಗದಲ್ಲಿ ಹರಿಯದಂತೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕೆರೆಗಳಿಗೆ ಒಳಚರಂಡಿ ನೀರು ನೇರವಾಗಿ ಹರಿಯುವ ಸಾಧ್ಯತೆಯೂ ಇರುವುದಿಲ್ಲ. ಬದಲಿಗೆ ಸಂಸ್ಕರಿಸಿದ ನೀರು ಮಾತ್ರ ಈ ಭಾಗದಲ್ಲಿರುವ ಕೆರೆಗಳಿಗೆ ಹರಿಯುತ್ತದೆ ಎಂದು ಬಿಡಿಎ ಎಂಜಿನಿಯರ್‌ಗಳು ಹೇಳಿದರು.

'ಎಚ್‌ಡಿಪಿಇಎಂಗಳನ್ನು ಯಂತ್ರಗಳಿಂದ ಸ್ವಚ್ಛಗೊಳಿಸುವಂತೆ ರೂಪಿಸಲಾಗಿದ್ದು, ಈ ಪ್ರಕ್ರಿಯೆ ಸಾಮಾನ್ಯ ಮ್ಯಾನ್‌ಹೋಲ್‌ಗಳಲ್ಲಿನ ಪ್ರಕ್ರಿಯೆಗಿಂತ ಸುಲಭವಾಗಲಿದೆ. ಎಚ್‌ಡಿಪಿಇಎಂ ವ್ಯವಸ್ಥೆಯನ್ನು ಅತ್ಯಾಧುನಿಕವಾಗಿ ರೂಪಿಸಲಾಗಿದ್ದು, ಒಳಚರಂಡಿ ಮಾರ್ಗಕ್ಕೆ ಅಡೆತಡೆಯಾಗುವುದು ಕಡಿಮೆಯಾಗುತ್ತದೆ' ಎಂದರು.

ಕ್ರಿಕೆಟ್ ತರಬೇತುದಾರರಿಂದ ₹ 12.23 ಲಕ್ಷ ವಂಚನೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಯೋಜಿಸಿರುವ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ತಂಡಗಳ ಪರ ಆಡಲು ಅವಕಾಶ ಕೊಡಿಸುವ ಆಮಿಷವೊಡ್ಡಿ ₹ 12.23 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಾಜಾಜಿನಗರದ ಶ್ಯಾಮ್‌ಪ್ರಸಾದ್ ಅವರು ವಂಚನೆ ಸಂಬಂಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ ನೀಡಿರುವ ನಿರ್ದೇಶನ ಆಧರಿಸಿ, ಕ್ರಿಕೆಟ್ ತರಬೇತುದಾರ ಗೌರವ್ ಧಿಮಾನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರ ಮಗ, ಗಾಂಧಿನಗರದ ಶೇಷಾದ್ರಿ ರಸ್ತೆಯಲ್ಲಿರುವ ಸಂಸ್ಥೆಯೊಂದರಲ್ಲಿ ತರಬೇತಿಗೆ ಸೇರಿದ್ದರು. ಅಲ್ಲಿಯ ತರಬೇತುದಾರ ಗೌರವ್ ಧಿಮಾನ್, ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಆಡಲು ಅವಕಾಶ ಕೊಡಿಸುವುದಾಗಿ ಹೇಳಿ ಹಂತ ಹಂತವಾಗಿ ₹ 12.23 ಲಕ್ಷ ಪಡೆದಿದ್ದರು. ಯಾವುದೇ ಅವಕಾಶ ಕೊಡಿಸಿರಲಿಲ್ಲ. ಹಣ ವಾಪಸು ಕೇಳಿದಾಗ ಜೀವ ಬೆದರಿಕೆಯೊಡ್ಡಿದ್ದರು ಎಂಬುದಾಗಿ ದೂರುದಾರರು ಆರೋಪಿಸುತ್ತಿದ್ದಾರೆ' ಎಂದು ತಿಳಿಸಿವೆ.

ಪ್ರೌಢಶಾಲಾ ಶಿಕ್ಷಕರ ಬಡ್ತಿಗೆ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರೌಢಶಾಲೆಗಳ ಸಹ ಶಿಕ್ಷಕರಿಗೆ ಮುಖ್ಯ ಶಿಕ್ಷಕರು ಅಥವಾ ತತ್ಸಮಾನ 'ಗ್ರೂಪ್ ಬಿ' ವೃಂದಕ್ಕೆ ಬಡ್ತಿ ನೀಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜ್ಯೇಷ್ಠತಾ ಪಟ್ಟಿ ಪ್ರಕಟಿಸಿದೆ.

2008ರ ನಂತರ ಪ್ರೌಢಶಾಲೆಗಳಲ್ಲಿ ಸಹಶಿಕ್ಷಕರಾಗಿ ಸೇವೆಗೆ ಸೇರಿದ ಹಾಗೂ ನ್ಯಾಯಾಲಯಗಳಲ್ಲಿ ಪ್ರಕರಣ ಬಾಕಿ ಇರುವ ಶಿಕ್ಷಕರನ್ನು ಹೊರತುಪಡಿಸಿ ಉಳಿದ ಶಿಕ್ಷಕರಿಗೆ ಖಾಲಿ ಹುದ್ದೆಗಳ ಆಧಾರದಲ್ಲಿ ವಿಶೇಷ ಬಡ್ತಿ ನೀಡಲಾಗುತ್ತಿದೆ. ಮೊದಲ ಹಂತದಲ್ಲಿ ಬೆಂಗಳೂರು, ಮೈಸೂರು ವಿಭಾಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲಾಗುತ್ತದೆ. ಪ್ರತಿ ಶಿಕ್ಷಕರ ಪ್ರಸ್ತಾವನೆಯನ್ನು ಡಿಡಿಪಿಐ ದೃಢೀಕರಣದೊಂದಿಗೆ ಮಾರ್ಚ್ 11ರ ಒಳಗಾಗಿ ಆಯುಕ್ತರ ಕಚೇರಿಗೆ ಸಲ್ಲಿಸಲು ಶಾಲಾ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರು ಸೂಚಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

WANTED MARKETING executives, To Promote JEE/NEET/KCET Books in PU colleges,send resume gsnedutech@gmail.com Ph: 9618418601

PUBLIC NOTICE

ಸಾರ್ವಜನಿಕ ಪ್ರಕಟಣೆ

ಫಾರಂ. ನಂ. ಐಎನ್‌ಸಿ–26

30ನೇ ಕಂಪನಿಗಳು (ಸಂಯೋಜನೆ) ನಿಯಮಗಳು, 2014ರ ನಿಯಮಕ್ಕೆ ಅನುಸಾರವಾಗಿ ಕಂಪನಿಯ ನೋಂದಾಯಿತ ಕಛೇರಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬದಲಾಯಿಸಲು ಜಾಹೀರಾತನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಕುರಿತು ಪ್ರಾದೇಶಿಕ ನಿರ್ದೇಶಕರ ಕಛೇರಿ, ಸೌತ್ ಈಸ್ಟ್ ವಲಯ, ಹೈದರಾಬಾದ್. [ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 13ರ ಉಪವಿಭಾಗ (4) ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು, 2014ರ ನಿಯಮ 30ರ ನಿಯಮ (5)ರ ನಿಯಮ (ಎ) ಇದರ ಅನುಸಾರವಾಗಿ ಮತ್ತು ಯುವಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನೋಂದಾಯಿತ ಕಛೇರಿ 677, 13ನೇ ಅಡ್ಡರಸ್ತೆ, ಮೊದಲನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು– 560102, ಕರ್ನಾಟಕ, ಭಾರತ ಅರ್ಜಿದಾರರು, ಈ ಮೂಲಕ ತಿಳಿಸುವುದೇನೆಂದರೆ, ಕಂಪನಿ ಕಾಯ್ದೆ 2013ರ ಸೆಕ್ಷನ್ 13ರ ಅಡಿಯಲ್ಲಿ ಮೇಲ್ಕಂಡ ಕಂಪನಿಯು, ಶುಕ್ರವಾರ, ದಿನಾಂಕ 23–02–2024 ರಂದು ನಡೆದ ಸಾಮಾನ್ಯ ಸಭೆಯಲ್ಲಿ ತನ್ನ ನೋಂದಾಯಿತ ಕಛೇರಿಯನ್ನು "ಕರ್ನಾಟಕ ರಾಜ್ಯ" ದಿಂದ "ಗುಜರಾತ್ ರಾಜ್ಯ"ಕ್ಕೆ ಬದಲಾಯಿಸಲು ಪ್ರಸ್ತಾಪಿಸಲಾಗಿದ್ದು, ಈ ಸಂಬಂಧ ಪ್ರಾದೇಶಿಕ ನಿರ್ದೇಶಕರಿಗೆ ಅರ್ಜಿ ಸಲ್ಲಿಸುವ ಕುರಿತು ಈ ಮೂಲಕ ಸಾರ್ವಜನಿಕರಿಗೆ ಸೂಚನೆ ನೀಡಲಾಗಿದೆ. ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾವಿತ ಬದಲಾವಣೆಯಿಂದ ಪರಿಣಾಮಕ್ಕೊಳಪಡುವ ಯಾವುದೇ ವ್ಯಕ್ತಿಯು, ಹೂಡಿಕೆದಾರರು MCA–21 ಪೋರ್ಟಲ್ (www.mca.gov.in) ನಲ್ಲಿ Investor Complaint Formನಲ್ಲಿ ಅವನ/ಅವಳ ಆಕ್ಷೇಪಣೆಗಳು, ಆಸಕ್ತಿಯ ಸ್ವರೂಪ ಮತ್ತು ವಿರೋಧದ ಆಧಾರಗಳು ಹಾಗೂ ಇವುಗಳನ್ನು ಒಳಗೊಂಡ ಅಫಿಡವಿಟ್‌ನ್ನು ಸಲ್ಲಿಸಲು ಅವಕಾಶವಿರುತ್ತದೆ. ಅಥವಾ ಇವುಗಳನ್ನು ಒಳಗೊಂಡ ಅಫಿಡವಿಟ್‌ನ್ನು 3ನೇ ಮಹಡಿ, ಕಾರ್ಪೋರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಯನ್ನಾರಂ ಗ್ರಾಮ, ಹಯಾತ್‌ನಗರ ಮಂಡಲ್, ರಂಗರೆಡ್ಡಿ ಜಿಲ್ಲೆ, ಹೈದರಾಬಾದ್ – 500068 ಇಲ್ಲಿಗೆ ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 14 ದಿನಗಳ ಒಳಗೆ ಕಳುಹಿಸಬಹುದು ಹಾಗೂ ಇದರ ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ಕೆಳಗೆ ನಮೂದಿಸಿದ ವಿಳಾಸಕ್ಕೆ ಸಲ್ಲಿಸಬಹುದು.

ಕಛೇರಿ ವಿಳಾಸ: 677, 13ನೇ ಅಡ್ಡರಸ್ತೆ, ಮೊದಲನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು – 560102, ಕರ್ನಾಟಕ, ಭಾರತ

ಅರ್ಜಿದಾರರಿಗೆ ಮತ್ತು ಅರ್ಜಿದಾರರ ಪರವಾಗಿ ವಿಶಾಲ್ ಅಜಿತ್‌ಬಾಯ್ ಮೆಹ್ತ ನಿರ್ದೇಶಕರು (ಡಿನ್ : 03093563) ವಿಳಾಸ: ಅಮಿಜ್ಯೋತ್ ಕಟ್ಟಡ, ಪರಿಮಾಲ್ ಸೊಸೈಟಿ, ದಿವಾ ಆಸ್ಪತ್ರೆ ಎದುರು, ಎಲ್ಲೀಸ್‌ಬ್ರಿಡ್ಜ್, ಅಹಮದಾಬಾದ್–380006, ಗುಜರಾತ್, ಇಂಡಿಯಾ

ದಿ: 23–02–2024 ಸ್ಥಳ: ಬೆಂಗಳೂರು.

ಕ್ಲಾಸಿಫೈಡ್ಸ್ CONNECT

Grand Flea Market Presents

ಇಂಡಿಯನ್ ಆರ್ಟಿಸನ್ ಬಜಾರ್

Indian Artisan Bazaar

Arts, Crafts, Handlooms & Lifestyle Exhibition

Date: 23rd February 2024 to 3rd March 2024

10 Days Exhibition

Timings: 11 am to 7 pm

Karnataka Chitrakala Parishath Kumara Krupa Road, Bengaluru

Djembe Live Performance | 2nd March 2024 5.30 PM - 7.00 PM

Puppet Show Live Performance | 3rd March 2024 5.00 PM - 6.30 PM

10 DAYS EXHIBITION | 100+ STALLS | Live PERFORMANCE | Entry FREE

Grand Flea Market

For Details Contact: 6364685716 / 9036658774

BUSINESS

Business to Business

Business

WANTED BUSINESS Partners Saree Business Contact: 8892501007/ 9606701007

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted&, Agriculture Lands Call:7204995189

REAL ESTATE SELLING

Sites

Yalahanka New Town

PLOT FOR Sale at Yelahanka, Atturu Layout. 1252sqft. at 7k/sqft. sl.nego. Brokers excuse. Ph-8050635154

PERSONAL

Announcements

ANNOUNCEMENT

I, **KRISHNAPPA LOKESH,** S/o Late Krishnappa, aged 52 years, R/at No.26/3, Basavanapura, Near Basavanapura Govt. School, 24th Cross, K.R.Puram, Bengaluru-36 have changed my name to **RAFEEQ AHMED** religion from **Hindu to Muslim,** vide affidavit dated 19/02/2024 before notary K. Kanchivaradaraju, Bengaluru.

Congratulations

ಪಿಹೆಚ್ ಡಿ ಪ್ರದಾನ

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಹಿರೇಮಣಕಟ್ಟಿ ಗ್ರಾಮದ **ಡಾ.ಚಂದ್ರಶೇಖರ ವಿರುಪಾಕ್ಷಗೌಡ ಪಾಟೀಲ** ಇವರು ಡಾ.ಸುಮಾ ಎಂ.ಎಸ್. ಅವರ ಮಾರ್ಗದರ್ಶನದಲ್ಲಿ 'ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್' ಇಂಜಿನಿಯರಿಂಗ್‌ನಲ್ಲಿ ಮಂಡಿಸಿರುವ **"ಥ್ರೂ ಸಿಲಿಕಾನ್ ವಯಾ ಮಾಡೆಲಿಂಗ್ ಆ್ಯಂಡ್ ರಿಲೇಟೆಡ್ ಥರ್ಮಲ್ ಸಲ್ಯೂಷನ್ ಫಾರ್ ದಿ 3-ಡಿ ಐಸೀಜ್"** ಎಂಬ ಪ್ರಬಂಧವನ್ನು ಮಂಡಿಸಿದ್ದು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ 'ಡಾಕ್ಟರ್ ಆಫ್ ಫಿಲಾಸಫಿ' ಪದವಿ ಲಭಿಸಿರುತ್ತದೆ.

Change of Name

CHANGE OF NAME

I, **SHYLESH D N,** Residing at No.16, 1st Main, 4th Cross, Hanumaiah Layout, Kodigehalli, Bangalore-560092 have changed my name to **NITESH MUKKATI** vide affidavit dated 06/03/2014 before notary G.P.Chaya, Bangalore. Henceforth I shall be know as **NITESH MUKKATI** only

I, PRABHAVATHY S S W/o Rudresh N have changed my name to PRABHAVATHI S S vide affidavit dated: 26/2/2024 Before Notary Shreeshail.B Gobbani Bangalore.

I, MOHAMMED Hanief A S/o Mohammed Akram, Residing at No 27/28 2nd Floor 1st Cross Near G K W Shambavinagar Bangalore Karnataka 560058, have changed my name to Mohammed Hanief vide affidavit dated 21/02/2024 sworn before Notary D.S.Sathyanarayana, Bengaluru

SHABIRA SHUJAU MOHAMMED #40 4th floor 5th cross Vinayakanagar JP Nagar 5th phase Bengaluru-78, have changed my name to R. SHABIRA

I, PRADEEP BORANNAVAR S/o Ashok Sidram Borannavar have changed my name to PRADEEP ASHOK BORANNAVAR vide affidavit dated: 26/2/2024 Before Notary Shreeshail.B Gobbani Bangalore.

I, SRINIVAS SUNIL (Old Passport No.L6150718) S/o Satyanarayana Vattikuti R/o#308 Abhee Nakshatra, Early Bird Layout, Muller Gunjur, Bengaluru- 560087 have changed my Name to SRINIVAS SUNIL VATTIKUTI vide affidavit dated 26.02.2024 before Notary L.Puttaraju Bengaluru.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ

RECRUITMENT

BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY

@ 2481/-* FOR 15 WORDS

www.dhclassifieds.com

BOOK NOW

For more details contact:
+91 9886213331 | +91 9901641752
+91 9845114560 | +91 9900428036
+91 9731810277 | 080 45557163/164

*Conditions apply

ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವ ಕ್ರಮ: ಕಾಂಗ್ರೆಸ್ • ಆಹ್ವಾನಿಸಿದ್ದೇ ಅಪರಾಧ : ಬಿಜೆಪಿ

ನಿತಾಶಾಗೆ ನಿರ್ಬಂಧ: ತೀವ್ರ ಆಕ್ಷೇಪ

ಬೆಂಗಳೂರು (ಪಿಟಿಐ): ಕರ್ನಾಟಕ ಸರ್ಕಾರದ ಅಧಿಕೃತ ಆಹ್ವಾನದ ಮೇರೆಗೆ ಬೆಂಗಳೂರಿಗೆ ಆಗಮಿಸಿದ್ದ ಬ್ರಿಟನ್‌ನ ಉಪನ್ಯಾಸಕಿ, ಭಾರತ ಮೂಲದ ನಿತಾಶಾ ಕೌಲ್ ಅವರು ನಗರ ಪ್ರವೇಶಿಸದಂತೆ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನನಿಲ್ದಾಣದಲ್ಲಿಯೇ ತಡೆದ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ನಿತಾಶಾ ಕೌಲ್

ಈ ಬೆಳವಣಿಗೆಯು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಒಕ್ಕೂಟ ವ್ಯವಸ್ಥೆಯ ನೀತಿಗಳ ಮೇಲಿನ ಹಲ್ಲೆ ಎಂದು ಕಾಂಗ್ರೆಸ್ ಪಕ್ಷ ಪ್ರತಿಕ್ರಿಯಿಸಿದ್ದರೆ, 'ನಿತಾಶಾ ಕೌಲ್ ಭಾರತ ವಿರೋಧಿ' ಎಂದು ಬಿಜೆಪಿ ಟೀಕಿಸಿದೆ.

ಬ್ರಿಟನ್‌ನ ವೆಸ್ಟ್‌ಮಿನಿಸ್ಟರ್ ವಿಶ್ವವಿದ್ಯಾಲಯದ ಕಾಶ್ಮೀರಿ ಪಂಡಿತ್ ವಿಭಾಗದ ಉಪನ್ಯಾಸಕಿಯಾಗಿರುವ ಪ್ರೊ. ನಿತಾಶಾ ಕೌಲ್ ಅವರನ್ನು, ರಾಜ್ಯ ಸರ್ಕಾರ ನಗರದಲ್ಲಿ ಏರ್ಪಡಿಸಿದ್ದ 'ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶ'ಕ್ಕೆ ಆಹ್ವಾನಿಸಿತ್ತು. ಇವರನ್ನು ವಿಮಾನ ನಿಲ್ದಾಣದಲ್ಲಿಯೇ ತಡೆದಿದ್ದ ಅಧಿಕಾರಿಗಳು ವಾಪಸ್ ಕಳುಹಿಸಿದ್ದರು. ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಈ ಕ್ರಮ ಕೈಗೊಂಡಿದ್ದಾಗಿಯೂ ಹೇಳಿದ್ದರು.

ಈ ಮಧ್ಯೆ ಭಾರತ ವಿರೋಧಿ ಎಂಬ ಬಿಜೆಪಿಯ ಟೀಕೆಯನ್ನು 'ಅಸಂಬದ್ಧ' ಎಂದು ನಿತಾಶಾ ಕೌಲ್ ಅವರು ಹೇಳಿದ್ದಾರೆ. 'ಎಕ್ಸ್' ಸಾಮಾಜಿಕ ಮಾಧ್ಯಮದಲ್ಲಿ ಈ ಕುರಿತು ಪ್ರತಿಕ್ರಿಯಿಸಿದ್ದು, 'ಅಧಿಕಾರದಲ್ಲಿರುವವರು ಹೆದರುವಂತಹ ಪ್ರಗತಿಪರ ಚಿಂತನೆಯುಳ್ಳ ಮಹಿಳೆ ನಾನು' ಎಂದು ಪ್ರತಿಪಾದಿಸಿದ್ದಾರೆ.

ಸಚಿವ ಎಚ್.ಸಿ.ಮಹದೇವಪ್ಪ ಅವರು, 'ವ್ಯಕ್ತಿಯ ಮೂಲಭೂತ ಹಕ್ಕು ಹಾಗೂ ರಾಜ್ಯ ಸರ್ಕಾರದ ಹಕ್ಕುಗಳನ್ನು ಹೇಗೆ ಹತ್ತಿಕ್ಕಲಾಗುತ್ತಿದೆ ಎಂಬುದಕ್ಕೆ ಈ ಘಟನೆ ನಿದರ್ಶನ' ಎಂದು ಪ್ರತಿಕ್ರಿಯಿಸಿದ್ದಾರೆ.

> **ನಿತಾಶಾ ಕೌಲ್ ಅವರನ್ನು ಆಹ್ವಾನಿಸುವ ಮೂಲಕ ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರ ಕ್ಷಮಿಸಲಾಗದ ಅಪರಾಧ ಮಾಡಿದೆ. ಕೌಲ್ ಅವರನ್ನು ಆಹ್ವಾನಿಸಿದ್ದು ಖಂಡನೀಯ**
> **ಬಿ.ವೈ.ವಿಜಯೇಂದ್ರ,** ರಾಜ್ಯ ಬಿಜೆಪಿ ಅಧ್ಯಕ್ಷ

> **ನಿತಾಶಾ ಕೌಲ್ ಅವರನ್ನು ವಾಪಸ್ ಕಳುಹಿಸಿದ ಕ್ರಮ ಸಮರ್ಥನೀಯ. ನಿತಾಶಾ ಅವರು ತಾವು ಬಯಸಿದ್ದನ್ನು ಮಾಡಿಕೊಳ್ಳಲಿ. ಆದರೆ, ಅದು, ಭಾರತದ ಹೊರಗಡೆ ಮಾತ್ರ**
> **ಮೋಹನದಾಸ ಪೈ,** ಇನ್ಫೊಸಿಸ್ ಸಂಸ್ಥೆಯ ಮಾಜಿ ಅಧಿಕಾರಿ

> **ವೈಯಕ್ತಿಕವಾದ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವಂತಹ ನಿರಂಕುಶವಾದ ಆಡಳಿತ ನಮ್ಮ ದೇಶದಲ್ಲಿದೆಯೇ?**
> **ರಿಜ್ವಾನ್ ಅರ್ಷದ್,** ಕಾಂಗ್ರೆಸ್ ಶಾಸಕ

> **'ನಾನು ಭಾರತ ವಿರೋಧಿಯೂ ಅಲ್ಲ, ಗ್ಯಾಂಗ್‌ನ ಸದಸ್ಯೆಯೂ ಅಲ್ಲ**
> **ನಿತಾಶಾ ಕೌಲ್**
> ಪ್ರೊಫೆಸರ್, ವೆಸ್ಟ್‌ಮಿನಿಸ್ಟರ್ ವಿ.ವಿ., ಲಂಡನ್

'ದೇಶದಲ್ಲಿ ಸಾಂವಿಧಾನಿಕ ಚಿಂತನೆಗಳಿಗೆ ಎದುರಾಗಿರುವ ಸವಾಲುಗಳಿಗೆ ಇದು ಉದಾಹರಣೆ. ಎಲ್ಲ ನಾಗರಿಕರು ಇಂಥ ಪ್ರಕರಣಗಳನ್ನು ಎದುರಿಸಲು, ಸಂವಿಧಾನ ರಕ್ಷಿಸಲು ಒಗ್ಗಟ್ಟಾಗಬೇಕಾಗಿದೆ' ಎಂದರು.

ಸಮಾವೇಶವನ್ನು ಆಯೋಜಿಸುವುದು ಹಾಗೂ ಅದಕ್ಕಾಗಿ ರಾಷ್ಟ್ರೀಯ ಹಿತಾಸಕ್ತಿ ಮತ್ತು ರಾಜ್ಯದ ಅಭಿವೃದ್ಧಿಯನ್ನು ಅರ್ಥಪೂರ್ಣವಾಗಿ ಬಿಂಬಿಸುವ ಪರಿಣತರನ್ನು ಆಹ್ವಾನಿಸುವುದು ರಾಜ್ಯ ಸರ್ಕಾರದ ಹಕ್ಕು. ಇದು ಸಂವಿಧಾನದತ್ತವಾಗಿದೆ. ಕೇಂದ್ರ ಸರ್ಕಾರ ಇದನ್ನು ಅಲಕ್ಷಿಸಿದೆ ಎಂದು ಹೇಳಿದರು.

ರಾಜ್ಯಸಭಾ ಸದಸ್ಯ, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ಅವರೂ ಈ ಬೆಳವಣಿಯ ಬಗ್ಗೆ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಪ್ರೊಫೆಸರ್ ಅವರನ್ನು ಏಕೆ ವಾಪಸು ಕಳುಹಿಸಲಾಯಿತು ಎಂದು ಕೇಂದ್ರ ಸರ್ಕಾರ ವಿವರಣೆ ನೀಡಲಿ ಎಂದು ಒತ್ತಾಯಿಸಿದ್ದಾರೆ.

'ಎಕ್ಸ್'ನಲ್ಲಿ ಈ ಕುರಿತಂತೆ ಅವರು, 'ಕ್ಷಮಿಸಿ, ನಿತಾಶಾ ಕೌಲ್. 'ಪ್ರಜಾಪ್ರಭುತ್ವದ ತಾಯಿ' ನಿಮಗೆ ಪ್ರವೇಶ ನಿರಾಕರಿಸಿದೆ. ಬೆಂಗಳೂರಿನ ಸಮಾವೇಶದಲ್ಲಿ ನಿಮ್ಮ ಮಾತುಗಳನ್ನು ಕೇಳಲು ನಾವು ಕಾಯುತ್ತಿದ್ದೆವು. ಇವರನ್ನು ಏಕೆ ವಾಪಸ್ ಕಳುಹಿಸಲಾಯಿತು ಎಂದು ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರು ದಯವಿಟ್ಟು ವಿವರಣೆ ನೀಡುವರೇ?' ಎಂದು ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಭಾರತದ ಸಾಗರೋತ್ತರ ಪ್ರಜೆಯಾಗಿರುವ ನಿತಾಶಾ ಕೌಲ್ ಅವರು 'ಭಯೋತ್ಪಾದಕರ ಬಗ್ಗೆ ಅನುಕಂಪ ಉಳ್ಳವರಾಗಿದ್ದು, ಭಾರತ ವಿರೋಧಿ ಪ್ರಚಾರದಲ್ಲಿ ತೊಡಗಿದ್ದಾರೆ' ಎಂದು ಬಿಜೆಪಿ ಆರೋಪಿಸಿದೆ.

ರಾಜ್ಯದಲ್ಲಿ ರೈತರು ಸಂಕಷ್ಟದಲ್ಲಿರುವಾಗ ಸರ್ಕಾರ ಇಂತಹ ಸಮಾವೇಶಗಳನ್ನು ಆಯೋಜಿಸುವ ಮೂಲಕ ಅನಗತ್ಯ ವೆಚ್ಚ ಮಾಡುತ್ತಿದೆ. ಇದೇ ಮೊತ್ತದಲ್ಲಿ ಎಷ್ಟೋ ರೈತರಿಗೆ ನೆರವು ನೀಡಬಹುದಾಗಿತ್ತು ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಟೀಕಿಸಿದ್ದಾರೆ.

ಮೆಹಬೂಬಾ ಟೀಕೆ: ಬಿಜೆಪಿಯು ತನ್ನ ಟೀಕಾಕಾರರಿಗೆ 'ಕಿರುಕುಳ ನೀಡಲು ಮತ್ತು ದಂಡನೆಗೆ ಒಳಪಡಿಸಲು' ಪಾಸ್‌ಪೋರ್ಟ್‌ಗಳನ್ನು 'ಅಸ್ತ್ರಗಳಾಗಿ' ಬಳಸುತ್ತಿದ್ದು, ಪ್ರಯಾಣದ ಮೇಲೆ ನಿಷೇಧ ಹೇರುತ್ತಿದೆ ಎಂದು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಸೋಮವಾರ ಕಾಶ್ಮೀರದ ಶ್ರೀನಗರದಲ್ಲಿ ಆರೋಪಿಸಿದರು.

ಉದ್ಯೋಗ ಮೇಳ: ಕೈಕೊಟ್ಟ ನೆಟ್‌ವರ್ಕ್, ಗದ್ದಲದ ವಾತಾವರಣ

ಬಿಸಿಲ ಝಳ: ಆಕಾಂಕ್ಷಿಗಳು ಹೈರಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಶಲ್ಯಾಭಿವೃದ್ಧಿ ಇಲಾಖೆಯು ನಗರದಲ್ಲಿ ಆಯೋಜಿಸಿರುವ ಉದ್ಯೋಗ ಮೇಳದಲ್ಲಿ ಸಾವಿರಾರು ಅಭ್ಯರ್ಥಿಗಳು ಸೋಮವಾರ ಪಾಲ್ಗೊಂಡಿದ್ದರು. ಇದರಿಂದ ಮೇಳದಲ್ಲಿ ಗೊಂದಲ ಹಾಗೂ ಗದ್ದಲ ವಾತಾವರಣ ಇತ್ತು. ಬಿಸಿಲ ಝಳ ಮತ್ತು ದೂಳಿನ ಮಜ್ಜನದಿಂದ ಉದ್ಯೋಗಾಕಾಂಕ್ಷಿಗಳು ಹೈರಾಣಾದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅನೇಕರು ಅರಮನೆ ಮೈದಾನದ ಯಾವ ಗೇಟ್‌ನಲ್ಲಿ ಉದ್ಯೋಗ ಮೇಳ ನಡೆಯುತ್ತಿದೆ ಎಂಬ ಸ್ಪಷ್ಟ ಮಾಹಿತಿ ಇಲ್ಲದೇ ಪರದಾಡಿದರು. ಉದ್ಯೋಗ ಮೇಳ ನಡೆಯುತ್ತಿದ್ದ 'ಕೃಷ್ಣ ವಿಹಾರ'ಕ್ಕೆ ಬರಲು ತ್ರಾಸುಪಟ್ಟರು.

ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದ ಉದ್ಯೋಗಾಕಾಂಕ್ಷಿಗಳು ಮೇಳದಲ್ಲಿ ಮತ್ತೊಮ್ಮೆ ನೋಂದಣಿ ಮಾಡಿಕೊಳ್ಳುವ ಪ್ರಕ್ರಿಯೆ ಇತ್ತು. ಇದಕ್ಕಾಗಿ 150ಕ್ಕೂ ಹೆಚ್ಚು ನೋಂದಣಿ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ನಿರೀಕ್ಷೆಗೂ ಮೀರಿ ಅಭ್ಯರ್ಥಿಗಳು ಬಂದಿದ್ದರಿಂದ ನೋಂದಣಿ ಮಾಡಿಕೊಳ್ಳುವ ಸಂದರ್ಭದಲ್ಲಿ ನೆಟ್‌ವರ್ಕ್ ಸಮಸ್ಯೆ ಉಂಟಾಯಿತು. ದೂರದ ಊರುಗಳಿಂದ ಬಂದಿದ್ದ ಅಭ್ಯರ್ಥಿಗಳು ಆಯೋಜಕರ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿದರು.

'ಯಾವ ಕಂಪನಿಯ ಮಳಿಗೆಗಳಿಗೆ ಹೋಗಿ ಸಂದರ್ಶನ ಹಾಗೂ ಸ್ವವಿವರಗಳನ್ನು ನೀಡಬೇಕೆಂಬ ಸಂದೇಶವನ್ನು ನಮ್ಮ ಮೊಬೈಲ್ ಸಂಖ್ಯೆಗೆ ಕಳುಹಿಸಿದ್ದರೆ ಅಭ್ಯರ್ಥಿಗಳಿಗೆ ಅನುಕೂಲವಾಗುತ್ತಿತ್ತು' ಎಂದು ವಿಜಯಪುರ ಜಿಲ್ಲೆಯ ಮಹಾದೇವ ಪಿ. ಹೇಳಿದರು.

'ಎರಡು ಬೃಹತ್ ಪೆಂಡಾಲ್‌ಗಳಲ್ಲಿ 600ಕ್ಕೂ ಹೆಚ್ಚು ಖಾಸಗಿ ಕಂಪನಿಗಳ ಮಳಿಗೆಗಳಿವೆ. ಆದರೆ, ನಮಗೆ ಯಾರೂ ಉದ್ಯೋಗದ ಗ್ಯಾರಂಟಿ ನೀಡಲಿಲ್ಲ. ನಾವು ಬಿ.ಇ ಪದವಿ ಪಡೆದು ಒಳ್ಳೆಯ ಕಂಪನಿಯಲ್ಲಿ ಉತ್ತಮ ಉದ್ಯೋಗ ಸಿಗುವ ನಿರೀಕ್ಷೆಯಲ್ಲಿ ಇಲ್ಲಿಗೆ ಬಂದಿದ್ದೆವು. ನಮ್ಮ ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ನೀಡುವ ಹೆಚ್ಚು ಕಂಪನಿಗಳಿಲ್ಲ. ಐಟಿಐ, ಡಿಪ್ಲೊಮಾ ಪದವಿ ಪಡೆದವರಿಗೆ ಈ ಮೇಳದಲ್ಲಿ ಹೆಚ್ಚು ಅವಕಾಶಗಳಿವೆ' ಎಂದು ಹಾವೇರಿಯ ಸದ್ದಾಮ್ ಹಾಗೂ ಬೀದರ್‌ನ ಸುಭಾಷ್ ಹೇಳಿದರು.

ಅರಮನೆ ಮೈದಾನದ ಕೃಷ್ಣವಿಹಾರದಲ್ಲಿ (ಜೆ.ಸಿ. ನಗರ ಪೊಲೀಸ್ ಠಾಣೆಯ ಮುಂಭಾಗದ) ಮಂಗಳವಾರವೂ ಉದ್ಯೋಗ ಮೇಳ ನಡೆಯಲಿದೆ.

ಆಕಾಂಕ್ಷಿಗಳು ಹೀಗಂತಾರೆ...

ಈಗಾಗಲೇ ನಾನು ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಉದ್ಯೋಗ ಮೇಳದಲ್ಲಿ ಅದಕ್ಕಿಂತ ಉತ್ತಮ ಕೆಲಸ ಹಾಗೂ ಸಂಬಳ ಸಿಗುವ ನಿರೀಕ್ಷೆಯಿಂದ ಪಾಲ್ಗೊಂಡಿದ್ದೇನೆ.
ಸುಷ್ಮಾ ಪಾಟೀಲ್, ಯಲಹಂಕ

ನಾನು ಪಿಯುಸಿ ಪೂರ್ಣಗೊಳಿಸಿದ್ದೇನೆ. ಉದ್ಯೋಗ ಮೇಳದಲ್ಲಿ ನನಗೆ ಮೂರು ಕಂಪನಿಗಳು ಕೆಲಸ ಕೊಡುವ ಭರವಸೆ ನೀಡಿವೆ. ನಿರುದ್ಯೋಗಿಗಳಿಗೆ ಸರ್ಕಾರ ಒಂದು ಉತ್ತಮ ವೇದಿಕೆ ಕಲ್ಪಿಸಿದೆ.
ರುಹಿನಾ, ಉದ್ಯೋಗಾಂಕ್ಷಿ

ಅರಮನೆ ಮೈದಾನದ ಯಾವ ಗೇಟ್‌ನಲ್ಲಿ ಉದ್ಯೋಗ ಮೇಳ ನಡೆಯುತ್ತಿದೆ ಎಂಬ ಮಾಹಿತಿ ಇಲ್ಲದ ಕಾರಣ ನಾವು ಪರದಾಡಿದೆವು. ಮೇಳದಲ್ಲಿ ಯಾವುದೇ ರೀತಿಯ ಸಂದರ್ಶನಗಳು ನಡೆಯುತ್ತಿಲ್ಲ. ಉದ್ಯೋಗದ ಗ್ಯಾರಂಟಿಯೂ ಇಲ್ಲ.
ಭೂಮಿಕಾ, ಎಟ್ರಿಯಾ ಕಾಲೇಜಿನ ವಿದ್ಯಾರ್ಥಿ

ಮುಖ್ಯಮಂತ್ರಿ ಹಾಗೂ ಸಚಿವರು ಸ್ಥಳದಲ್ಲೇ ಉದ್ಯೋಗ ಸಿಗುತ್ತದೆಂದು ಹೇಳಿದ್ದರು. ಆದರೆ, ಅದು ಖಾತ್ರಿ ಇಲ್ಲ. ಮೇಳವನ್ನು ಇನ್ನಷ್ಟು ವ್ಯವಸ್ಥಿತವಾಗಿ ಆಯೋಜಿಸಬೇಕಾಗಿತ್ತು.
ಅನುಷಾ, ಚಿಕ್ಕಬಾಣಾವರ

ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡ ಅಭ್ಯರ್ಥಿಗಳಿಗೆ ಉದ್ಯೋಗ ಮೇಳದಲ್ಲಿ ಮತ್ತೊಮ್ಮೆ ನೋಂದಣಿ ಮಾಡಿಕೊಳ್ಳಲು ಸೂಚಿಸಲಾಯಿತು. ಆದರೆ, ನೆಟ್‌ವರ್ಕ್ ಸಮಸ್ಯೆಯಿಂದಾಗಿ ನಾವೆಲ್ಲರೂ ಪರದಾಡಬೇಕಾಯಿತು.
ಸಚಿನ್, ಹುಬ್ಬಳ್ಳಿ



ಉದ್ಯೋಗ ಮೇಳದಲ್ಲಿ ಬಹಳಷ್ಟು ಜನ ಭಾಗಿಯಾದ ಕಾರಣ ಕಂಪನಿಯ ಪ್ರತಿನಿಧಿಗಳು ಸ್ವವಿವರಗಳನ್ನು ಪಡೆದುಕೊಂಡು, ಹತ್ತು ದಿನಗಳಲ್ಲಿ ಕರೆ ಮಾಡುವುದಾಗಿ ತಿಳಿಸಿದ್ದಾರೆ.
ಚೇತನ್, ಪಾಂಡವಪುರ, ಮಂಡ್ಯ



ಮೇಳವನ್ನು ಇನ್ನಷ್ಟು ಸುಸಜ್ಜಿತವಾಗಿ ನಡೆಸಬಹುದಿತ್ತು. ವಿದ್ಯಾರ್ಹತೆಗೆ ಅನುಗುಣವಾಗಿ ಮಳಿಗೆಗಳನ್ನು ಪ್ರತ್ಯೇಕಿಸಿದ್ದರೆ ಗೊಂದಲವಾಗುತ್ತಿರಲಿಲ್ಲ. ಹುಡುಕಾಡುವುದು ತಪ್ಪುತ್ತಿತ್ತು.
ಅಶೋಕ್ ಡಿಕೋಸ್ತಾ
ಅಭ್ಯರ್ಥಿಯೊಬ್ಬರ ಪೋಷಕ, ಮಂಗಳೂರು

ಕೆಲವು ಕಂಪನಿಗಳು ವಿದೇಶಗಳಲ್ಲೂ ಉದ್ಯೋಗ ಕಲ್ಪಿಸುವ ಭರವಸೆ ನೀಡಿವೆ. ಪ್ರತಿವರ್ಷ ಈ ರೀತಿಯ ಮೇಳ ಆಯೋಜಿಸಿದರೆ ನಿರುದ್ಯೋಗಿಗಳಿಗೆ ಅನುಕೂಲ ಆಗಲಿದೆ.
ಸವಿತಾ, ಹಾಸನ

ವಾಹನ ದಟ್ಟಣೆ

ಅರಮನೆ ಮೈದಾನದ ಸುತ್ತಮುತ್ತ ಸೋಮವಾರ ಬೆಳಿಗ್ಗೆಯಿಂದಲೇ ವಾಹನ ದಟ್ಟಣೆ ಇತ್ತು. ದಟ್ಟಣೆಯಲ್ಲಿ ಸಿಲುಕಿ ವಾಹನ ಸವಾರರು ಹೈರಾಣಾದರು. ಸದಾಶಿವನಗರ ಪೊಲೀಸ್ ಠಾಣೆ ಎದುರಿನ ರಸ್ತೆಯಿಂದ ಮೇಖ್ರಿ ವೃತ್ತದವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ವಾಹನಗಳು ಮುಂದಕ್ಕೆ ಸಾಗಲು ಸಾಕಷ್ಟು ಸಮಯ ಹಿಡಿಯುತ್ತಿತ್ತು. ಮೇಖ್ರಿ ವೃತ್ತದಿಂದ ಶಿವಾಜಿನಗರ ರಸ್ತೆಯ ಟಿ.ವಿ. ಟವರ್‌ವರೆಗೂ ದಟ್ಟಣೆ ಇತ್ತು. ಹೆಬ್ಬಾಳ ರಸ್ತೆಯಲ್ಲೂ ಇದೇ ಪರಿಸ್ಥಿತಿಯಿತ್ತು. ಉದ್ಯೋಗ ಮೇಳಕ್ಕೆ ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗಾಕಾಂಕ್ಷಿಗಳು ಬಂದಿದ್ದರಿಂದ ಸಮಸ್ಯೆ ಉಂಟಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ರೈತ ಸೂರ್ಯ ಬಿಎಸ್‌ವೈ

ದಣಿವರಿಯದ ನಾಯಕ ಜನಸೇವೆಯೇ ಕಾಯಕ

ನಾಡಿನ ಅನ್ನದಾತರ ಪರ ಧ್ವನಿ ಎತ್ತುವ ಕಣ್ಮಣಿ, ದಲಿತರು, ಶೋಷಿತರು, ಕಾರ್ಮಿಕರ ಹಿತ ಬಯಸುವ ನೇತಾರ, ಕನ್ನಡ ನೆಲದ ನೈಜ ಮಣ್ಣಿನ ಮಗ ಬಿ.ಎಸ್. ಯಡಿಯೂರಪ್ಪ ಅವರ ಹೆಸರೇ ಹೋರಾಟಗಳಿಗೆ ಪ್ರೇರಣೆ. ಪುರಸಭೆ ಸದಸ್ಯ ಸ್ಥಾನದಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಏರಿದವರೆಗಿನ ಅವರ ಬದುಕೇ ರಾಜಕಾರಣಿಯಾಗಲು ಬಯಸುವವರೆಗೆ ಆದರ್ಶ.

ರೈತ ಸಮುದಾಯದ ಹಿತಕ್ಕಾಗಿ ಐದು ದಶಕಗಳ ಸುದೀರ್ಘಕಾಲ ನಿರಂತರ ಚಳವಳಿಯಲ್ಲೇ ಮುಳುಗಿದ್ದ ಯಡಿಯೂರಪ್ಪ ಅವರು, ಅಧಿಕಾರಕ್ಕಾಗಿಯೇ ಹೋರಾಟ ನಡೆಸಿದವರಲ್ಲ. ಜನಪರ ಕಾಳಜಿ, ರೈತಪರ ಧೋರಣೆ ಅವರಿಗೆ ರಕ್ತಗತವಾಗಿ ಬಂದಂತಿದೆ. ಇಬ್ಬರು ಶಾಸಕರು ಇಲ್ಲದ ಕಾಲದಲ್ಲಿ ನಾಡಿನಾದ್ಯಂತ ಓಡಾಡಿ, ರೈತರು–ಜನರ ಪರವಾಗಿ ಧ್ವನಿ ಎತ್ತಿ, ನ್ಯಾಯಕ್ಕಾಗಿ ಕೊರಳೆತ್ತಿ ಮನೆಮನೆಗೆ ಬಿಜೆಪಿಯನ್ನು ತಲುಪಿಸಿದವರು. ಅವರ ಹೋರಾಟ, ತ್ಯಾಗದ ಫಲವಾಗಿ ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಹೆಬ್ಬಾಗಿಲು ತೆರೆಯಿತು. ಹಿಂದಿರಾಜ್ಯಗಳ ಪಕ್ಷ ಎಂಬ ಹಣೆಪಟ್ಟಿ ಹೊತ್ತಿದ್ದ ಭಾರತೀಯ ಜನತಾ ಪಕ್ಷದ ಬಾವುಟವನ್ನು ಕರ್ನಾಟಕದ ಮನೆಮನೆಗಳಲ್ಲಿ ಹಾರಿಸಿದರು. ಅದಕ್ಕೆ ಹೆಗಲು ಕೊಟ್ಟವರು ಹಲವರು ಇರಬಹುದು. ಆದರೆ ನೇತಾರಸ್ವರೂಪಿಯಾಗಿ ನಿಂತು ಕೇಸರಿ ಪತಾಕೆಯ ಬಿಜೆಪಿ ರಥವನ್ನು ಅಧಿಕಾರದ ಗದ್ದುಗೆಗೆ ತಂದು ಕೂರಿಸಿದ ಕೀರ್ತಿ ಮಾತ್ರ ಯಡಿಯೂರಪ್ಪನವರ ಶಿರದ ಮೇಲಿನ ಕಿರೀಟದಂತೆ ಹೊಳೆಯುತ್ತಲೇ ಇರುತ್ತದೆ.

50 ವರ್ಷ ಹೋರಾಟ ನಡೆಸಿದರೂ ಅಧಿಕಾರ ಅನುಭವಿಸಿದ್ದು ಅತ್ಯಲ್ಪ ಅವಧಿ ಮಾತ್ರ. ನಾಲ್ಕು ಬಾರಿ ಮುಖ್ಯಮಂತ್ರಿ ಹುದ್ದೆಗೇರಿದರೂ ಅಧಿಕಾರ ಲಕ್ಷ್ಮಿಯನ್ನು ಹೊರುವ ಭಾಗ್ಯ ದೀರ್ಘಕಾಲ ಸಿಗಲಿಲ್ಲ. ಒಳಸಂಚು, ಹಿತಶತ್ರುಗಳ ಕುತಂತ್ರಗಳು ಯಡಿಯೂರಪ್ಪನವರಂತಹ ಧೀಮಂತ ನಾಯಕರನ್ನು ಅಧಿಕಾರದಲ್ಲಿ ಉಳಿಯಲು ಬಿಡಲಿಲ್ಲ ಎಂಬುದು ಕರ್ನಾಟಕದ ಪಾಲಿನ ದೌರ್ಭಾಗ್ಯವೂ ಹೌದು. ತಾವೇ ತಂದ ಸರ್ಕಾರವನ್ನು ಪೂರ್ಣಾವಧಿ ಮುನ್ನಡೆಸಲು ಅವರಿಗೆ ಸಾಧ್ಯವಾಗಿದ್ದರೆ, ಕರ್ನಾಟಕದ ಆರ್ಥಿಕ, ಭೌತಿಕ ಚಿತ್ರಣವೇ ಬದಲಾಗಿಬಿಡುತ್ತಿತ್ತು.

20 ತಿಂಗಳು ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಾಗಿ ಯಡಿಯೂರಪ್ಪ ಕಾರ್ಯನಿರ್ವಹಿಸಿದರು. 2008ರಿಂದ 2011ರವರೆಗೆ ಮುಖ್ಯಮಂತ್ರಿ, 2019ರಿಂದ 2021ರವರೆಗೆ ಮತ್ತೆ ಮುಖ್ಯಮಂತ್ರಿಯಾಗಿದ್ದೇ ದೀರ್ಘಕಾಲದ ಅವರ ಅಧಿಕಾರ ಅವಧಿ. ಉಳಿದ ಜೀವನವೆಲ್ಲ, ಆಗೆಲ್ಲ ಅಧಿಕಾರದಲ್ಲಿದ್ದ ಸರ್ಕಾರದ ವಿರುದ್ಧ ಹೋರಾಡಲು ಸವೆಸಿದ್ದೇ, ಜನರ ಹಿತಕ್ಕಾಗಿ ಬಡಿದಾಡಿದ್ದು, ಜನರಿಗೆ ಅದರಲ್ಲೂ ರೈತರಿಗೆ ಅನ್ಯಾಯವಾದಾಗ ಸಿಡಿದೆದ್ದಿದ್ದೇ ಅವರ ಕಾಯಕ. ಕಾಯಕಯೋಗಿ ಬಸವಣ್ಣನವರ ಅಪ್ಪಟ ಅಭಿಮಾನಿ–ಅನುಯಾಯಿಯಾದ ಯಡಿಯೂರಪ್ಪನವರು ರೈತರ–ಬಡವರ– ದಲಿತರ– ಮಹಿಳೆಯರು– ಹಿರಿಯ ನಾಗರಿಕರ ಕಣ್ಣೊರೆಸುವುದನ್ನೇ ಕಾಯಕ ಮಾಡಿಕೊಂಡವರು. ಅಧಿಕಾರಕ್ಕಾಗಿ ರಾಜೀಕಬೂಲಿ, ಜೀಹುಜೂರ್ ಶೈಲಿಯನ್ನು ಅವರು ಅನುಸರಿಸಿದ್ದರೆ, ಅವರಿಗೆ ಅಧಿಕಾರದ ಸಿಂಹಾಸನ ಶಾಶ್ವತವಾಗಿ ಸಿಗುತ್ತಿತ್ತೇನೋ!

ರೈತರ ಬೆಳೆಗಳಿಗೆ ನೀರು ಸಿಗದಿದ್ದಾಗ, ಬೀಜ–ಗೊಬ್ಬರ ಸಿಗದಿದ್ದಾಗ, ಕೈಗೆ ಬಂದ ಬೆಳೆಗೆ ಬೆಲೆ ಬರದಿದ್ದಾಗ ಪಾದಯಾತ್ರೆಯ ಮಾರ್ಗವನ್ನು ಯಡಿಯೂರಪ್ಪ ಹಿಡಿದಿದ್ದರು. ರೈತರಿಗೆ ಮಾತ್ರವಲ್ಲ; ತಮ್ಮ ಹೆಸರಿಗೆ ಭೂಮಿಯೇ ಇಲ್ಲದೇ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ ರೈತರ ಪರವಾಗಿ ಪಾದಯಾತ್ರೆ ನಡೆಸಿದರು. ಹತ್ತಿಗೆ ಬೆಲೆ ಸಿಗದಿದ್ದಾಗ ಸುದೀರ್ಘ ಧರಣಿ ನಡೆಸಿದರು. ಯಡಿಯೂರಪ್ಪನವರು ಹೋರಾಟದ ಮುಂಚೂಣಿ ವಹಿಸಿದ್ದಾರೆಂದರೆ ಆಳುವ ಸರ್ಕಾರಕ್ಕೆ ನಡುಕ ಶುರುವಾಗಿ ಬಿಡುತ್ತಿತ್ತು. ಹೀಗಾಗಿಯೇ, 'ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು' ಎಂಬ ಮಾತು ಬಹುಜನಪ್ರಿಯವಾಗಿತ್ತು.

ಅಧಿಕಾರಕ್ಕೆ ಏರಿದ ಮೇಲೆಯೂ ಈ ಜನವರ್ಗದ ಹಿತವನ್ನು ಅವರು ಮರೆತವರೇ ಅಲ್ಲ. ಸರ್ಕಾರದ ಆಡಳಿತಾಂಗವನ್ನೇ ಅದಕ್ಕಾಗಿ ಬಳಸಿಕೊಂಡರು.

ಉಪಮುಖ್ಯಮಂತ್ರಿಯಾಗಿ ಹಣಕಾಸು ಇಲಾಖೆಯ ಜವಾಬ್ದಾರಿ ಹೊತ್ತಾಗ ಅವರು ಮಾಡಿದ ಅತ್ಯಂತ ಜನಪ್ರಿಯ ಕೆಲಸವೆಂದರೆ ಬಡವರು, ರೈತರು, ಮಧ್ಯಮವರ್ಗದವರಿಗೆ, ದುಡಿವವರ್ಗದವರಿಗೆ ಕಂಟಕವಾಗಿದ್ದ ಎರಡು ಶತ್ರುಗಳನ್ನು ನಿವಾರಿಸಿದ್ದು. ದುಡಿದ ಹಣವನ್ನೆಲ್ಲ ಜನರು ಲಾಟರಿಗೆ ಹಾಕಿ, ತಾವು ಲಾಟರಿ ಹೊಡೆದ ಪಾಪರ್ ಆಗುತ್ತಿದ್ದರು. ರೈತ ಸಮುದಾಯದ ಜತೆಗೆ ತಮ್ಮ ಬಹುಪಾಲು ಜೀವನ ಕಳೆದಿದ್ದ ಯಡಿಯೂರಪ್ಪನವರು, ಸರ್ಕಾರದ ಬೊಕ್ಕಸಕ್ಕೆ ನಷ್ಟವಾದರೂ ಪರವಾಗಿಲ್ಲ; ಜನರ ಬಾಳು ಹಸನಾಗಬೇಕು ಎಂಬ ಕಾರಣಕ್ಕೆ ಲಾಟರಿ ನಿಷೇಧಿಸುವ ಮಹತ್ವದ ತೀರ್ಮಾನ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಅದೇ ರೀತಿಯೊಳಗೆ, ರೈತರು–ಬಡವರ ಬದುಕಿಗೆ ಕೊಳ್ಳಿ ಇಡುತ್ತಿದ್ದ ಮತ್ತೊಂದು ರಾಕ್ಷಸನೆಂದರೆ ಸಾರಾಯಿ. ಸಾರಾಯಿ ಮಾರಾಟದ ಹರಾಜು ಹಾಕುವುದರಿಂದ ಸರ್ಕಾರಕ್ಕೆ ಅಪರಿಮಿತ ಆದಾಯ ಬರುತ್ತಿತ್ತು. ಆದರೆ, ಜೀವಗಳು ಸತ್ತು, ಕುಟುಂಬಗಳು ಬೀದಿಪಾಲಾಗುವ ನಿತ್ಯ ನರಕ ನಾಡಿನುದ್ದಕ್ಕೂ ಕಾಣಬಹುದಿತ್ತು. ಅದನ್ನು ಮನಗಂಡ ಯಡಿಯೂರಪ್ಪನವರು ಸಾರಾಯಿ ನಿಷೇಧಿಸುವ ನಿರ್ಧಾರಕ್ಕೆ ಬೆನ್ನೆಲುಬಾಗಿ ನಿಂತು, ಅದನ್ನು ಸರ್ಕಾರದ ಮಟ್ಟದಲ್ಲಿ ಜಾರಿಗೊಳಿಸುವಲ್ಲಿ ಯಶಸ್ವಿಯೂ ಆದರು.

ಹೆಣ್ಣುಮಕ್ಕಳು ಹುಟ್ಟುವುದೇ ಕುಟುಂಬಕ್ಕೆ ಶಾಪ. ಅವರನ್ನು ಬೆಳೆಸುವುದು ಮದುವೆಯ ಖರ್ಚು ಹೊರೆ ಎಂಬ ಭಾವನೆ ಇಂದಿಗೂ ಇದೆ. ಹಾಗಾಗಿ, ಹೆಣ್ಣು ಭ್ರೂಣ ಹತ್ಯೆಯಂತಹ ಮಹಾಪಾಪಗಳು ನಡೆಯುತ್ತಲೇ ಇದ್ದವು. ಹೆಣ್ಣುಮಕ್ಕಳು ಹುಟ್ಟುವುದೇ ಸೌಭಾಗ್ಯ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸಲು ಮುಂದಾದ ಯಡಿಯೂರಪ್ಪನವರು, ಮುಖ್ಯಮಂತ್ರಿಯಾದ ಮೊದಲ ಕ್ಷಣವೇ ಭಾಗ್ಯಲಕ್ಷ್ಮೀ ಬಾಂಡ್ ಯೋಜನೆ ಜಾರಿಗೊಳಿಸಿದರು. ದೂರದ ಊರಿಗೆ ಹೋಗಲಾದರೆ ಮಕ್ಕಳು ಅರ್ಧದಲ್ಲೇ ಶಾಲೆ ತೊರೆಯುತ್ತಿದ್ದರು. ಶಾಲೆಯೆಡೆಗೆ ಮಕ್ಕಳನ್ನು ಆಕರ್ಷಿಸಲು ಬೈಸಿಕಲ್ ನೀಡುವ ಯೋಜನೆಯನ್ನು ಚಾಲ್ತಿಗೆ ತಂದರು. ಆ ಮೂಲಕ ಶಾಲೆ ತೊರೆಯುತ್ತಿದ್ದ ಮಕ್ಕಳು, ಶಾಲೆಗೆ ಬಂದು ಕಲಿಯಲು ಆರಂಭಿಸಿದರು. ಶಾಲೆ ತುಳಿಯದೇ ದುಡಿಮೆಗೆ ಬೀಳುತ್ತಿದ್ದ ಏಳೆಂಟು ತಲೆಮಾರಿನ ಮಕ್ಕಳು, ತಮ್ಮ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ನೇರ ಕಾರಣರಾಗಿದ್ದು ಯಡಿಯೂರಪ್ಪನವರ ಹೆಗ್ಗಳಿಕೆ ಮತ್ತು ಮಾನವೀಯ ಕಳಕಳಿಗೆ ಸಾಕ್ಷಿ.

ಜನಪರ ಕಾರ್ಯದ ಹಾದಿ

- 2008-2011 ಅಧಿಕಾರಾವಧಿಯಲ್ಲಿ ಅನೇಕ ಸುಧಾರಣೆ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು.
- 2008ರಲ್ಲಿ ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡನೆ. ರಾಜ್ಯದಲ್ಲಿ ಮೊದಲ ಬಾರಿಗೆ 0% (ಶೂನ್ಯ ಬಡ್ಡಿ) ದರದಲ್ಲಿ ರೈತರ ಕೃಷಿ ಸಾಲ ಯೋಜನೆ ಜಾರಿ.
- ಸಾವಯವ ಕೃಷಿ ಯೋಜನೆ ₹10.05 ಕೋಟಿ ವಿನಿಯೋಗ 83 ಸಾವಿರ ರೈತರನ್ನು ಇದರಲ್ಲಿ ತೊಡಗುವಂತೆ ಮಾಡಿ 76 ಸಾವಿರ ಹೆಕ್ಟರ್ ಭೂಮಿಯಲ್ಲಿ ಇದನ್ನು ಜಾರಿಗೊಳಿಸಲಾಯಿತು.
- ಸುವರ್ಣ ಭೂಮಿ ಯೋಜನೆಯಲ್ಲಿ ಹತ್ತು ಲಕ್ಷ ರೈತರ ಕುಟುಂಬಕ್ಕೆ ಅನುಕೂಲವಾಗುವಂತೆ ಅವರ ಜೀವನಮಟ್ಟ ಉತ್ತಮವಾಗುವಂತೆ ಮಾಡುವಲ್ಲಿ ಸಫಲವಾಯಿತು.
Br. Gonikopal: Sudharma Building,Near Masjid, Ponnampet Road Jn, Main Road, Gonikoppal, Kodagu- 571 213:- 19616400105914,19616400082972,19616400110427,19616400111243,19616400112399,19616400112811,19616400081685,19616400094399,19616400103992,19616400111326,19616400112415,19616400107142,19616400108538,19616400111318,19616400111490,19616400112423,19616400107944,19616400110278,19616400111300,19616400111698,19616400112555,19616400107936,19616400110369,19616400074409,19616400112183,19616400105740.

Br. Hebri: Spatika Plaza, Kuchoor Road, Hebri, Karkala Taluk, Udupi- 576 112, Ph No. 08253-250045 :- 18966400018604,18966400023257,18966400022572,18966400020709,18966400024792,18966400018935,19866400016566,18966400017986,18966400017994,18966400023422,18966400020956,18966100006032.

Br. Hassan: Ground Floor, St. Antony's Church Complex, NR Circle, HN Pura Road, Hassan, Karnataka- 573 201 :- 13546400251267,13546400237019,13546400255623,13546400287600,13546400279011,13546400285083,13546400252869,13546400252844,13546400223837,13546400253990,13546400252059,13546400252042,13546400299381,13546400255276,13546400253891,13546400287071,13546400272172,13546400205107,13546400296163,13546400254162,13546400268964,13546400258536,13546400261050,13546400276199.

Br. Kadur: Dr Vishwanath Building, Maravanji Circle, BH Road, Kadur, Chikmagalur- 577 548 Ph no. 08267-221244 :- 18936400024175,18936400032210,18936400039298,18936400043829,18936400045659,18936400025974,18936400033507,18936400039744,18936400043928,18936400031949,18936400037474,18936400042045,18936400043936,18936400031956,18936400038373,18936400042615,18936400043944,18936400032038,18936400038779,18936400043704,18936400044504.

Br. Kadaba: Ground Floor, Anugraha Complex, Main Road, Kadaba, Dakshina Kannada District- 574 221 :- 20126400034954,20126400034715,20126400034947,20126400034756,20126400033923,20126400034939,20126400034707,20126400034731,20126400034269,20126400031117,20126400033832,20126400034483,20126400034145,20126400034152.

Br. Kundapura: Shivram Complex, Municipal Main Road, Kundapura, Udupi- 576201 Ph No. 08254 233144 :- 20146400085806,20146400096134,20146400096282,20146400096381,20146400086945,20146400102841,20146400086002,20146400096647,20146400095698,20146400096142,20146400103757,20146400096845,20146400095805,20146400095854,20146400083322,20146400097041,20146400096274,20146400095573,20146400103740,20146400096670.**Br. Kushalnagar: HRS Mansion, BM Road, Kushal Nagar, Kodagu District- 571 234, Ph No. 08276 274084 :-** 19316400073937,19316400028501,19316400047352,19316400080957,19316400087119,19316400046172,19316400078480,19316400078472,19316400087564,19316400089552,19316400074695,19316400078688,19316400077383,19316400078738,19316400070651,19316400077417,19316400074513,19316400076740.

Br. Karkala: Opp Bundimatt Bus Stand, Karkala,Udupi District- 574104 :- 19636400029351,19636400032371,19636400026597.

Br. Kinnigoli : C4 and C5, Pintos Golden Castle, Talipady Road, Next to BSNL office, Kinnigoli, Dakshin Kannad, Karnataka, 574150 Ph : 0824-2295690 :- 20076400032013,20076400031478,20076400029472.**Br. Moodabidri: Next to Hotel Pancharatna Buidling, Moodabidri, Dakshin Kannada Dist.- 574 227 :-** 19626400063252,19626400065695,19626400063757,19626400065745,19626400064417,19626400065729,19626400064698,19626400065877,19626400060746,19626400057395,19626400065109,19626400057411,19626400065117,19626400057387,19626400065091,19626400066032,19626400065364,19626400066206,19626400065380,19626400066487,19626400065687,19626400066636.

Br. Mangalore: P B No. 775, Near PVS Circle, Manasa Towers, M G Road, Kodialbail, Mangalore, Dakshin Kannada- 575 003, Ph No. 08242-497883 :- 11756400037630,11756400039222,11756400035196.

Br.Mangalore/Kankanady: The Vintage, Kankanady, Dakshina Kannada, Mangalore-575002, Ph No. 08242430152:- 17706400022516,17706400019330,17706400021997,17706400025857,17706400025865,17706400027994,17706400028117,17706400028133,17706400028141,17706400028158,17706400028109,17706400030139,17706400030048.

Br.Nellyadi: Elite Plaza, Nh 48, Near St.George P U College, Nellyadi, Dakshin Kannada, Karnataka-574 229, Ph No.08251-256100:- 16446400076060,16446400084049,16446400084916,16446400086895,16446400090756,16446400091341,16446400092273.

Br. Puttur: Meenar Complex, Main Road, Puttur, Dakshin Kannad- 574 201, Ph No. 08251-233544 :- 18946400082420,18946400083360,18946400072447,18946400080242,18946400083832.

Br. Shimoga: Haranahalli Manjappa Complex,, Park Extension Road, Durgigudi, Shimoga District- 577 201, Ph No. 08182-271998 :- 15906400076213,15906400075843,15906400076890,15906400047206,15906400080546,15906400062528,15906400077179,15906400066560,15906400060522,15906100025429,15906400076957,15906400059946,15906400065372,15906400076593,15906400076601,15906400076635,15906400076981,15906400068863,15906400076528,15906400076379,15906400076338,15906400077047,15906400076718,15906400076965,15906400062338.

Br.Sullia:, Ganesh Complex, Main Road, Sullia, Dakshina Kannada,Karnataka- 574239, Ph no.08257 230818 :- 19006400036519,19006400034738,19006400037095,19006400029076,19006400037319,19006400034860,19006400040958,19006400032831,19006400035354,19006400040966,19006400034142,19006400038317,19006400035420,19006400034639,19006400038689,19006400029084.

Br. Udupi: Mahalasa Towers, Court Road, Udupi, Karnataka- 576 101, Ph no. 08202521562 :- 15746400054897,15746400054863,15746400055050,15746400055043,15746400057171,15746400055167,15746400060704,15746400055191,15746400051182,15746400055225,15746400055209,15746400055217,15746400055316,15746400059912,15746400060035,15746400058146,15746400055415,15746400062452,15746400054889,15746400052917,15746400056199,15746400055563,15746400057080,15746400052859,15746400055670,15746400046182,15746400058138,15746400053238,15746400056025,15746400056033,15746400056041,15746400056058,15746400056066,15746400056082,15746400058732,15746400056132,15746400057833,15746400057841,15746400062247,15746400053105,15746400061017,15746400062270,15746400062288,15746400051976,15746400053147,15746400056207,15746400056231,15746400057734,15746400057718,15746400056249,15746400056512,15746400053188,15746400052370,15746400042983,15746400056694,15746400041837,15746400050028,15746400043858,15746400043007,15746400051497,15746400050093,15746400050085,15746400054566,15746400054558,15746400052842,15746400040003,15746400047404,15746400045630,15746400054814,15746400054129,15746400047784,15746400055985,15746400042322,15746400042330,15746400054525,15746400054491,15746400054483,15746400055613,15746400060936,15746400050507,15746400054939,15746400050515,15746400054871.

Br. Karwar : 451/G-1, Suprabha, Green Street, Karwar, Uttar Kannad, Karnataka-581 301 Ph: 91-8382-222842 :- 16286400028855.

Bangalore 26-02-2024 Vice President & Zonal Head

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: contact@kspcb.gov.in ವೆಬ್‌ಸೈಟ್: https//kspcb.karnataka.gov.in

ಸಂ: ಮಾನಿಮಂ/269/ಹಿಪಅ/ಗಣಿ/ಪಸಾಸ/2023–24/6007 ದಿನಾಂಕ: 23.02.2024

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ. ರಂಗಿನೇನಿ ಸ್ಟೀಲ್ ಅಂಡ್ ಪವರ್ ಪ್ರೈವೇಟ್ ಲಿಮಿಟೆಡ್, ರವರು ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಹರಗಿನದೋಣಿ ಗ್ರಾಮದ ಸರ್ವೆ ನಂ. 22/1, 22/2, 22/3, 22/A, 22/B1, 22/B2, 22/B3, 22/C1, 22/C2, 22/C3, 22/C4, 139(P), 142, 140/2, 140/3, 140/A, 140/B, 141/A, 143/2C/1 & 143/5 ರ ಒಟ್ಟು 78.39 ಎಕರೆ ಪ್ರದೇಶದಲ್ಲಿ 62,700 TPA (2 x 95 TPD) ಉತ್ಪಾದನಾ ಸಾಮರ್ಥ್ಯದ ಸ್ಪಾಂಜ್ ಐರನ್ ಘಟಕ, 12 Ton/Hr ಸಾಮರ್ಥ್ಯದ ಇಂಡಕ್ಷನ್ ಫರ್ನೇಸ್ ಅನ್ನು ಸ್ಥಾಪಿಸುವ ಮೂಲಕ 39,600 TPA MS ಬಿಲ್ಲೆಟ್ಸ್ ತಯಾರಿಕಾ ಘಟಕ ಹಾಗು 6 MW ಸಾಮರ್ಥ್ಯದ ಕ್ಯಾಪ್ಟಿವ್ ಪವರ್ ಪ್ಲಾಂಟ್ (AFBC- 3MW & WHRB- 3MW) ಘಟಕವನ್ನು ಸ್ಥಾಪಿಸಲು ಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 39 IND 2023, ದಿನಾಂಕ:30.08.2023 ಹಾಗೂ ಉದ್ದಿಮೆಯವರು ನೀಡಿದ ನಿವೇದನೆಯ ಪತ್ರ ದಿನಾಂಕ: 11.01.2024 ರ ಪ್ರಕಾರ ಮತ್ತು ಪ್ರಾದೇಶಿಕ ಅಧಿಕಾರಿ, ಬಳ್ಳಾರಿ, ಇವರ ಪತ್ರ ದಿನಾಂಕ: 20.02.2024 ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕಳಕಂಡಂತಿವೆ.

1.	ಕಂಪನಿಯ ಹೆಸರು ಮತ್ತು ವಿಳಾಸ: ಮೆ. ರಂಗಿನೇನಿ ಸ್ಟೀಲ್ ಅಂಡ್ ಪವರ್ ಪ್ರೈವೇಟ್ ಲಿಮಿಟೆಡ್, Admin Office: ಡೋರ್ ನಂ. 15, ಕಲ್ಪವೃಕ್ಷ ರೆಸಿಡೆನ್ಸಿ, ಬಾಲ ಭಾರತಿ ಸ್ಕೂಲ್ ಪಕ್ಕ, 3ನೇ ಕ್ರಾಸ್, ಗಾಂಧಿ ನಗರ, ಬಳ್ಳಾರಿ ಜಿಲ್ಲೆ– 583 103. Regd Office: ಎಫ್ ನಂ. 201, ಹ್ಯಾಪಿ ಹೋಮ್ಸ್, ಶ್ರೀನಿ ಎನ್‌ಕ್ಲೇವ್, ಗೇಟ್ ನಂ. 1, ಎಚ್‌ಟಿ ರಸ್ತೆ, ಬಾಶೀರ್‌ಬಾದ್ ಪೇಟ್, ಹೈದ್ರಾಬಾದ್– 500 055.
2.	ಉದ್ದೇಶಿತ ಯೋಜನೆಯ ಸ್ಥಳ: ಸರ್ವೆ ನಂ. 22/1, 22/2, 22/3, 22/A, 22/B1, 22/B2, 22/B3, 22/C1, 22/C2, 22/C3, 22/C4, 139(P), 142, 140/2, 140/3, 140/A, 140/B, 141/A, 143/2C/1 & 143/5, ಹರಗಿನದೋಣಿ ಗ್ರಾಮ, ಬಳ್ಳಾರಿ ತಾಲ್ಲೂಕು & ಬಳ್ಳಾರಿ ಜಿಲ್ಲೆ.
3.	ಉದ್ದೇಶಿತ ವಿಸ್ತರಣಾ ಯೋಜನೆಯ ವಿವರ: 62,700 TPA (2 x 95 TPD) ಉತ್ಪಾದನಾ ಸಾಮರ್ಥ್ಯದ ಸ್ಪಾಂಜ್ ಐರನ್ ಘಟಕ, 12 Ton/Hr ಸಾಮರ್ಥ್ಯದ ಇಂಡಕ್ಷನ್ ಫರ್ನೇಸ್ ಅನ್ನು ಸ್ಥಾಪಿಸುವ ಮೂಲಕ 39,600 TPA MS ಬಿಲ್ಲೆಟ್ಸ್ ತಯಾರಿಕಾ ಘಟಕ ಹಾಗು 6 MW ಸಾಮರ್ಥ್ಯದ ಕ್ಯಾಪ್ಟಿವ್ ಪವರ್ ಪ್ಲಾಂಟ್ (AFBC- 3MW & WHRB- 3MW) ಘಟಕವನ್ನು ಒಟ್ಟು 78.39 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಿ ಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.
4.	ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ: 28.03.2024 (ಗುರುವಾರ) ಸಮಯ: ಬೆಳಗ್ಗೆ 11.00 ಗಂಟೆ ಸ್ಥಳ: ಯೋಜನಾ ಸ್ಥಳ, ಮೆ. ರಂಗಿನೇನಿ ಸ್ಟೀಲ್ ಅಂಡ್ ಪವರ್ ಪ್ರೈವೇಟ್ ಲಿಮಿಟೆಡ್, ಹರಗಿನದೋಣಿ ಗ್ರಾಮ, ಬಳ್ಳಾರಿ ತಾಲ್ಲೂಕು & ಬಳ್ಳಾರಿ ಜಿಲ್ಲೆ.
5.	ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ. (ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಜಿಲ್ಲೆ, ಬಳ್ಳಾರಿ. (ಈ) ತಹಶೀಲ್ದಾರರ ಕಾರ್ಯಲಯ, ಬಳ್ಳಾರಿ ತಾಲ್ಲೂಕು. (ಉ) ಪಟ್ಟಣ ಪಂಚಾಯತಿ ಕಾರ್ಯಾಲಯ, ಕುಡಿತಿನಿ. (ಊ) ಗ್ರಾಮ ಪಂಚಾಯತಿ ಕಾರ್ಯಾಲಯ, ಬೆಳಗಲ್ಲು ಗ್ರಾಮ, ಬಳ್ಳಾರಿ ತಾಲ್ಲೂಕು. (ಋ) ಗ್ರಾಮ ಪಂಚಾಯತಿ ಕಾರ್ಯಾಲಯ, ವೇಣಿವೀರಾಪುರ ಗ್ರಾಮ, ಬಳ್ಳಾರಿ ತಾಲ್ಲೂಕು. (ಎ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ. (ಏ) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು–560 001. (ಐ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ /ಮಿಂಚಂಚೆ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ ವೆಬ್‌ಸೈಟ್: kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಕ್ಷೇಮ ಕುಶಲ

ಮಧುಮೇಹಿಗಳಿಗೆ ಆಹಾರ

ಚೈತ್ರ ಆಚಾರ್ಯ

ಅನಾರೋಗ್ಯಕರ ಆಹಾರಪದ್ಧತಿ, ಕೌಟುಂಬಿಕ ಇತಿಹಾಸ, ಕಳಪೆ ಜೀವನಶೈಲಿ, ದೈಹಿಕ ವ್ಯಾಯಾಮದ ಕೊರತೆ, ಅತಿಯಾದ ತೂಕ/ಬೊಜ್ಜುತನ – ಇವು ಮಧುಮೇಹಕ್ಕೆ ಕಾರಣವಾಗುವ ಪ್ರಮುಖ ಅಂಶಗಳು.

ನಾವು ಸೇವಿಸುವ ಉತ್ತಮ ಪೋಷಕಾಂಶಭರಿತ ಆಹಾರವು, ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಣದಲ್ಲಿರಿಸಲು, ಹಾಗೂ ಅನೇಕ ರೋಗಗಳಿಂದ ರಕ್ಷಿಸಲು ಸಹಾಯ ಮಾಡುತ್ತದೆ. ಪೌಷ್ಟಿಕ ಆಹಾರವನ್ನು ನಿರ್ದಿಷ್ಟ ಪ್ರಮಾಣದಲ್ಲಿ, ಸರಿಯಾದ ಸಮಯದಲ್ಲಿ ಸೇವಿಸಬೇಕು. ಅಂದರೆ ಮಧುಮೇಹಿಗಳು ದಿನವೊಂದಕ್ಕೆ ಒಂದೇ ಊಟದಲ್ಲಿ ದೊಡ್ಡ ಪ್ರಮಾಣದಲ್ಲಿ (ಎರಡರಿಂದ-ಮೂರು ಬಾರಿ ಮುಖ್ಯ ಊಟ) ಸೇವಿಸುವುದರ ಬದಲು ಪ್ರತಿ ಎರಡೂವರೆ ಮೂರು ಗಂಟೆಯ ನಡುವೆ, ಮೂರು ಬಾರಿ ಊಟ ಮತ್ತು ಎರಡು ಬಾರಿ ಲಘು ಉಪಾಹಾರ ಸೇವನೆಯ ಯೋಜನೆ ಉತ್ತಮ.

ಕಾರ್ಬೋಹೈಡ್ರೇಟ್ ಆಹಾರಗಳು ಗ್ಲೂಕೋಸ್ ಮಟ್ಟವನ್ನು ಹೆಚ್ಚಿಸುತ್ತದೆ ಎಂದು ಊಹಿಸುತ್ತಾರೆ. ಇದು ತಪ್ಪಾದ ಮಾಹಿತಿ. ಮಧುಮೇಹಿಗಳು ತಮ್ಮ ಆಹಾರದಲ್ಲಿ ಕಾರ್ಬೋಹೈಡ್ರೇಟ್‌ಗಳನ್ನು ಸೇರಿಸಿಕೊಳ್ಳಬಹುದು. ಆದರೆ ಸಂಕೀರ್ಣ ಕಾರ್ಬೋಹೈಡ್ರೇಟ್, ಅಂದರೆ ಸಂಪೂರ್ಣ ಧಾನ್ಯಗಳು, ಸಿರಿಧಾನ್ಯಗಳು, ಗೋಧಿ, ಕಂದುಅಕ್ಕಿ, ಜೋಳ, ರಾಗಿ, ನವಣೆ, ಓಟ್ಸ್, ಬಾರ್ಲಿಗಳನ್ನು ಆಯ್ಕೆ ಮಾಡುವುದು ಉತ್ತಮ. ಇವುಗಳಲ್ಲಿ ನಾರಿನಾಂಶ ಅಧಿಕವಾಗಿದ್ದು, ಆಹಾರಗಳು ಜೀರ್ಣವಾಗಲು ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ ರಕ್ತದಲ್ಲಿ ಸಕ್ಕರೆ ಮಟ್ಟವನ್ನು ನಿಧಾನವಾಗಿ ಹೆಚ್ಚಾಗುತ್ತದೆ. ಪ್ರೊಟೀನ್ ಸಮೃದ್ಧ ಆಹಾರಸೇವನೆ ಕೂಡ ಇನ್ಸುಲಿನ್ ಪ್ರತಿರೋಧ ಸುಧಾರಿಸಲು ಸಹಕಾರಿ ಆಗಿದೆ. ಅದಲ್ಲದೆ ಬೇಗನೆ ಹಸಿವಾಗುವುದಿಲ್ಲ ಮತ್ತು ಹೊಟ್ಟೆ ತುಂಬಿದಂತಿರುವುದು.

ಪ್ರಾಣಿಮೂಲಗಳಾದ ಮೊಟ್ಟೆ, ಕೋಳಿ, ಮೀನು, ಹಾಲು ಹಾಗೂ ಹಾಲಿನ ಉತ್ಪನ್ನಗಳು ಪ್ರೊಟೀನ್‌ಭರಿತವಾಗಿವೆ. ಮೊಟ್ಟೆ ಉತ್ತಮ ಮಧುಮೇಹಿ ಆಹಾರ. ಇದರ ಬಿಳಿಭಾಗವು ಪ್ರೊಟೀನ್‌ನಿಂದ ಮತ್ತು ಹಳದಿ ಭಾಗವು ಉತ್ತಮ ಕೊಬ್ಬು ಮತ್ತು ಉತ್ತಮ ಕೊಲೆಸ್ಟ್ರಾಲ್ ಹಾಗೂ ವಿಟಮಿನ್, ಖನಿಜಲವಣಗಳಿಂದ ಸಮೃದ್ಧವಾಗಿದೆ. ಮೊಟ್ಟೆಯು ಕಡಿಮೆ ಗ್ಲೈಸೆಮಿಕ್ ಸೂಚ್ಯಂಕವನ್ನು ಹೊಂದಿರುವುದು. ಆದ್ದರಿಂದ ನಿತ್ಯ ಒಂದು ಸಂಪೂರ್ಣ ಮೊಟ್ಟೆ ಅಥವಾ ವಾರಕ್ಕೆ 4-5ರಂತೆ ಹಳದಿ ಭಾಗವನ್ನು ಸೇವಿಸುವುದು ಸೂಕ್ತ. ಮೀನು ಆರೋಗ್ಯಕರ ಮತ್ತು ಪೋಷಣಾಭರಿತ ಆಹಾರವಾಗಿದ್ದು ಉತ್ತಮ ಕೊಲೆಸ್ಟ್ರಾಲ್ ಹಾಗೂ ವಿಟಮಿನ್ ಖನಿಜಾಂಶಗಳು ಅಡಕವಾಗಿದೆ. ಕೋಳಿಮಾಂಸದ ಸೇವನೆ ವಾರಕ್ಕೆ ಒಂದು ಬಾರಿಯಂತಿರಲಿ. ಅದರಲ್ಲೂ ಕಡಿಮೆ ಕೊಬ್ಬಿನಾಂಶವಿರುವ ಚರ್ಮರಹಿತ ಮಾಂಸ ಸೂಕ್ತ. ಸೇವಿಸಬಹುದಾದ ಹಾಲು ಮತ್ತು ಹಾಲಿನ ಉತ್ಪನ್ನಗಳೆಂದರೆ ಕೆನೆರಹಿತ ಹಾಲು, ಮೊಸರು, ಮಜ್ಜಿಗೆ.

ತರಕಾರಿಗಳು ಹಾಗೂ ಸೊಪ್ಪುಗಳು ಅನೇಕ ಜೀವಸತ್ವ ಮತ್ತು ಖನಿಜ ಲವಣಗಳ ಆಗರವಾಗಿವೆ. ಇವುಗಳು ಅತ್ಯಂತ ಪೌಷ್ಟಿಕ ಮತ್ತು ಕಡಿಮೆ ಕ್ಯಾಲೋರಿಗಳನ್ನು ಹೊಂದಿರುತ್ತವೆ. ನಾವು ಸೇವಿಸುವ ಪಿಷ್ಟರಹಿತ ಆಹಾರಗಳು (ಬೆಂಡೆಕಾಯಿ, ಬೀನ್ಸ್, ಸೋರೆಕಾಯಿ, ಹಾಗಲಕಾಯಿ, ಸೌತೆಕಾಯಿ, ನುಗ್ಗೆಕಾಯಿ) – ಇವುಗಳ ಸೇವನೆ ಉತ್ತಮ. ಭೂಮಿ ಅಡಿಯಲ್ಲಿ ಬೆಳೆಯುವಂತಹ ಕೆಲವು ತರಕಾರಿಗಳು (ಉದಾ. ಗೆಡ್ಡೆಗೆಣಸುಗಳಾದ ಆಲೂಗಡ್ಡೆ, ಸಿಹಿಗೆಣಸು) – ಇವುಗಳಲ್ಲಿ ಪಿಷ್ಟ ಅಧಿಕವಾಗಿದ್ದು, ಮಿತವಾಗಿ ಬಳಸುವುದು ಒಳ್ಳೆಯದು. ಸಂಪೂರ್ಣ ನಿಷೇಧ ಬೇಡ.

ಹಸಿರು ಎಲೆತರಕಾರಿಗಳಾದ ಪಾಲಕ್‌ಸೊಪ್ಪು, ನುಗ್ಗೆಸೊಪ್ಪು, ಮೆಂತ್ಯೆಸೊಪ್ಪು, ಹರಿವೆಸೊಪ್ಪು, ಕರಿಬೇವಿನ ಸೊಪ್ಪು, ಪುದೀನಾಸೊಪ್ಪುಗಳನ್ನು, ಪಲ್ಯ, ಸಾಂಬಾರ್, ಸಲಾಡ್, ಸೂಪ್, ರೊಟ್ಟಿ, ದೋಸೆಗಳಲ್ಲಿ ಉಪಯೋಗಿಸಬೇಕು.

ಮಧುಮೇಹಿಗಳು ದಿನಕ್ಕೆ ಕನಿಷ್ಠ ಒಂದು ಹಣ್ಣನ್ನು ಸೇವಿಸಬಹುದು. ಶಿಫಾರಸ್ಸು ಮಾಡುವ ಹಣ್ಣುಗಳೆಂದರೆ: ಸೇಬು, ಕಿತ್ತಳೆ, ದಾಳಿಂಬೆ, ಕರಬೂಜ, ಸಿಟ್ರಸ್ ಹಣ್ಣುಗಳು (ಮೂಸಂಬಿ, ಕಿತ್ತಳೆ, ನಿಂಬೆಹಣ್ಣು, ನೆಲ್ಲಿಕಾಯಿ), ಪೇರಳೆ, ಪಿಯರ್, ಪಪ್ಪಾಯಿ (ದಿನಕ್ಕೆ 50 ಗ್ರಾಂರಂತೆ) ಇವುಗಳಲ್ಲಿ ನಾರಿನಾಂಶ ಹೇರಳವಾಗಿದ್ದು ದೇಹದಲ್ಲಿ ಸಕ್ಕರೆ ಹೀರಿಕೊಳ್ಳುವಿಕೆ ಕಡಿಮೆ ಮಾಡುತ್ತವೆ. ಅಧಿಕ ಗ್ಲೈಸೆಮಿಕ್ ಸೂಚ್ಯಂಕವಿರುವ ಹಣ್ಣುಗಳೆಂದರೆ ಮಾವಿನ ಹಣ್ಣು, ಚಿಕ್ಕು, ಹಲಸಿನಹಣ್ಣು, ಅನಾನಸ್ – ಇವು ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ತ್ವರಿತವಾಗಿ ಹೆಚ್ಚಿಸುತ್ತವೆ.

ಒಣಹಣ್ಣುಗಳನ್ನು (ಬಾದಾಮಿ, ವಾಲ್ನಟ್ಸ್) ಲಘು ಆಹಾರವಾಗಿ ಕೆಲವು ಬೆರಳೆಣಿಕೆಯಷ್ಟನ್ನು ನಿತ್ಯ ಸೇವಿಸುವುದರಿಂದ ರಕ್ತದಲ್ಲಿನ ಸಕ್ಕರೆ ಮೇಲೆ ಸಕಾರಾತ್ಮಕ ಪರಿಣಾಮ ಬೀರುವುದಲ್ಲದೆ, ಹೃದಯಸಂಬಂಧಿ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತವೆ. ಬೀಜಗಳಾದ ಮೆಂತ್ಯೆಬೀಜ, ಅಗಸೆಬೀಜ, ಚಿಯಾ ಬೀಜಗಳು, ಸೂರ್ಯಕಾಂತಿಬೀಜ, ಕುಂಬಳಕಾಯಿ ಬೀಜ, ಬಿಳಿಯ ಎಳ್ಳು ಮುಂತಾದವುಗಳಲ್ಲಿ ನಾರಿನಾಂಶ, ಖನಿಜಾಂಶಗಳು, ಕ್ಯಾಲ್ಸಿಯಂ ಜೀವಸತ್ವಗಳು, ಉತ್ತಮ ಕೊಬ್ಬು ಹೇರಳವಾಗುವುದರಿಂದ ಇವನ್ನು ಕಡೆಗಣಿಸುವಂತಿಲ್ಲ. ಮೆಂತ್ಯೆ, ದಾಲ್ಚೀನಿ, ಅರಿಶಿನ, ಅಲೋವೇರಾಗಳಲ್ಲಿ ಆ್ಯಂಟಿ-ಡಯಾಬೀಟಿಸ್ ಗುಣವಿರುವುದರಿಂದ ರಕ್ತಸಕ್ಕರೆ ನಿಯಂತ್ರಣದಲ್ಲಿ ಪರಿಣಾಮ ಬೀರುವುದು. ನೀರು, ಮಜ್ಜಿಗೆ, ನಿಂಬೆ ನೀರು, ಮೆಂತ್ಯೆನೀರು, ಬಾರ್ಲಿನೀರಿನ ರೂಪಗಳಲ್ಲಿ ಸೇವಿಸಬೇಕು. ಸಾಕಷ್ಟು ನೀರನ್ನು ಕುಡಿಯುವುದರಿಂದ ಆಗಾಗ ಮೂತ್ರವಿಸರ್ಜನೆ ಮತ್ತು ಬಾಯಾರಿಕೆಗಳಂತಹ ಮಧುಮೇಹದ ಲಕ್ಷಣಗಳನ್ನು ನಿವಾರಿಸಲು ಸಾಧ್ಯವಾಗುತ್ತದೆ. ಆರೋಗ್ಯಕರ ಮೂತ್ರಪಿಂಡದ ಕಾರ್ಯವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ.

ಇವುಗಳಿಂದ ದೂರವಿರಿ: ಮಧುಮೇಹಿಗಳು ಆಹಾರಗಳಲ್ಲಿ ಯಾವ ಆಹಾರವನ್ನು ಸೇವಿಸಬೇಕು ಎಂಬುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಯಾವ ಆಹಾರವನ್ನು ಮಿತಿಗೊಳಿಸಬೇಕು (ಸೇವಿಸಬಾರದು) ಎಂಬುದನ್ನು ಅರ್ಥಮಾಡಿಕೊಳ್ಳುವುದು. ಸೋಡಾ, ಸಿಹಿ ಚಹಾ, ಸಕ್ಕರೆ ಸಿಹಿಯ ಪಾನೀಯಗಳು, ತಂಪು ಪಾನೀಯಗಳು, ಹಾರ್ಲಿಕ್ಸ್, ಬೂಸ್ಟ್, ಜ್ಯೂಸ್ – ಇವನ್ನು ಸೇವಿಸಬಾರದು. ಹಣ್ಣುಗಳನ್ನು ಜ್ಯೂಸ್ ಮಾಡುವಾಗ ಅದರಲ್ಲಿನ ನಾರಿನ ಅಂಶವು ನಷ್ಟವಾಗುತ್ತದೆ.

ಬಿಳಿ ಬ್ರೆಡ್, ಪಾಸ್ತಾ, ಮೈದಾ, ಮತ್ತು ಬಿಳಿ ಅಕ್ಕಿಯಂಥ ಸಂಸ್ಕರಿಸಿದ ಧಾನ್ಯಗಳು ಹೆಚ್ಚಿನ ಕಾರ್ಬೋಹೈಡ್ರೇಟ್ ಹೊಂದಿದ್ದು, ಕಡಿಮೆ ನಾರಿನಾಂಶವನ್ನು ಹೊಂದಿರುತ್ತವೆ. ಬಿಳಿ ಅಕ್ಕಿಯ ಅನ್ನದಲ್ಲಿನ ನಾರಿನಾಂಶ ಮತ್ತು ಪೋಷಕಾಂಶಗಳು ಪಾಲಿಶ್ ಮಾಡುವಾಗ ನಷ್ಟವಾಗುತ್ತವೆ. ಸಂಸ್ಕರಿಸಿದ ಸಕ್ಕರೆ, ಕಾರ್ನ್, ಸಿರಪ್‌ಗಳು, ಫ್ರಕ್ಟೋಸ್, ಜಾಮ್, ಮಾಲ್ಟೋ ಡೆಕ್ಸ್ಟ್ರಿನ್, ಸುಕ್ರಲೋಸ್ ಮತ್ತು ಕೃತಕ ಸಿಹಿಕಾರಕಗಳನ್ನು ಒಳಗೊಂಡಿರುವಂಥ ಆಹಾರಗಳ ಸೇವನೆ ಬೇಡ.

ಕೇವಲ ಸಿಹಿಪದಾರ್ಥಗಳಿಂದ ದೂರವಿದ್ದರೆ ಸಕ್ಕರೆಕಾಯಿಲೆ ನಿಯಂತ್ರಣದಲ್ಲಿರಿಸಲು ಸಾಧ್ಯವಿಲ್ಲ. ಬಾಯಿರುಚಿಗಾಗಿ ಸೇವಿಸುವ ಅಧಿಕ ಕೊಬ್ಬಿನಾಂಶ, ಕೆಟ್ಟ ಕೊಲೆಸ್ಟ್ರಾಲ್ ಹಾಗೂ ಪೌಷ್ಟಿಕಾಂಶರಹಿತ ಆಹಾರಗಳಾದ ಸಂಸ್ಕರಿಸಿದ ಮಾಂಸ, ಅಧಿಕ ಕೊಬ್ಬಿನಾಂಶವಿರುವ ಹಾಲಿನ ಉತ್ಪನ್ನಗಳು (ಚೀಸ್, ಬೆಣ್ಣೆ), ಎಣ್ಣೆಯಲ್ಲಿ ಕರಿದ ತಿಂಡಿಗಳು, ಫಾಸ್ಟ್ ಫುಡ್‌ಗಳು ಬೇಕರಿ ತಿಂಡಿಗಳು, ಹುರಿದ ಆಹಾರಗಳು, ಅಧಿಕ ಉಪ್ಪಿನಂಶವಿರುವ ಆಹಾರಗಳು ಬೊಜ್ಜು, ಅಧಿಕ ಕೊಲೆಸ್ಟ್ರಾಲ್, ಜೀರ್ಣಕ್ರಿಯೆ ಸಮಸ್ಯೆ, ಹೃದಯಸಮಸ್ಯೆಗಳಂಥ ಹಲವು ಕಾಯಿಲೆಗಳಿಗೆ ಕಾರಣವಾಗುತ್ತವೆ. ದೀರ್ಘಾವಧಿಯಲ್ಲಿ ಈ ಆಹಾರಗಳು ಇನ್ಸುಲಿನ್ ಮಟ್ಟದಲ್ಲಿ ಅಸಮತೋಲನಕ್ಕೆ ಕಾರಣವಾಗುತ್ತವೆ. ಹೀಗಾಗಿ ಇಂತಹ ಆಹಾರಗಳಿಂದ ಮಧುಮೇಹಿಗಳು ದೂರವಿರುವುದು ಒಳ್ಳೆಯದು.

(ಲೇಖಕಿ ಆಹಾರತಜ್ಞೆ)

ನಿಮ್ಮೊಂದಿಗೆ ನೀವೇ ಮಾತನಾಡಿಕೊಳ್ಳುವಿರಾ?

ಡಾ. ಕೆ. ಎಸ್. ಪವಿತ್ರ

ಬೆಳಿಗ್ಗೆ ಅಲಾರಾಂ ಹೊಡೆದುಕೊಳ್ಳುತ್ತದೆ. ನಮ್ಮಷ್ಟಕ್ಕೆ ನಾವೇ 'ಯಾಕೆ ಇಷ್ಟು ಬೇಗ ಅಲಾರಾಂ ಸೆಟ್ ಮಾಡಿಟ್ಟೆ!' ಎಂದು ಬೈದುಕೊಂಡೇ ಏಳುತ್ತೇವೆ. ಕಾರು ಡ್ರೈವ್ ಮಾಡಿಕೊಂಡು ಹೋಗುತ್ತಿದ್ದೀರಿ. ದನಕ್ಕೆ ಗುದ್ದುತ್ತೀರಿ. 'ಯಾರ ಮುಖ ನೋಡಿದ್ದೆನೋ' ಎಂದು ನಿಮಗೇ ಹೇಳಿಕೊಳ್ಳುತ್ತೀರಿ. ಕೆಲವೊಮ್ಮೆ ನಮಗೇ ಅರಿವಾಗದಂತೆ ಜೋರಾಗಿಯೇ ಮಾತನಾಡುತ್ತಿರುತ್ತೇವೆ.

ತನ್ನಷ್ಟಕ್ಕೆ ತಾನೇ ಮಾತನಾಡುವ ಇಂಥ ಪ್ರವೃತ್ತಿ ಮನೋವೈದ್ಯಕೀಯ ವಿಜ್ಞಾನದ ಪ್ರಕಾರ ಒಂದು ಸಹಜ ಪ್ರಕ್ರಿಯೆ. ಮನುಷ್ಯರಾದವರೆಲ್ಲರೂ ದೈನಂದಿನ ಜೀವನದಲ್ಲಿ ಹೀಗೆ ತಮ್ಮೊಂದಿಗೆ ತಾವೇ ಮಾತನಾಡುವುದು ತುಂಬ ಸಾಮಾನ್ಯ. ಇದು ಮಾನಸಿಕ ಅಸ್ವಸ್ಥತೆಯಲ್ಲಿ ಕಾಣುವ ಭ್ರಮೆಗೆ ಪ್ರತಿಕ್ರಿಯಿಸುವ ಲಕ್ಷಣಕ್ಕಿಂತ ಬಹು ಭಿನ್ನ. ವಾಸ್ತವದೊಂದಿಗೆ ಸಂಪರ್ಕ ಕಳೆದುಕೊಂಡು, ಸುತ್ತಮುತ್ತಲ ಪರಿವೆ ಇಲ್ಲದೆ ವ್ಯಕ್ತಿ ಮಾತನಾಡುವುದು ಅಸ್ವಸ್ಥತೆಯ ಲಕ್ಷಣ. ಆದರೆ ನಮ್ಮ ಮನಸ್ಸಿನೊಂದಿಗೆ ನಾವೇ ಮಾತನಾಡಿ, ಸುತ್ತಮುತ್ತಲ ಅರಿವನ್ನೂ ಕಾಯ್ದುಕೊಂಡಿರುವ ದೈನಂದಿನ ಪ್ರವೃತ್ತಿ ಮಾನವ ಮನಸ್ಸಿನ ಒಂದು ಸಹಜ ಗುಣ.

ನಾವೇಕೆ ಹೀಗೆ ನಮ್ಮಷ್ಟಕ್ಕೆ ನಾವೇ ಮಾತಾಡುತ್ತೇವೆ? ಹೀಗೆ ಮಾತನಾಡುವುದರಿಂದ ಮನಸ್ಸಿಗೆ ಆಗುವ ಪ್ರಯೋಜನವೇನು? ನಮ್ಮಷ್ಟಕ್ಕೆ ಮಾತನಾಡುವುದು ಅಥವಾ 'Self talk' ಅನ್ನು 'ತಲೆಯೊಳಗಿನ ಮಾತು - ಒಳಧ್ವನಿ' ಎಂದು ಕರೆಯಬಹುದು. ಮನಸ್ಸಿನೊಳಗೆ ನಡೆಯುವ ಲೆಕ್ಕಾಚಾರ, ಯೋಚನೆ-ಭಾವನೆಗಳಿಗಿಂತ ಇದು ಪ್ರತ್ಯೇಕವಾಗಿ ನಿಲ್ಲುತ್ತದೆ. ಈ ಯೋಚನೆ-ಭಾವನೆಗಳನ್ನು ಸ್ಪಷ್ಟ ಮಾತಿನ ರೂಪದಲ್ಲಿ ಅಂದರೆ ಒಂದು ದೈಹಿಕ ಕ್ರಿಯೆಯಾಗಿ ವ್ಯಕ್ತಪಡಿಸಿದಾಗ ಅದು ನಮ್ಮಷ್ಟಕ್ಕೆ ನಾವೇ ಆಡುವ ಮಾತಾಗುತ್ತದೆ. ಈ ಮಾತು ಜೋರಾಗಿ, ಇನ್ನೊಬ್ಬರಿಗೆ ಕೇಳುವಂತೆ ಹೊರ ಬೀಳಲೇಬೇಕೆಂದೂ ಇಲ್ಲ. ಆದರೆ ಮನಸ್ಸಿನಲ್ಲಿಯೇ ಆದರೂ ಅದು ಒಂದು ಸ್ಪಷ್ಟ ಮಾತಿನ ರೂಪ ತಳೆದಿರುತ್ತದೆ. ಇತರರು ಏನೆನ್ನುತ್ತಾರೆ ಎಂಬುದನ್ನು ಅವರು ಗಮನಿಸಲು ಹೋಗುವುದಿಲ್ಲ ಎಂಬ ಕಾರಣಕ್ಕೆ ಮಕ್ಕಳಲ್ಲಿ ಇದು ಹೆಚ್ಚು.

ಸುಮಾರು 100 ವರ್ಷಗಳ ಹಿಂದೆ, ರಷ್ಯಾದ ಮನೋವಿಜ್ಞಾನಿ ಲೆವ್ ಮೈಗೋಟ್‌ಸ್ಕಿ ಮಕ್ಕಳಲ್ಲಿ ಆಟವಾಡುವಾಗ ಕಂಡು ಬರುವ ಈ ರೀತಿಯ ತನ್ನಷ್ಟಕ್ಕೆ ತಾನೇ ಮಾತನಾಡುವ ಕ್ರಿಯೆ ಬೆಳವಣಿಗೆಯ ಬಹುಮುಖ್ಯ ಮೈಲಿಗಲ್ಲು ಎಂದು ಪ್ರತಿಪಾದಿಸಿದ. ಇತರರೊಂದಿಗೆ ತಾನು ನಡೆಸಿದ ಸಂಭಾಷಣೆಗಳನ್ನು ಮಕ್ಕಳು ಮತ್ತೆ ಮತ್ತೆ ಪುನರ್ ಮನನ ಮಾಡುವುದರ ಸಂಕೇತ ಇಂಥ ಮಾತು; ಇದು ತನ್ನ ನಡವಳಿಕೆ-ಭಾವನೆಗಳನ್ನು ಮಗು ಪರಿಷ್ಕರಿಸಿಕೊಳ್ಳುವ ಪ್ರಮುಖ ಹಂತ ಎಂದು ಮೈಗೋಟ್‌ಸ್ಕಿ ಹೇಳಿದ. ಕ್ರಮೇಣ ದೊಡ್ಡವರಾದಂತೆ ಈ ಮಾತು ಒಳಮಾತಾಗಿ ಬದಲಾಗಿ ಒಂದು ಖಾಸಗಿಯಾದ ಒಳ ಸಂಭಾಷಣೆಯಾಗಿ ಬದಲಾಗುತ್ತದೆ ಎಂದು ಆತ ತನ್ನ ಸಿದ್ಧಾಂತವನ್ನು ರೂಪಿಸಿದ. ಮನೋವೈಜ್ಞಾನಿಕ ಸಂಶೋಧನೆಗಳ ಪ್ರಕಾರ, ಅಂತರಂಗದಲ್ಲಿ ನಡೆಯುವ ಈ ಸ್ವ-ಸಂಭಾಷಣೆ ಯೋಜನೆಗಳನ್ನು ಮಾಡುವುದಕ್ಕೆ, ಕಷ್ಟದ ಸನ್ನಿವೇಶಗಳನ್ನು ಎದುರಿಸುವುದಕ್ಕೆ, ಪೂರ್ತಿ ದಿನ ಕೆಲಸ ಮಾಡುವ ಪ್ರೇರಣೆಗೆ ಬಲು ಅಗತ್ಯ. ದೈಹಿಕ-ಮಾನಸಿಕ ಆರೋಗ್ಯದ ಮೇಲೂ ಅದು ಪರಿಣಾಮ ಬೀರಬಲ್ಲದು. ಅಧ್ಯಯನಗಳಲ್ಲಿ ಕುತೂಹಲಕಾರಿ ಅಂಶವೊಂದು ಕಂಡು ಬಂದಿದೆ. ಯಾವ ಅಭ್ಯರ್ಥಿಗಳು ಕೊಟ್ಟಿರುವ ಸೂಚನೆಗಳನ್ನು ಜೋರಾಗಿ ಓದಿಕೊಂಡು ನಂತರ ಪ್ರಶ್ನಾವಳಿ /ಪ್ರಯೋಗವನ್ನು ಉತ್ತರಿಸಿದರೋ ಅವರು ಮನಸ್ಸಿನಲ್ಲಿಯೇ ಓದಿಕೊಂಡು ಉತ್ತರಿಸಿದವರಿಗಿಂತ ಉತ್ತಮವಾಗಿ ಫಲಿತಾಂಶ ಪಡೆದಿದ್ದರು. ಮತ್ತೊಂದು ಅಧ್ಯಯನದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಕೆಲವು ವಸ್ತುಗಳನ್ನು ನೋಡಿ ಹುಡುಕಬೇಕಿತ್ತು. ಯಾರು ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಂಡು, ಹುಡುಕಲು ಯತ್ನಿಸಿದ್ದರೋ ಅವರ ಸಫಲತೆ ಹೆಚ್ಚಾಗಿತ್ತು. ಮಕ್ಕಳಲ್ಲಿ ಸುಮಾರು ಒಂದೂವರೆ-ಎರಡು ವರ್ಷ ವಯಸ್ಸಿನ ವೇಳೆಗೆ ಆರಂಭವಾಗುವ ಈ 'ಸ್ವ-ಮಾತು' ಹೊಸ ಚಲನಾ ಕೌಶಲಗಳನ್ನು ಕಲಿಯುವುದರೊಂದಿಗೆ ಜೊತೆಯಾಗುವುದು ಕುತೂಹಲಕಾರಿ ಸಂಗತಿ. ವಸ್ತುಗಳನ್ನು ಎತ್ತುವುದು-ಇಡುವುದು, ಶೂಲೇಸ್ ಕಟ್ಟಿಕೊಳ್ಳುವುದು ಇತ್ಯಾದಿಗಳಿಗೆ ಇದು ವಿಸ್ತರಿಸುತ್ತದೆ.

ಪರೀಕ್ಷೆ-ಪ್ರದರ್ಶನ-ಸ್ವರ್ಧೆ-ಕ್ರೀಡಾ ಸ್ಪರ್ಧೆಗಳನ್ನು ಎದುರಿಸುವಾಗ ಇಂಥ 'ಸ್ವಮಾತು' ಹುರಿದುಂಬಿಸುವ, ಸ್ಥಿರತೆ ಕಾಯ್ದುಕೊಳ್ಳುವ ನಾವೇನೂ ದಿನನಿತ್ಯ ಸ್ಪರ್ಧೆ/ಪರೀಕ್ಷೆಗಳಿಗೆ ಹೋಗುವುದಿಲ್ಲವಷ್ಟೆ. ಹಾಗಿದ್ದ ಮೇಲೆ ಈ ಮನಸ್ಸಿನ ಕೌಶಲ ನಾವೇಕೆ ಉಪಯೋಗಿಸಬೇಕು ಎಂಬ ಪ್ರಶ್ನೆ ಸಹಜ. ಮನೋವೈದ್ಯಕೀಯ ಅಧ್ಯಯನಗಳ ಪ್ರಕಾರ, ನಮಗೆ ನಾವೇ ಮತ್ತೊಬ್ಬ ವ್ಯಕ್ತಿಯಂತೆ ಸಲಹೆ-ಸೂಚನೆ-ನಿರ್ದೇಶನ ಕೊಟ್ಟುಕೊಳ್ಳುವುದು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಅತ್ಯುತ್ತಮ ತಂತ್ರ. ಮನಸ್ಸಿಗೆ ಹೆದರಿಕೆಯುಂಟಾದಾಗ, ಆಘಾತವಾದಾಗ, ದುಃಖವಾದಾಗ, ಆತಂಕವಾದಾಗ ಈ ರೀತಿಯ ಮಾತು ಅವುಗಳಿಂದ ಹೊರಬರಲು ಸಹಾಯಕವಾಗಬಹುದು.

ಹೀಗೆ ಮಾತನಾಡಿಕೊಳ್ಳುವಾಗ ನಮ್ಮನ್ನೇ ನಾವು ಮತ್ತೊಬ್ಬ ವ್ಯಕ್ತಿಯಂತೆ ಭಾವಿಸಿ ಸಂಬೋಧಿಸುವುದೂ ಉಪಯುಕ್ತವೇ. ಅಧ್ಯಯನವೊಂದರಲ್ಲಿ ವ್ಯಕ್ತಿಗಳ ಮಿದುಳಿನ ಗ್ರಾಫ್ – 'ಇಇಜಿ'– ದಾಖಲಿಸುತ್ತಾ ಕೆಲವು ಆತಂಕಕಾರಿಯಾದ ಚಿತ್ರಗಳನ್ನು ತೋರಿಸಲಾಯಿತು. ಉದಾಹರಣೆಗೆ, ಗೀತಾ ಎಂಬ ವ್ಯಕ್ತಿ 'ಇದು ಗೀತಾಳಿಗೆ ಆತಂಕ ತರುತ್ತಿದೆ' ಎಂದು ತನ್ನನ್ನು ಮತ್ತೊಬ್ಬ ವ್ಯಕ್ತಿಯಂತೆ ಸಂಬೋಧಿಸಿಕೊಂಡಾಗ, ಅವರ ಮಿದುಳು ಕಡಿಮೆ ಆತಂಕದ ಪ್ರತಿಕ್ರಿಯೆಯನ್ನು ದಾಖಲಿಸಿತ್ತು. ಎಫ್.ಎಂ.ಆರ್.ಐ. ಅಧ್ಯಯನಗಳಲ್ಲಿಯೂ ಅಷ್ಟೆ. ನೋವನ್ನು ಸೂಕ್ಷ್ಮವಾಗಿ ಗ್ರಹಿಸುವ ಮಿದುಳಿನ ಕೇಂದ್ರಗಳು ಹೀಗೆ ಮತ್ತೊಬ್ಬ ವ್ಯಕ್ತಿಯಂತೆ ಸಂಬೋಧಿಸಿ ಮಾತನಾಡಿಕೊಂಡು ಪ್ರತಿಕ್ರಿಯಿಸದ ವ್ಯಕ್ತಿಗಳಲ್ಲಿ ನೋವಿನ ಗ್ರಹಿಕೆ ಕಡಿಮೆಯಾಗಿದ್ದು ಕಂಡು ಬಂತು. ಈ ಸಂಶೋಧನೆಗಳು ಏನನ್ನು ಹೇಳುತ್ತಿವೆ? ನಮ್ಮಷ್ಟಕ್ಕೆ ನಾವೇ ಮಾತನಾಡುವುದು, ಸಮಸ್ಯೆ-ನೋವುಗಳನ್ನು ನಾವಾಗಿ ಅನುಭವಿಸದೆ, ದೂರ ನಿಂತು ನೋಡುವ ಕಿಂಚಿತ್ ಅಂತರವನ್ನು ಸಾಧ್ಯವಾಗಿಸುತ್ತದೆ. ನಮ್ಮನ್ನೇ ಮತ್ತೊಬ್ಬ ವ್ಯಕ್ತಿಯಂತೆ ಸಂಬೋಧಿಸಿ ಮಾತನಾಡಿಕೊಳ್ಳುವಾಗ, ನಕಾರಾತ್ಮಕವಾಗಿ ಮಾತನಾಡುವುದು, ನಡೆದ ನೋವು ತರುವ ಘಟನೆಯನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಾ ಮಾತನಾಡಿಕೊಳ್ಳುವುದು - ಇವುಗಳನ್ನು ತಡೆ ಹಿಡಿಯುವುದೂ ಅತ್ಯಗತ್ಯ. ಈ ರೀತಿಯ ನಕಾರಾತ್ಮಕ ಮಾತು ಆತಂಕವನ್ನು ಹೆಚ್ಚಿಸುತ್ತದೆ.

ನಿಮ್ಮಿಷ್ಟಕ್ಕೆ ನೀವೇ ಮಾತನಾಡುವುದು ಖಂಡಿತ ಕಾಯಿಲೆಯಲ್ಲ. ಆದರೆ ಅದು ನಿಮ್ಮ ಬಗ್ಗೆ ನೀವು ಪ್ರೀತಿ-ಕರುಣೆಗಳಿಂದ ಹುರಿದುಂಬಿಸಿ ಮಾತನಾಡುವ ಧ್ವನಿಯಾಗಿರಬೇಕಷ್ಟೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

20) ಒಂದು ಎಕ್ಸ್‌ಪ್ರೆಸ್ ರೈಲು ಮೈಸೂರು ಮತ್ತು ಬೆಂಗಳೂರಿನ ನಡುವಿನ 132 km ದೂರವನ್ನು ಕ್ರಮಿಸಲು ಪ್ಯಾಸೆಂಜರ್ ರೈಲಿಗಿಂತ 1 ಘಂಟೆ ಕಡಿಮೆ ಸಮಯವನ್ನು ತೆಗೆದುಕೊಳ್ಳುತ್ತದೆ (ಮಧ್ಯಂತರ ನಿಲ್ದಾಣಗಳಲ್ಲಿ ರೈಲು ನಿಲ್ಲುವ ಸಮಯವನ್ನು ಪರಿಗಣಿಸಿಲ್ಲ). ಎಕ್ಸ್‌ಪ್ರೆಸ್ ರೈಲಿನ ಸರಾಸರಿ ಜವವು ಪ್ಯಾಸೆಂಜರ್ ರೈಲಿನ ಸರಾಸರಿ ಜವಕ್ಕಿಂತ 11 km/h ಹೆಚ್ಚಾಗಿದ್ದರೆ, ಆ ಎರಡೂ ರೈಲುಗಳ ಸರಾಸರಿ ಜವವನ್ನು ಕಂಡುಹಿಡಿಯಿರಿ

ಪರಿಹಾರ:– (.........ಹಿಂದಿನ ಸಂಚಿಕೆಯಿಂದ)

$$x = \frac{-b \pm \sqrt{b^2 - 4ac}}{2a}$$

$$= \frac{-11 \pm \sqrt{(11)^2 - 4(1)(-1452)}}{2(1)}$$

$$= \frac{-11 \pm \sqrt{121 + 5808}}{2}$$

$$= \frac{-11 \pm \sqrt{5929}}{2}$$

$$= \frac{-11 \pm 77}{2}$$

$$= \frac{-11 + 77}{2}, \quad \frac{-11 - 77}{2}$$

$$= \frac{66}{2}, \quad \frac{-88}{22}$$

$$= 33, \quad -44$$

ಪ್ಯಾಸೆಂಜರ್ ರೈಲಿ ಸರಾಸರಿ ವೇಗ=33

ಎಕ್ಸ್‌ಪ್ರೆಸ್ ರೈಲಿ ಸರಾಸರಿ ವೇಗ $=(x + 11)$ km/h

$= 33 + 11 = 44$ km/h

21) ΔPQRನಲ್ಲಿ $\angle P$ಯು ಲಂಬಕೋನವಾಗಿದೆ. $PM \perp QR$ ಆಗುವಂತೆ QR ಮೇಲೆ M ಒಂದು ಬಿಂದು. ಆದರೆ $PM^2 = QM \times MR$ ಎಂದು ಸಾಧಿಸಿ

ಪರಿಹಾರ:– ΔPQR ನಲ್ಲಿ Pಯು ಲಂಬಕೋನವಾಗಿದೆ.

$PM \perp QR$ ಆಗುವಂತೆ QR ಮೇಲೆ Mಒಂದು ಬಿಂದುವಾಗಿದೆ (ದತ್ತ)



ಸಾಧಿಸಿ:– $PM^2 = QM \times MR$

ΔPQMದಲ್ಲಿ ಪೈಥಾಗೋರಸ್ ಪ್ರಮೇಯದಂತೆ ಅಥವಾ

$PQ^2 = PM^2 + QM^2$

ಅಥವಾ $PM^2 = PQ^2 - QM^2$ ....(i)

ΔPMR, ದಲ್ಲಿ ಪೈಥಾಗೋರಸ್ ಪ್ರಮೇಯದಂತೆ

$PR^2 = PM^2 + MR^2$

ಅಥವಾ $PM^2 = PR^2 - MR^2$ ....(ii)

ಸಮೀಕರಣ (i) and (ii) ದಿಂದ

$2PM^2 = (PQ^2 + PM^2) - (QM^2 + MR^2)$

$= QR^2 - QM^2 - MR^2 \quad [\because QR^2 = PQ^2 + PR^2]$

$= (QM + MR)^2 - QM^2 - MR^2$

$= 2QM \times MR$

$\therefore PM^2 = QM \times MR$

22) 50 ಪದಗಳನ್ನು ಹೊಂದಿರುವ ಸಮಾಂತರ ಶ್ರೇಢಿಯಲ್ಲಿ 3ನೇ ಪದ 12 ಮತ್ತು ಕೊನೆಯ ಪದ 106 ಆಗಿದೆ. ಅದರ 29ನೇ ಪದವನ್ನು ಕಂಡುಹಿಡಿಯಿರಿ.

ಉತ್ತರ:– $n = 50, \ T_3 = 12, \ T_{50} = 106, \ T_{29} = ?$

$$d = \frac{T_p - T_q}{p - q} = \frac{T_3 - T_{50}}{3 - 50} = \frac{12 - 106}{-47} = \frac{-94}{-47} = 2$$

$T_3 = a + 2d$

$12 = a + 2(2)$

$a = 12 - 4 = 8$

$T_{29} = a + 28d = 8 + 28(2)$

$= 8 + 56.$

$T_{29} = 64$

23) ಕೊಟ್ಟಿರುವ ಚಿತ್ರದಲ್ಲಿ, BCಯು ವ್ಯಾಸವಾದರೆ, Xನ ಬೆಲೆಯನ್ನು ಕಂಡುಹಿಡಿಯಿರಿ.



ಉತ್ತರ:– $x = 90^0$

24) $3 + \sqrt{5}$ ಒಂದು ಅವಿಭಾಜ್ಯ ಸಂಖ್ಯೆಯೆಂದು ಸಾಧಿಸಿ.

ಉತ್ತರ: ಸಾಧ್ಯವಾದರೆ $3 + \sqrt{5}$ ಒಂದು ಭಾಗಲಬ್ಧ ಸಂಖ್ಯೆಯಾಗಿರಲಿ.

$\Rightarrow 3 + \sqrt{5} = \frac{p}{q}$ ಇಲ್ಲಿ, $p, q \in z, q \neq 0$

$\sqrt{5} = \frac{p}{q} - 3 \Rightarrow \sqrt{5} = \frac{p - 3q}{q}$

$\sqrt{5}$ ಒಂದು ಭಾಗಲಬ್ಧ ಸಂಖ್ಯೆ

$\because \frac{p - 3q}{q}$ ಒಂದು ಭಾಗಲಬ್ಧ ಸಂಖ್ಯೆ

ಆದರೆ $\sqrt{5}$ ಭಾಗಲಬ್ಧ ಸಂಖ್ಯೆಯಲ್ಲಿ ಇದು ವೈರುಧ್ಯಕ್ಕೆ ಎಡೆ ಮಾಡಿಕೊಡುತ್ತದೆ.

$\therefore$ ನಮ್ಮ ಊಹೆ $3 + \sqrt{5}$ ಒಂದು ಭಾಗಲಬ್ಧ ಎಂಬುದು ತಪ್ಪು.

$\Rightarrow 3 + \sqrt{5}$ ಒಂದು ಅಭಾಗಲಬ್ಧ ಸಂಖ್ಯೆ

25) 3 ಸೆಂ.ಮೀ. ತ್ರಿಜ್ಯವುಳ್ಳ ವೃತ್ತಕ್ಕೆ, ವೃತ್ತ ಕೇಂದ್ರದಿಂದ 8 ಸೆಂ.ಮೀ. ದೂರದಲ್ಲಿನ ಬಾಹ್ಯ ಬಿಂದುವಿನಿಂದ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿರಿ.

ಉತ್ತರ: $r = 3$ ಸೆಂ.ಮೀ., $d = 8$ ಸೆಂ.ಮೀ.



AP ಮತ್ತು BP ಗಳು ಸ್ಪರ್ಶಕಗಳಾಗಿವೆ.

(ಮುಂದುವರಿಯುವುದು.......)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

II PUC : BIOLOGY
REVISION : MODEL QUESTIONS

32. Mention the steps involved in DNA finger printing?

Ans. (........Contd)

Methodology :

1. DNA is isolated and extracted from the cell or tissue by centrifugation.
2. By the process of polymerase chain reaction (PCR0 many copies are produced. This step is called amplification.
3. DNA is cut into small fragments by treating with restriction end nuclease.
4. DNA fragments are separated by a arose gel electrophoresis.
5. The separated DNA fragments are visualised under ultraviolet radiation after applying suitable dye.
6. The DNA is transferred from electrophoresis plate to nylon membrane sheet . this is called southern blotting
7. Probs are now added which bind to specific nucleic sequences that are complementary to them is called hybridisation .
8. The hybridised DNA fragments are detected by autobiography. They are observed as dark bands on x-ray film

33. Mention the three critical areas of biotechnology

Ans:- Biotechnology has three main categories: biomedical, agricultural, and environmental.

Some critical research areas of biotechnology include:

* Providing the best catalyst in the form of an improved organism
* Creating optimal conditions for a catalyst to act
* Downstream processing technologies to purify the protein/organic compound

Biotechnology also has three important techniques:

* Recombinant DNA Technology (Genetic Engineering)
* Plant Tissue Culture
* Transgenic (Genetically Modified Organisms)

34. Describe the structure of DNA with a neat labelled diagram.

Ans:- James D. Watson and F.H.C. Crick proposed the Double helix model of DNA in 1953.

According to which the DNA molecule is composed of 2 polynucleotide strands running anti parallel to each other. They are inter twined like a twisted ladder and each strand is helically coiled to the other. The outer edge of the helix is made up of deoxyribose and phosphate molecules all along. This becomes the back bone of the helix comparable to the limb of a ladder. The nitrogen bases of both the strands face each other and is arranged at right angles to the backbone similar to the steps of a ladder. There is a specific pairing of nitrogen bases. A specific purine pairs with a specific pyrimidine. Adenine pairs with Thymine with two hydrogen bonds (A=T) whereas Guanine pairs with Cytosine with 3 hydrogen bonds (G ≡ C).



This specific base pairing is called complementary base pairing. The stability of the helix is due to the interaction between hydrophobic base pairs. Hence, the two polynucleotide strands are complementary to each other. According to Watson and Crick, the DNA helix has a diameter of 20 $\overset{0}{A}$. The helix makes one complete turn at every 34 $\overset{0}{A}$ along its length containing 10 nucleotides. Therefore, the distance between 2 nucleotides in a helix is 3.4 $\overset{0}{A}$. The length of the DNA molecule varies from chromosome to chromosome and species to species If the double helix is coiled in a right handed direction it is B – DNA and if the double helix is coiled in a left handed direction it is Z – DNA. The Z – DNA is 18 – 19 $\overset{o}{A}$ in width & is rich in the base pairs G ≡ C.

35. Give the structure of a typical antibody.

Ans:-



ಸಾವಿರಾರು ಸಂಖ್ಯೆಯಲ್ಲಿ ರಾಜಧಾನಿಗೆ ಬಂದ ಉದ್ಯೋಗಾಕಾಂಕ್ಷಿಗಳು

ನೌಕರಿ ಅರಸಿ ಮೇಳದತ್ತ ದೌಡು

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಅರಮನೆ ಮೈದಾನದಲ್ಲಿ ಸೋಮವಾರ ನಡೆದ ಬೃಹತ್ ಉದ್ಯೋಗ ಮೇಳದಲ್ಲಿ ಉದ್ಯೋಗಾಕಾಂಕ್ಷಿಗಳ ದಂಡು. ಪ್ರಜಾವಾಣಿ ಚಿತ್ರ

ಬೆಂಗಳೂರು: ಇಲ್ಲಿನ ಅರಮನೆ ಮೈದಾನದಲ್ಲಿ ರಾಜ್ಯ ಸರ್ಕಾರ ಇದೇ ಮೊದಲ ಬಾರಿಗೆ ಆಯೋಜಿಸಿದ್ದ 'ಬೃಹತ್ ಉದ್ಯೋಗ ಮೇಳ'ಕ್ಕೆ ನಿರೀಕ್ಷೆಗೂ ಮೀರಿ ಉದ್ಯೋಗಾಕಾಂಕ್ಷಿಗಳು ಧಾವಿಸಿದ್ದು, ನಿರುದ್ಯೋಗ ಸಮಸ್ಯೆಯು ಎಷ್ಟು ಗಂಭೀರವಾಗಿದೆ ಎಂಬುದನ್ನು ಸೋಮವಾರ ತೆರೆದಿಟ್ಟಿತು.

ಹಲವು ಜಿಲ್ಲೆಗಳಿಂದ ಅಲ್ಲದೇ ರಾಜ್ಯದಲ್ಲಿ ಓದಿದ ಹೊರರಾಜ್ಯದ ಯುವಕ–ಯುವತಿಯರೂ ಸ್ವವಿವರದ ಪತ್ರ ಹಿಡಿದು ಉದ್ಯೋಗ ಮೇಳದತ್ತ ದೌಡಾಯಿಸಿದ್ದರು. ಅವರೆಲ್ಲರೂ ಉದ್ಯೋಗ ದೊರೆಯುವ ಆಸೆಯಿಂದ ಕಂಪನಿಗಳು ತೆರೆದಿದ್ದ ಮಳಿಗೆಗಳತ್ತ ಎಡತಾಕಿ, ಸ್ವವಿವರ ದಾಖಲೆಗಳನ್ನು ಸಲ್ಲಿಸಿದರು.

ಕೌಶಲ್ಯಾಭಿವೃದ್ಧಿ ಇಲಾಖೆ 'ಯುವ ಸಮೃದ್ಧಿ ಸಮ್ಮೇಳನ ಮತ್ತು ಬೃಹತ್ ಉದ್ಯೋಗ ಮೇಳ'ವನ್ನು ಆಯೋಜಿಸಿತ್ತು.

ಸೋಮವಾರ ಬೆಳಿಗ್ಗೆಯಿಂದಲೇ ಅರಮನೆ ಮೈದಾನದ 'ಕೃಷ್ಣ ವಿಹಾರ'ದ ಗೇಟ್‌ನತ್ತ ಉದ್ಯೋಗಾಕಾಂಕ್ಷಿಗಳು ಬರಲು ಆರಂಭಿಸಿದ್ದರು. ಉದ್ಘಾಟನೆ ವೇಳೆಗೆ ಇಡೀ ಮೈದಾನ ಭರ್ತಿಯಾಗಿತ್ತು. ಹೊತ್ತು ಕಳೆದಂತೆ ಎರಡು ಬೃಹತ್ ಪೆಂಡಾಲ್‌ನಲ್ಲಿ ಕಾಲಿಡಲು ಸ್ಥಳಾವಕಾಶ ಇರಲಿಲ್ಲ. ದೂರದ ಪ್ರದೇಶದಿಂದ ಬಂದವರು ಮಧ್ಯಾಹ್ನದ ವೇಳೆಗೆ ಮೇಳ ನಡೆಯುತ್ತಿದ್ದ ಸ್ಥಳವನ್ನು ತಲುಪಿದರು.

ಉದ್ಯೋಗದ ಕನಸಿನೊಂದಿಗೆ...: ಕಳೆದ ವರ್ಷ ಪದವಿ ಪೂರ್ಣಗೊಳಿಸಿದ್ದವರು ಹಾಗೂ ವಯಸ್ಸು ಮೀರಿದ್ದವರೂ ಉದ್ಯೋಗ ಅರಸಿ ಬಂದಿದ್ದರು. ಪೋಷಕರು ಹಾಗೂ ಸ್ನೇಹಿತರೊಂದಿಗೆ ಬಂದಿದ್ದವರಲ್ಲಿ ಉದ್ಯೋಗ ಪಡೆಯುವ ಧಾವಂತ ಕಾಣಿಸಿತು. ಉದ್ಯೋಗದಲ್ಲಿದ್ದ ಕೆಲವರು ಉತ್ತಮ ಕಂಪನಿಯ ಹುಡುಕಾಟದಲ್ಲಿದ್ದರು.

ಆನ್‌ಲೈನ್‌ನಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಭಾನುವಾರದ ವರೆಗೆ ನೋಂದಣಿಗೆ ಅವಕಾಶವಿತ್ತು. ಬೆಂಗಳೂರು ಸೇರಿದಂತೆ ಪ್ರತಿ ಜಿಲ್ಲೆಯಿಂದ ಸಾವಿರಾರು ಸಂಖ್ಯೆಯಲ್ಲಿ ನೋಂದಣಿ ನಡೆದಿತ್ತು. ಅಂದಾಜು 600ಕ್ಕೂ ಹೆಚ್ಚು ಕಂಪನಿಗಳು, ಕೌಶಲವುಳ್ಳ ಅಭ್ಯರ್ಥಿಗಳ ಆಯ್ಕೆಗೆ ಮೊದಲ ಹಂತದ ಪ್ರಕ್ರಿಯೆ ನಡೆಸಿದವು. 1 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ಸಿಗುವ ಸಾಧ್ಯತೆ ಇದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಅಭ್ಯರ್ಥಿಗಳಿಗೆ ಮೊದಲ ದಿನ ಆನ್‌ಲೈನ್‌ನಲ್ಲಿ ಐದು ಕಂಪನಿಗಳಿಗಷ್ಟೇ ನೋಂದಣಿಗೆ ಅವಕಾಶವಿತ್ತು. ಸ್ಥಳದಲ್ಲಿ ಹಲವು ಕಂಪನಿಗಳ ಆಯ್ಕೆಗೆ ಅವಕಾಶವಿತ್ತು. ಆದರೆ, ನೆಟ್‌ವರ್ಕ್ ಸಮಸ್ಯೆಯಿಂದ ನೋಂದಣಿಗೆ ತೊಡಕಾಗಿತ್ತು.

ವಿವಿಧ ವಿದ್ಯಾರ್ಹತೆಗಳು...: ಎಸ್‌ಎಸ್‌ಎಲ್‌ಸಿಯಿಂದ ಸ್ನಾತಕೋತ್ತರ ಪದವಿವರೆಗೆ ವಿದ್ಯಾಭ್ಯಾಸ ಪೂರೈಸಿದವರಿಗೆ ಒಂದೇ ಸೂರಿನಡಿ ಉದ್ಯೋಗದ ಅವಕಾಶಗಳಿದ್ದವು. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಿಗೂ ಉದ್ಯೋಗಾವಕಾಶವಿತ್ತು. ಮೇಳಕ್ಕೆ ಹೆಸರು ನೋಂದಾಯಿಸಿಕೊಳ್ಳಲು ಪ್ರತಿ ಜಿಲ್ಲೆಯಲ್ಲೂ ಪ್ರಚಾರ ನಡೆಸಲಾಗಿತ್ತು. ಡಿಪ್ಲೊಮಾ, ಐಟಿಐ, ಬಿಇ, ಎಂಬಿಎ, ಬಿಕಾಂ, ಬಿಎ, ಬಿಎಸ್‌ಸಿ, ಎಂಎಸ್‌ಸಿ, ಎಂಎ ಸೇರಿದಂತೆ ವಿವಿಧ ವಿದ್ಯಾರ್ಹತೆಯುಳ್ಳವರು ಆನ್‌ಲೈನ್‌ನಲ್ಲಿ ಆಯ್ಕೆ ಮಾಡಿಕೊಂಡಿದ್ದ ಕಂಪನಿಗಳ ಮಳಿಗೆಗಳಲ್ಲಿ ಸ್ವವಿವರ ಸಲ್ಲಿಸಿದರು.

ಆಕಾಂಕ್ಷಿಗಳು ಪ್ರತಿ ಮಳಿಗೆಯಲ್ಲಿದ್ದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಕಂಪನಿಯ ಮಾಹಿತಿ ಕಲೆಹಾಕುತ್ತಿದ್ದರು. ಈ ವೇಳೆ ಪದೇ ಪದೇ ನೆಟ್‌ವರ್ಕ್ ಸಮಸ್ಯೆ ಕಾಡುತ್ತಿತ್ತು. ಅಲ್ಲದೆ ಇಂಗ್ಲಿಷ್ ವರ್ಣಮಾಲೆ ಪ್ರಕಾರ ಕಂಪನಿಗಳಿಗೆ ಮಳಿಗೆ ನೀಡಲಾಗಿತ್ತು. ಇದರಿಂದ ನಿಗದಿತ ಮಳಿಗೆ ಹುಡುಕಲು ಸಮಸ್ಯೆ ಎದುರಾಯಿತು ಎಂದು ಮಂಡ್ಯದ ಸವಿತಾ ದೂರಿದರು.

ಸಾಫ್ಟ್‌ವೇರ್ ಕಂಪನಿಗಳಿಗೆ ಸಂಬಂಧಿಸಿದ ಮಳಿಗೆಗಳ ಸಂಖ್ಯೆ ಕಡಿಮೆಯಿವೆ. ಕನ್ಸಲ್ಟೆನ್ಸಿ ಸರ್ವಿಸ್, ಬ್ಯಾಂಕಿಂಗ್, ಎಚ್‌ಆರ್‌ಗೆ ಸಂಬಂಧಿಸಿದ ಹೆಚ್ಚಿನ ಮಳಿಗೆಗಳಿವೆ ಎಂದು ಪಾಂಡವಪುರದ ಚೇತನ್ ಹೇಳಿದರು.

ದೊರೆಯದ ನೇಮಕಾತಿ ಪತ್ರ

ಕಂಪನಿಗಳು, 'ಸ್ವವಿವರಗಳನ್ನು ಮಾತ್ರ ತೆಗೆದುಕೊಂಡಿದ್ದೇವೆ. ಒಂದು ವಾರದ ನಂತರ ಕರೆ ಮಾಡಿ ನೇಮಕಾತಿಯ ಬಗ್ಗೆ ಮಾಹಿತಿ ನೀಡುತ್ತೇವೆ' ಎಂದು ಹೇಳಿದ್ದು, ಉದ್ಯೋಗಾಕಾಂಕ್ಷಿಗಳಲ್ಲಿ ನಿರಾಸೆ ಮೂಡಿಸಿತು. ಸ್ಥಳದಲ್ಲೇ ನೇಮಕಾತಿ ಪತ್ರ ದೊರೆಯುವ ನಿರೀಕ್ಷೆಯಲ್ಲಿದ್ದೆವು. ಆದರೆ, ಸ್ವವಿವರ ಮಾತ್ರ ಪಡೆದುಕೊಳ್ಳಲಾಗಿದೆ ಎಂದು ಹಲವರು ದೂರಿದರು.

ಕೆಲವು ಕಂಪನಿಗಳು ಸ್ಥಳದಲ್ಲೇ ಕಿರು ಸಂದರ್ಶನ ನಡೆಸಿದವು.

'ಕಂಪನಿಗೆ ಕರೆಸಿಕೊಂಡು ಮತ್ತೊಮ್ಮೆ ಸಂದರ್ಶನ ನಡೆಸುತ್ತೇವೆ. ವೇತನದ ಬಗ್ಗೆ ನಿರ್ಧಾರ ಕೈಗೊಂಡು ನೇಮಕಾತಿ ಪತ್ರ ನೀಡುತ್ತೇವೆ' ಎಂದು ಅಭ್ಯರ್ಥಿಗಳಿಗೆ ಹಲವು ಕಂಪನಿಗಳು ಭರವಸೆ ನೀಡಿವೆ.

'ಬಿಡದಿಯ ಟೊಯೊಟ ಕಿರ್ಲೋಸ್ಕರ್ ಕಂಪನಿಯಲ್ಲಿ ಡಿಪ್ಲೊಮಾ ಪದವೀಧರರಿಗೆ ಉದ್ಯೋಗದ ಅವಕಾಶವಿದ್ದು ನೋಂದಣಿ ಮಾಡಿಕೊಂಡವರಿಗೆ ಕಿರು ಸಂದರ್ಶನ ನಡೆಸಲಾಗಿದೆ. ಬೇರೆ ಬೇರೆ ಪದವೀಧರರ ವಿವರ ಪಡೆದುಕೊಳ್ಳಲಾಗಿದೆ. ಅವರಿಗೆ ಕರೆ ಮಾಡಿ ಮಾಹಿತಿ ನೀಡುತ್ತೇವೆ. ಮೇಳ ಆಯೋಜನೆಯಿಂದ ಕಂಪನಿಗೂ ಪ್ರತಿಭಾನ್ವಿತರು ಸಿಗುತ್ತಾರೆ' ಎಂದು ಕಂಪನಿಯ ಪ್ರತಿನಿಧಿಯೊಬ್ಬರು ಹೇಳಿದರು.

ರಾಜ್ಯದಾದ್ಯಂತ ನಿರುದ್ಯೋಗ ತಗ್ಗಿಸಲು ಮೇಳ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿರುದ್ಯೋಗ ತಗ್ಗಿಸಲು, ರಾಜ್ಯದಾದ್ಯಂತ ಪ್ರಾದೇಶಿಕವಾರು ಬೃಹತ್ ಉದ್ಯೋಗ ಮೇಳಗಳನ್ನು ಆಯೋಜಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ನಗರದ ಅರಮನೆ ಮೈದಾನದಲ್ಲಿ ಸೋಮವಾರ ಕೌಶಲ್ಯಾಭಿವೃದ್ಧಿ ಇಲಾಖೆ ಆಯೋಜಿಸಿದ್ದ 'ಯುವ ಸಮೃದ್ಧಿ ಸಮ್ಮೇಳನ ಮತ್ತು ಬೃಹತ್ ಉದ್ಯೋಗ ಮೇಳ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಹೊಸ ಉದ್ಯೋಗ ಸೃಷ್ಟಿ ಮತ್ತು ತರಬೇತಿಗಾಗಿ ಈಗಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳನ್ನು (ಜಿಟಿಟಿಸಿ) ಬಲವರ್ಧನೆಗೊಳಿಸುವ ಜೊತೆಗೆ, ಹೊಸದಾಗಿ ಇನ್ನಷ್ಟು ಕೇಂದ್ರಗಳನ್ನು ಆರಂಭಿಸಲಾಗುವುದು' ಎಂದು ಅವರು ಭರವಸೆ ನೀಡಿದರು.

ಮುಖ್ಯಾಂಶಗಳು

- ಹೊಸ 'ಜಿಟಿಟಿಸಿ'ಗಳ ಸ್ಥಾಪನೆಗೆ ಕ್ರಮ
- ಕೌಶಲ ಅಭಿವೃದ್ಧಿ ತರಬೇತಿಗೆ ಆದ್ಯತೆ
- ಯುವ ಸಮೃದ್ಧಿ ಲಾಂಛನ ಅನಾವರಣ

ಕೌಶಲ್ಯಾಭಿವೃದ್ಧಿ ಸಚಿವ ಶರಣಪ್ರಕಾಶ್ ಪಾಟೀಲ್ ಮಾತನಾಡಿ, 'ದೇಶದಲ್ಲಿ ಇದೇ ಮೊದಲ ಬಾರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಎಸ್‌ಎಸ್‌ಎಲ್‌ಸಿಯಿಂದ ಸ್ನಾತಕೋತ್ತರ ಪದವಿವರೆಗೆ ವಿವಿಧ ವಿದ್ಯಾರ್ಹತೆಗಳನ್ನು ಹೊಂದಿರುವ 75 ಸಾವಿರ ಮಂದಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಸುಮಾರು ಒಂದು ಲಕ್ಷ ಉದ್ಯೋಗಗಳನ್ನು ನೀಡಲು ಸುಮಾರು 600 ಕಂಪನಿಗಳು ಮುಂದಾಗಿವೆ' ಎಂದು ಹೇಳಿದರು.

ಉದ್ಯೋಗ ಮೇಳದಲ್ಲಿ ನೋಂದಾಯಿಸಿಕೊಂಡು, ಉದ್ಯೋಗ ಸಿಗದಿರುವವರನ್ನು ಗುರುತಿಸಿ, ನಮ್ಮ ಇಲಾಖೆಯು ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅವರಿಗೆ ಅಗತ್ಯವಾದ ಕೌಶಲಾಭಿವೃದ್ಧಿ ತರಬೇತಿ ನೀಡಲಾಗುತ್ತದೆ. ಇದಕ್ಕಾಗಿ ಇಲಾಖೆಯ 'ಸ್ಕಿಲ್ ಕನೆಕ್ಟ್ ಪೋರ್ಟಲ್'ನ ದತ್ತಾಂಶವನ್ನು ಬಳಸಿಕೊಳ್ಳುತ್ತೇವೆ' ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ 'ಯುವ ಸಮೃದ್ಧಿ' ಲಾಂಛನವನ್ನು ಅನಾವರಣಗೊಳಿಸಲಾಯಿತು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಕೌಶಲ್ಯಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಎಂ. ಕನಗವಲ್ಲಿ ಹಾಜರಿದ್ದರು.

ಬೃಹತ್ ಉದ್ಯೋಗ ಮೇಳಕ್ಕೆ ಆಗಮಿಸಿದ್ದ ಅಭ್ಯರ್ಥಿಯೊಬ್ಬರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವ ಶರಣಪ್ರಕಾಶ ಪಾಟೀಲ – ಪ್ರಜಾವಾಣಿ ಚಿತ್ರ

ಅರ್ಜಿ ಸಲ್ಲಿಸಲು ಹಣವಿಲ್ಲದವರಿಗೆ, ಸರ್ಕಾರ 'ಯುವನಿಧಿ'ಯೊಂದಿಗೆ ನೆರವಾಗುತ್ತಿದೆ. ಸರ್ಕಾರ ಎಂದಿಗೂ ಯುವ ಸಮೂಹದೊಂದಿಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಮೋದಿ ಭರವಸೆ ಈಡೇರಿಸಿಲ್ಲ'

'ಪ್ರಧಾನಿ ನರೇಂದ್ರ ಮೋದಿಯವರು ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆ ಎಂದು 2014ರಲ್ಲಿ ಭರವಸೆ ನೀಡಿದ್ದರು. ಆ ಪ್ರಕಾರ 10 ವರ್ಷಗಳಲ್ಲಿ 20 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. ಆದರೆ, ಅವರು ಇರುವ ಉದ್ಯೋಗಗಳನ್ನೂ ಕಸಿದುಕೊಂಡಿದ್ದಾರೆ' ಎಂದು ದೂರಿದ ಸಿದ್ದರಾಮಯ್ಯ, 'ಇದರಿಂದ ಪ್ರತೀ ವರ್ಷ ನಿರುದ್ಯೋಗ ಪ್ರಮಾಣ ಬೃಹತ್ತಾಗಿ ಬೆಳೆಯುತ್ತಾ ಶೇ 8.40ಕ್ಕೆ ಏರಿದೆ' ಎಂದು ಆರೋಪಿಸಿದರು.

88 ವಿದ್ಯಾರ್ಥಿಗಳಿಗೆ 100 ಚಿನ್ನದ ಪದಕ

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಿಕೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಫೆಲೆಂಟಿನಾ ಜೇಮ್ಸ್

ಮಧುರಾ ಕೆ.ಐ

ಪ್ರಿಯಾ ಕುಮಾರಿ

ಪ್ರಜ್ಞಾ ಎನ್.

ಅನರ್ಘ್ಯ ವಿ. ಕುಲಕರ್ಣಿ

ಸ್ನೇಹಾ ಸುಸಾನ್ ಸನ್ನಿ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 26ನೇ ವಾರ್ಷಿಕ ಘಟಿಕೋತ್ಸವದಲ್ಲಿ 88 ವಿದ್ಯಾರ್ಥಿಗಳು 100 ಚಿನ್ನದ ಪದಕ ಪಡೆಯಲಿದ್ದಾರೆ.

ಆರು ವಿದ್ಯಾರ್ಥಿನಿಯರು ಒಂದಕ್ಕಿಂತ ಹೆಚ್ಚು ಚಿನ್ನದ ಪದಕಗಳನ್ನು ಪಡೆಯಲಿದ್ದಾರೆ. ಹೊಸೂರು ರಸ್ತೆಯಲ್ಲಿರುವ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಮಂಗಳವಾರ ನಡೆಯಲಿರುವ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪದಕಗಳ ಜೊತೆಗೆ ಪದವಿ ಪ್ರದಾನ ಮಾಡಲಿದ್ದಾರೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಕೆ. ರಮೇಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ವಿವಿಧ ವಿಷಯಗಳಲ್ಲಿ 52,650 ಅಭ್ಯರ್ಥಿಗಳು ಪದವಿ ಪಡೆಯಲು ಅರ್ಹರಾಗಿದ್ದಾರೆ. 17 ಪಿಎಚ್‌.ಡಿ, 156 ಸೂಪರ್ ಸ್ಪೆಷಾಲಿಟಿ, 7,815 ಸ್ನಾತಕೋತ್ತರ ಪದವಿ, 7 ಸ್ನಾತಕೋತ್ತರ ಡಿಪ್ಲೊಮಾ, 122 ಫೆಲೋಷಿಪ್ ಕೋರ್ಸ್, 8 ಸರ್ಟಿಫಿಕೇಟ್ ಕೋರ್ಸ್ ಹಾಗೂ 44,525 ಸ್ನಾತಕ ಅಭ್ಯರ್ಥಿಗಳಿಗೆ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುವುದು. ವಿಶ್ವವಿದ್ಯಾಲಯದ ಎಲ್ಲ ನಿಕಾಯಗಳ ವಿದ್ಯಾರ್ಥಿಗಳ ಒಟ್ಟಾರೆ ಫಲಿತಾಂಶ ಶೇ 82.43ರಷ್ಟಾಗಿದೆ ಎಂದು ಮಾಹಿತಿ ನೀಡಿದರು.

'ವಿದ್ಯಾರ್ಥಿಗಳಿಗೆ ಪ್ರದಾನ ಮಾಡುವ ಚಿನ್ನದ ಪದಕವು 22 ಕ್ಯಾರೆಟ್ ಇದ್ದು, ತಲಾ 5 ಗ್ರಾಂ ತೂಕವಿರುತ್ತದೆ. ವಿಶ್ವವಿದ್ಯಾಲಯದ ಸಂಪನ್ಮೂಲ ಹಾಗೂ ದಾನಿಗಳ ದೇಣಿಗೆಯ ನಿಧಿಯಿಂದ ಈ ವೆಚ್ಚ ಭರಿಸಲಾಗುತ್ತದೆ' ಎಂದು ಹೇಳಿದರು.ನವದೆಹಲಿಯ ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಡಾ. ಬಿ.ಎನ್. ಗಂಗಾಧರ್, ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಆರ್. ಪಾಟೀಲ ಘಟಿಕೋತ್ಸವದಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಫೆಲೆಂಟಿನಾ ಜೇಮ್ಸ್‌ಗೆ 5 ಚಿನ್ನ

ಹುಬ್ಬಳ್ಳಿಯ ಕೆಎಲ್‌ಇ ಸೊಸೈಟಿ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್‌ನ (ಬಿಎಸ್‌ಸಿ ನರ್ಸಿಂಗ್ ಕೋರ್ಸ್) ವಿದ್ಯಾರ್ಥಿನಿ ಫೆಲೆಂಟಿನಾ ಜೇಮ್ಸ್ ಅವರು 5 ಚಿನ್ನದ ಪದಕ ಪಡೆದಿದ್ದಾರೆ. ಉಡುಪಿಯ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜಿನ (ಆಯುಷ್ ಕೋರ್ಸ್) ಪ್ರಜ್ಞಾ ಎನ್. ಅವರು 4 ಚಿನ್ನದ ಪದಕ ಹಾಗೂ 2 ನಗದು ಬಹುಮಾನ; ಧಾರವಾಡದ ಸೋನಿಯಾ ಎಜುಕೇಷನ್ ಟ್ರಸ್ಟ್ ಕಾಲೇಜು ಆಫ್ ಫಾರ್ಮಸಿಯ (ಬಿ ಫಾರ್ಮಾ ಕೋರ್ಸ್) ಅನರ್ಘ್ಯ ವಿ. ಕುಲಕರ್ಣಿ ಅವರು 3 ಚಿನ್ನದ ಪದಕ; ಮಂಗಳೂರು ಕಣಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಎಂಬಿಬಿಎಸ್ ಕೋರ್ಸ್) ಮಧುರಾ ಕೆ.ಐ ಅವರು 2 ಚಿನ್ನದ ಪದಕ ಹಾಗೂ ಒಂದು ನಗದು ಬಹುಮಾನ; ಬೆಂಗಳೂರಿನ ಈಸ್ಟ್ ವೆಸ್ಟ್ ಕಾಲೇಜ್ ಆಫ್ ಫಾರ್ಮಸಿಯ (ಫಾರ್ಮಾ ಡಿ ಕೋರ್ಸ್) ಸ್ನೇಹಾ ಸುಸಾನ್ ಸನ್ನಿ ಅವರು 2 ಚಿನ್ನದ ಪದಕ; ಮಂಗಳೂರು ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜಿನ (ಅಲೈಡ್ ಹೆಲ್ತ್ ಸೈನ್ಸಸ್ ಕೋರ್ಸ್) ಪ್ರಿಯಾ ಕುಮಾರಿ ಅವರು 2 ಚಿನ್ನದ ಪದಕ ಗಳಿಸಿದ್ದಾರೆ.

ಮೂವರಿಗೆ ಗೌರವ ಡಾಕ್ಟರೇಟ್

ಕಿಡ್ನಿ ರೋಗ ನಿಯಂತ್ರಣ ಹಾಗೂ ಚಿಕಿತ್ಸೆಯಲ್ಲಿ ಹೆಸರುವಾಸಿಯಾಗಿರುವ ಶಿವಮೊಗ್ಗ ಜಿಲ್ಲೆಯ ಡಾ. ಜಿ.ಕೆ. ವೆಂಕಟೇಶ್, ಚರ್ಮರೋಗ ವಿಷಯವಾಗಿ ಸ್ನಾತಕೋತ್ತರ ಕೋರ್ಸ್ ಆರಂಭಿಸಿದ ಬೀದರ್ ಜಿಲ್ಲೆಯ ಪಿ.ಎಂ. ಬಿರಾದಾರ್ ಮತ್ತು ಫಿಜಿಯೊಥೆರಪಿಯಲ್ಲಿ ದೇಶದಾದ್ಯಂತ ಖ್ಯಾತಿಗಳಿಸಿರುವ ಮಧ್ಯಪ್ರದೇಶ ಪಿಂಕಿ ಭಾಟಿಯಾ ಅವರಿಗೆ ರಾಜೀವ್ ಗಾಂಧಿ ವಿ.ವಿ ವತಿಯಿಂದ 'ಡಾಕ್ಟರ್ ಆಫ್ ಸೈನ್ಸ್' ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದು ಎಂದು ಕುಲಪತಿ ಡಾ. ಎಂ.ಕೆ. ರಮೇಶ್ ತಿಳಿಸಿದರು.

ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಕಡ್ಡಾಯ: ಕಾಯ್ದೆ ಜಾರಿ

ಬೆಂಗಳೂರು: ಕೈಗಾರಿಕೆ, ವಾಣಿಜ್ಯ ಸಂಸ್ಥೆಗಳು, ವಹಿವಾಟು ಕೇಂದ್ರಗಳು, ಉದ್ದಿಮೆಗಳ ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಭಾಷೆ ಇರದಿದ್ದರೆ, ಕ್ರಮ ಜರುಗಿಸುವ ಅಧಿಕಾರ ಸರ್ಕಾರಕ್ಕೆ ಒದಗಿದೆ.

ಈ ಉದ್ದೇಶಕ್ಕೆ, ರಾಜ್ಯ ಸರ್ಕಾರ ಮಂಡಿಸಿ, ಉಭಯ ಸದನಗಳಲ್ಲೂ ಅನುಮೋದನೆ ಪಡೆದಿದ್ದ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಮಸೂದೆ 2024'ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಅದರ ಬೆನ್ನಲ್ಲೇ, ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನೂ ಹೊರಡಿಸಲಾಗಿದೆ.

ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ, ಮಂಜೂರಾತಿ ಪಡೆದ ಎಲ್ಲ ಸಂಸ್ಥೆಗಳಿಗೂ ಇದು ಅನ್ವಯವಾಗಲಿದೆ. ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು, ಹೋಟೆಲ್‌ಗಳ ನಾಮಫಲಕಗಳ ಮೇಲ್ಭಾಗದಲ್ಲಿ ಕನ್ನಡ ಭಾಷೆಯನ್ನು ಶೇ 60ರಷ್ಟು ಪ್ರದರ್ಶಿಸಬೇಕು.

'ನಾಮಫಲಕಗಳಲ್ಲಿ ಕನ್ನಡ ಕಡ್ಡಾಯಗೊಳಿಸಬೇಕು' ಎಂದು ಕೆಲ ತಿಂಗಳ ಹಿಂದೆ ಕನ್ನಡಪರ ಸಂಘಟನೆಗಳು ಬೆಂಗಳೂರಿನಲ್ಲಿ ಹೋರಾಟ ನಡೆಸಿದ್ದವು. ಫೆಬ್ರುವರಿ 28ರೊಳಗೆ ಕಾಯ್ದೆ ಅನುಷ್ಠಾನಗೊಳಿಸುವುದಾಗಿ ಸರ್ಕಾರ ಹೋರಾಟಗಾರರಿಗೆ ಭರವಸೆ ನೀಡಿತ್ತು.

ಮೈಲಾರಲಿಂಗೇಶ್ವರ ಕಾರ್ಣಿಕ ಮಹೋತ್ಸವ

ನಾಡು ಸುಭಿಕ್ಷವಾಗುವ ಭವಿಷ್ಯ, ಜನರ ಹರ್ಷ

ಪ್ರಜಾವಾಣಿ ವಾರ್ತೆ

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಕ್ಷೇತ್ರದಲ್ಲಿ ಸೋಮವಾರ ಗೊರವಯ್ಯನವರ ಕಾರ್ಣಿಕವನ್ನು ಅಪಾರ ಸಂಖ್ಯೆ ಭಕ್ತರು ಆಲಿಸಿದರು ಪ್ರಜಾವಾಣಿ ಚಿತ್ರ/ ಲವ ಕೆ.

ಮೈಲಾರ (ವಿಜಯನಗರ ಜಿಲ್ಲೆ) : 'ಸಂಪಾಯಿತಲೇ ಪರಾಕ್'. ಇದು ಈ ವರ್ಷದ ಮೈಲಾರಲಿಂಗೇಶ್ವರ ಸ್ವಾಮಿಯ ಕಾರ್ಣಿಕ ನುಡಿ. ಇದನ್ನು ಕೇಳಿದ ಭಕ್ತರು ಸಮಾಧಾನದ ನಿಟ್ಟುಸಿರು ಬಿಟ್ಟರು. ಹೂವಿನಹಡಗಲಿ ತಾಲ್ಲೂಕಿನ ಸುಕ್ಷೇತ್ರ ಮೈಲಾರದಲ್ಲಿ ಸೋಮವಾರ ಸಂಜೆ ಲಕ್ಷಾಂತರ ಭಕ್ತರ ನಡುವೆ ಕಾರ್ಣಿಕ ಮಹೋತ್ಸವ ಜರುಗಿತು.

ಸುಕ್ಷೇತ್ರ ಪರಂಪರೆಯಂತೆ ವಂಶಪಾರಂಪರ್ಯ ಧರ್ಮಕರ್ತ ವೆಂಕಪ್ಪಯ್ಯ ಒಡೆಯರ್ ಅಶ್ವರೂಢರಾಗಿ ಡೆಂಕನಮರಡಿಗೆ ಆಗಮಿಸಿ ಕಾರ್ಣಿಕ ಸ್ಥಳದಲ್ಲಿ ಪ್ರದಕ್ಷಿಣೆ ಹಾಕಿದರು. ವಿಜಯನಗರದ ಅರಸರು ಈ ಹಿಂದೆ ಮೈಲಾರಲಿಂಗ ಸ್ವಾಮಿಗೆ ಅರ್ಪಿಸಿದ್ದ ಮೂರ್ತಿಗಳ ಉತ್ಸವದೊಂದಿಗೆ ಗೊರವ ಪರಿವಾರ ಕಾರ್ಣಿಕದ ಗೊರವಯ್ಯ ರಾಮಣ್ಣ ಅವರನ್ನು ಸಿಂಹಾಸನ ಕಟ್ಟೆಯಿಂದ ಕಾರಣೀಕ ಸ್ಥಳಕ್ಕೆ ಭವ್ಯ ಮೆರವಣಿಗೆಯಲ್ಲಿ ಕರೆ ತರಲಾಯಿತು.

ಈ ವೇಳೆ 'ಏಳು ಕೋಟಿ ಏಳು ಕೋಟಿಗೂ.... ಚಹಾಂಗ ಬಲೋ' ಎಂಬ ಸ್ವಾಮಿಯ ಉದ್ಘೋಷ ಮುಗಿಲು ಮುಟ್ಟಿತು. ಧಾರ್ಮಿಕ ವಿಧಿವಿಧಾನಗಳು ನೆರವೇರಿದ ಬಳಿಕ ಬಿಲ್ಲು ಏರಿದ ಗೊರವಯ್ಯ ಕಾರ್ಣಿಕ ನುಡಿದು ಕೆಳಕ್ಕೆ ಜಿಗಿದರು. ಸುತ್ತ ನೆರೆದಿದ್ದ ಗೊರವ ಸಮೂಹದವರು ಅವರನ್ನು ಕಂಬಳಿಯಲ್ಲಿ ಹಿಡಿದರು.

'ಪ್ರಸಕ್ತ ವರ್ಷದ ಸ್ವಾಮಿಯ ದೈವವಾಣಿಯಲ್ಲಿ ಶುಭ ಫಲ ಅಡಗಿದೆ. ಈ ವರ್ಷ ಮಳೆ, ಬೆಳೆ ಸಂಪಾಗಿ, ನಾಡು ಸಮೃದ್ಧಿಯಾಗಲಿದೆ' ಎಂದು ಭಕ್ತರು ಕಾರ್ಣಿಕ ಉಕ್ತಿಯನ್ನು ವಿಶ್ಲೇಷಿಸಿದರು.

ಕಾರ್ಣಿಕ ಒಪ್ಪದ ಧರ್ಮಕರ್ತ: 'ಈ ವರ್ಷದ ಮೈಲಾರಲಿಂಗೇಶ್ವರ ಕಾರ್ಣಿಕ ಸತ್ಯವಾಗುವುದಿಲ್ಲ. ಗುರುಪೀಠದ ಧರ್ಮದ ನಿಯಮಗಳನ್ನು ಪಾಲಿಸದೆ ಕಾರ್ಣಿಕ ನುಡಿ ನುಡಿದ್ದಾರೆ. ಇದು ದೈವವಾಣಿಯಲ್ಲ, ಗೊರವಯ್ಯ ರಾಮಪ್ಪನ ವಾಣಿ' ಎಂದು ಕಾರ್ಣಿಕ ನುಡಿಯ ಬಗ್ಗೆ ದೇವಸ್ಥಾನದ ಧರ್ಮಕರ್ತ ವೆಂಕಪ್ಪಯ್ಯ ಒಡೆಯರ್ ಪ್ರತಿಕ್ರಿಯಿಸಿದ್ದಾರೆ. ಎರಡು ವರ್ಷದ ಹಿಂದೆಯೂ ಅವರು ಇಂತಹದೇ ಅಪಸ್ವರ ಎತ್ತಿದ್ದರು. ಕಾರ್ಣಿಕ ವಿಶ್ಲೇಷಣೆ ಮಾಡಿರಲಿಲ್ಲ.

12 ನದಿಗಳಲ್ಲಿ ಹೆಚ್ಚಿದ ಮಾಲಿನ್ಯ ರಾಜ್ಯಕ್ಕೆ ಎನ್‌ಜಿಟಿ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಕೃಷ್ಣಾ, ಕಾವೇರಿ ಸೇರಿದಂತೆ 12 ನದಿಗಳಲ್ಲಿ ಮಾಲಿನ್ಯ ಪ್ರಮಾಣ ಹೆಚ್ಚಿ ನೀರಿನ ಗುಣಮಟ್ಟ ಕಳಪೆಯಾಗಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವ ಪ್ರಧಾನ ಪೀಠದ ಮುಖ್ಯಸ್ಥ ಪ್ರಕಾಶ್ ಶ್ರೀವಾಸ್ತವ ಹಾಗೂ ಡಾ.ಎ.ಸೆಂಥಿಲ್ ವೇಲ್ ಅವರನ್ನು ಒಳಗೊಂಡ ಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಹಾಗೂ ಬೆಂಗಳೂರು ಜಲಮಂಡಳಿ ಅಧ್ಯಕ್ಷರಿಗೆ ನೋಟಿಸ್ ನೀಡಿ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿದೆ.

ಅರ್ಕಾವತಿ, ಲಕ್ಷ್ಮಣತೀರ್ಥ, ತುಂಗಭದ್ರಾ, ಭದ್ರಾ, ಕಾವೇರಿ, ಕಬಿನಿ, ಕಾಗಿನ, ಕೃಷ್ಣಾ, ಶಿಂಷಾ, ಭೀಮಾ, ನೇತ್ರಾವತಿ ಹಾಗೂ ತುಂಗಾ ನದಿಗಳ ನೀರಿನ ಗುಣಮಟ್ಟದ ವರದಿಯನ್ನು ಮಾಲಿನ್ಯ ನಿಯಂತ್ರಣ ಮಂಡಳಿ ನವೆಂಬರ್ ತಿಂಗಳಲ್ಲಿ ಬಿಡುಗಡೆ ಮಾಡಿದೆ. ಈ ವರದಿಯ ಪ್ರಕಾರ, ಈ ನದಿಗಳ ನೀರಿನ ಗುಣಮಟ್ಟ ಡಿ ದರ್ಜೆಯದ್ದು. ಕೇಂದ್ರ ಸರ್ಕಾರ ನೀರಿನ ಮೇಲ್ವಿಚಾರಣ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದ 38 ಕಡೆಗಳಲ್ಲಿ ನದಿ ನೀರಿನ ಗುಣಮಟ್ಟದ ಪರಿಶೀಲನೆ ನಡೆಸಲಾಗುತ್ತದೆ. 19 ಕಡೆಗಳಲ್ಲಿ ನೀರಿನ ಗುಣಮಟ್ಟ ಕಳಪೆಯಾಗಿವುದು ಗೊತ್ತಾಗಿದೆ. ಜನಸಂಖ್ಯೆಯ ವ್ಯಾಪಕ ಬೆಳವಣಿಗೆ, ನಗರೀಕರಣದಿಂದ ಉಂಟಾದ ಭಾರಿ ಒತ್ತಡ ಹಾಗೂ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ ಇದಕ್ಕೆ ಕಾರಣ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದು ವನ್ಯಜೀವಿಗಳ ಬಳಕೆ ಹಾಗೂ ಮೀನು ಸಾಕಣೆಗೆ ಮಾತ್ರ ಸೂಕ್ತವಾಗಿದೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ. ನದಿಗಳ ಪಕ್ಕದಲ್ಲಿ ಕೈಗಾರಿಕೆಗಳು ತಲೆ ಎತ್ತಿದ್ದು, ತ್ಯಾಜ್ಯ ನೀರನ್ನು ಸಂಸ್ಕರಿಸದೆ ನದಿಗಳಿಗೆ ಬಿಡಲಾಗುತ್ತಿದೆ. ಕೊಳಚೆ ನೀರಿನ ಸಂಸ್ಕರಣೆಯಲ್ಲಿ ಮಂಡಳಿ ಹಾಗೂ ಅಧಿಕಾರಿಗಳ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಪೀಠ ಬೊಟ್ಟು ಮಾಡಿದೆ.

ಪ್ರಕರಣವನ್ನು ಚೆನ್ನೈ ಪೀಠಕ್ಕೆ ವರ್ಗಾಯಿಸಲಾಗಿದೆ. ವಿಚಾರಣೆಯನ್ನು ಏಪ್ರಿಲ್ 8ಕ್ಕೆ ಮುಂದೂಡಲಾಗಿದೆ.

ಪಾವಗಡ: ಮೂವರು ಮಹಿಳೆಯರ ಸಾವು

ಒಂದನೇ ಪುಟದಿಂದ

'ಅಂಜಲಿ ಭಾರಿ ನೋವು ಅನುಭವಿಸುತ್ತಿದ್ದರು. ಮಕ್ಕಳಿಗಾದರೂ ನಾನು ಉಳಿಯಬೇಕು. ಹೇಗಾದರೂ ಮಾಡಿ ನನ್ನನ್ನು ಉಳಿಸಿಕೊಳ್ಳಿ ಎಂದು ಆಕೆ ಅಂಗಲಾಚುತ್ತಿದ್ದ ದೃಶ್ಯ ಈಗಲೂ ಮನಕಲಕುತ್ತಿದೆ. ಆ ನೋವಿನಲ್ಲೂ ಮಗುವನ್ನು ತೋರಿಸುವಂತೆ ಕೇಳುತ್ತಿದ್ದಳು. ಮಕ್ಕಳ ಸ್ಥಿತಿ ನೆನಪಿಸಿಕೊಂಡರೆ ನಿದ್ದೆ ಬರುತ್ತಿಲ್ಲ' ಎಂದು ಅಂಜಲಿ ಅಕ್ಕ ರಾಧಮ್ಮ ಕಣ್ಣೀರು ಹಾಕಿದರು. ಸಾವಿಗೆ ವೈದ್ಯರ ನಿರ್ಲಕ್ಷ್ಯ ಕಾರಣ ಎಂದು ಆರೋಪಿಸಿ ಮಹಿಳೆಯರ ಕುಟುಂಬಸ್ಥರು ಆಸ್ಪತ್ರೆಯ ಮುಂಭಾಗ ಸೋಮವಾರ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ಪೊಲೀಸರು ಪ್ರತಿಭಟನ ನಿರತರ ಮನವೊಲಿಸಿದರು.

'ಮೃತರ ರಕ್ತದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ. ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಡಿ.ಎನ್. ಮಂಜುನಾಥ್ ತಿಳಿಸಿದರು.

'ಧಾರ್ಮಿಕ ಪರಿಷತ್ ಆಯ್ಕೆಯಲ್ಲಿ ಸರ್ಕಾರದ ಹಸ್ತಕ್ಷೇಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರ ಹಿಂದೂ ಧಾರ್ಮಿಕ ದತ್ತಿ ಇಲಾಖೆಯನ್ನು ಕಡೆಗಣಿಸಿರುವುದು ಮಾತ್ರವಲ್ಲದೇ, ಹೊಸ ಮಸೂದೆಯ ಮೂಲಕ ಧಾರ್ಮಿಕ ಪರಿಷತ್ತಿನ ಆಯ್ಕೆ ಪ್ರಕ್ರಿಯೆಯಲ್ಲೂ ಹಸ್ತಕ್ಷೇಪಕ್ಕೆ ಮುಂದಾಗಿದೆ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸಪೂಜಾರಿ ಆರೋಪಿಸಿದರು.

ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಷಯವಾಗಿ ಮುಖ್ಯಮಂತ್ರಿ ಆದಿಯಾಗಿ ಎಲ್ಲ ಸಚಿವರು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

'ಎ ದರ್ಜೆಯ ದೇವಸ್ಥಾನಗಳ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಅಧಿಕಾರ ಧಾರ್ಮಿಕ ಪರಿಷತ್ತಿಗಿದೆ. ಬಿ ಮತ್ತು ಸಿ ದರ್ಜೆಯ ದೇವಸ್ಥಾನಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ಜಿಲ್ಲಾ ಧಾರ್ಮಿಕ ಪರಿಷತ್ತು ಮಾಡುತ್ತದೆ. ಧಾರ್ಮಿಕ ಪರಿಷತ್ ಮೂಲಕ ಸದಸ್ಯರನ್ನು ಆಯ್ಕೆ ಮಾಡಿದ ನಂತರವೇ ಅಧ್ಯಕ್ಷರ ಆಯ್ಕೆ ಆಗುತ್ತದೆ. ರಾಮಲಿಂಗಾರೆಡ್ಡಿ ಅವರು ಮಂಡಿಸಿರುವ ಮಸೂದೆಯ ಪ್ರಕಾರ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರನ್ನು ಸರ್ಕಾರವೇ ನೇಮಕ ಮಾಡುತ್ತದೆ. ಈ ಹಸ್ತಕ್ಷೇಪವನ್ನು ನಾವು ವಿರೋಧಿಸುತ್ತೇವೆ' ಎಂದು ಪೂಜಾರಿ ಹೇಳಿದರು.

'ಕಳೆದ ವರ್ಷ ನಮ್ಮ ಸರ್ಕಾರ ಧಾರ್ಮಿಕ ದತ್ತಿ ಇಲಾಖೆಗೆ ₹250 ಕೋಟಿ ನೀಡಿತ್ತು. ಈ ಬಾರಿ ಕಾಂಗ್ರೆಸ್ ಸರ್ಕಾರ ಕೇವಲ ₹50 ಕೋಟಿ ಮಾತ್ರ ಕೊಟ್ಟಿದೆ. ನಮ್ಮ ಅವಧಿಯಲ್ಲಿ ಅರ್ಚಕರಿಗೆ ಮನೆ ಕೊಟ್ಟಿದ್ದು ಮಾತ್ರವಲ್ಲದೇ, ತಸ್ತೀಕ್ ಮೊತ್ತವನ್ನು ₹48,000 ಕ್ಕೆ ಏರಿಸಲಾಗಿತ್ತು' ಎಂದರು.

'ದೇವಸ್ಥಾನದ ಒಟ್ಟು ಆದಾಯದಿಂದ ಶೇ 10ರಷ್ಟು ಪಡೆಯುವ ಮಸೂದೆ ಜಾರಿಗೆ ತರಲು ಮುಂದಾಗಿರುವುದರಿಂದ ದೇವಸ್ಥಾನದ ಒಟ್ಟು ಆರ್ಥಿಕ ವ್ಯವಸ್ಥೆ ಕುಸಿಯುತ್ತದೆ. ಇದನ್ನು ತಡೆಯಬೇಕು ಎಂಬ ಕಾರಣಕ್ಕೆ ನಾವು ವಿರೋಧಿಸಿದ್ದೇವೆ. ದುರದೃಷ್ಟ ಎಂದರೆ ಬಿಜೆಪಿ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದೆ' ಎಂದು ಪೂಜಾರಿ ಹೇಳಿದರು.

'ದೇವಸ್ಥಾನಗಳಲ್ಲಿ ಅಭಿವೃದ್ಧಿಗಾಗಿ ಕಾಯ್ದೆಗೆ ತಿದ್ದುಪಡಿ ತಂದು 33,500 ದೇವಸ್ಥಾನಗಳಿಗೆ ತಸ್ತೀಕ್ ನೀಡುವ ಯೋಜನೆ ರೂಪಿಸಿದ್ದೇ ನಮ್ಮ ಸರ್ಕಾರ. ನಾನು ಇಲಾಖೆಯ ಸಚಿವನಾಗಿದ್ದಾಗ ಅರ್ಚಕರಿಗೆ ಪಿಂಚಣಿ, ಆರೋಗ್ಯ ವಿಮೆ, ಅರ್ಚಕರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಅರ್ಚಕರಿಗೆ ಮನೆ ಮಂಜೂರು ಮಾಡಿದ್ದೇವೆ' ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯರಾದ ಕೆ.ಎಸ್. ನವೀನ್, ಪ್ರತಾಪ್ ಸಿಂಹ ನಾಯಕ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಮರೆಯಾದ 'ಕಾಡಿನೊಳಗೊಂದು ಜೀವ'

• ಕೆ.ಎಸ್.ಗಿರೀಶ

ನುಡಿ ನಮನ

ಮಡಿಕೇರಿ: ಅರಣ್ಯ ರಕ್ಷಣೆಗಾಗಿ ಮಿಡಿಯುತ್ತಿದ್ದ 'ಕಾಡಿನೊಳಗೊಂದು ಜೀವ' ಕೆ.ಎಂ.ಚಿಣ್ಣಪ್ಪ ಇನ್ನಿಲ್ಲ. ಕಾಡಿನ ಸಂರಕ್ಷಣೆಯೊಂದನ್ನೇ ಬದುಕಿನ ಗುರಿಯನ್ನಾಗಿಸಿಕೊಂಡಿದ್ದ, ಅರಣ್ಯ ರಕ್ಷಣೆಗಾಗಿ ಹೋರಾಡಿದ ಯೋಧ ಚಿರನಿದ್ರೆಗೆ ಸರಿದಿದ್ದಾರೆ.

ಕೋಟ್ರಂಗಡ ಮೇದಪ್ಪ ಚಿಣ್ಣಪ್ಪ, ಇತರೆ ಅಧಿಕಾರಿಗಳಂತೆ ಕೆಲಸ ಮಾಡಿದವರಲ್ಲ. ಅವರು ಕಾಡಿನ ರಕ್ಷಣೆಗಾಗಿ ಯುದ್ಧದಂತೆ ಹೋರಾಡಿದವರು. ತಮ್ಮ ಮನೆಗೆ ಬೆಂಕಿ ಬಿದ್ದರೂ ಬೆಚ್ಚದೇ, ಅಳುಕದೇ ಅಲ್ಲಿಯೇ ನಿಂತು ಕಾಡನ್ನು ಜತನದಿಂದ ರಕ್ಷಿಸಿದವರು.

ಟಿಂಬರ್ ಮಾಫಿಯಾ ವಿರುದ್ಧ ಹಾಗೂ ಅರಣ್ಯ ರಕ್ಷಣೆಗಾಗಿ ಕೈಗೊಂಡ ಶಿಸ್ತಿನ ಕ್ರಮಗಳಿಂದ ಅವರು ಸಾಕಷ್ಟು ವಿರೋಧಿಗಳನ್ನು ಎದುರಿಸಬೇಕಾಯಿತು. 1992ರಲ್ಲಿ ಗೊಟ್ಟೂರು ಕಾಡಿನಲ್ಲಿ ಚಿಪ್ಪ ಎನ್ನುವವರ ಸಾವಿನ ಪ್ರಕರಣ ಹಿಂಸಾತ್ಮಕ ತಿರುವು ಪಡೆಯಿತು. ಅಂಥ ಸಮಯಕ್ಕಾಗಿ ಹೊಂಚು ಹಾಕಿದ್ದ ಕಿಡಿಗೇಡಿಗಳು ಅವರ ಮನೆಗೆ ಮಾತ್ರವಲ್ಲದೇ, ಕಾಡಿಗೂ ಬೆಂಕಿ ಹಚ್ಚಿದ್ದರು. ಈ ಅಗ್ನಿಕಾಂಡ ಅವರನ್ನು ಸಾಕಷ್ಟು ಜರ್ಝರಿತರನ್ನಾಗಿಸಿತು. ಮರುವರ್ಷವೇ, 1993ರಲ್ಲಿ ಅವರು ಸ್ವಯಂನಿವೃತ್ತಿ ಪಡೆದು ನಾಗರಹೊಳೆ ವನ್ಯಜೀವಿ ಸಂರಕ್ಷಣಾ ಯೋಜನೆಯ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು.

'ವೈಲ್ಡ್‌ಲೈಫ್ ಫಸ್ಟ್' ಸ್ಥಾಪನೆ: 1995ರಲ್ಲಿ ಎಚ್‌.ಎನ್‌.ಎ.ಪ್ರಸಾದ್, ಸನತ್‌ಕುಮಾರ್, ಕೃಷ್ಣಪ್ರಸಾದ್, ಸಮ್ಮು ಪೂವಯ್ಯ, ಪ್ರವೀಣ್ ಭಾರ್ಗವ್ ಅವರೊಂದಿಗೆ 'ವೈಲ್ಡ್ ಲೈಫ್ ಫಸ್ಟ್' ಸಂಘಟನೆಯನ್ನು ಸ್ಥಾಪಿಸಿ, ಯುವಜನರಿಗೆ ಅರಣ್ಯದ ಮಹತ್ವವನ್ನು ತಿಳಿಸುತ್ತಲೇ ಇದ್ದರು. ಅರಣ್ಯ ಇಲಾಖೆಯ ಹೊಸ ಅಧಿಕಾರಿಗಳಿಗೂ ಪಾಠ ಹೇಳಿದ್ದರು.

ಕುದುರೆಮುಖ ಗಣಿಗಾರಿಕೆಯ ವಿರುದ್ಧ ಸಂಘಟನೆಯು ನಡೆಸಿದ ಕಾನೂನಾತ್ಮಕ ಹೋರಾಟಗಳು ಪರಿಸರ ಸಂರಕ್ಷಣೆಯ ಹಾದಿಯಲ್ಲಿ ಮಹತ್ವದ ಹೆಜ್ಜೆಯಾಗಿತ್ತು. ಅವರ ಬಗ್ಗೆ ಲೇಖಕ ಶಿವರಾಮಕಾರಂತರು ತಮ್ಮ 'ಅಳಿದುಳಿದ ನೆನಪುಗಳು' ಪುಸ್ತಕದಲ್ಲಿ ಪ್ರಸ್ತಾಪಿಸಿರುವುದು, ಪರಿಸರ ಸಂರಕ್ಷಣೆಯ ವಿಷಯದಲ್ಲಿ ಅವರ ಬದ್ಧತೆಯ ಕಡೆಗೆ ಗಮನ ಸೆಳೆಯುತ್ತದೆ.

ಹುಲಿ ಸಂಖ್ಯೆ ಹೆಚ್ಚಳ: ಅಳಿವಿನಂಚಿನಲ್ಲಿದ್ದ ಹುಲಿ ಸಂತತಿಯನ್ನು ಉಳಿಸುವುದರತ್ತಲೂ ಅವರು ತೊಡಗಿಸಿಕೊಂಡಿದ್ದರ ಫಲವಾಗಿಯೇ ಇಂದು ನಾಗರಹೊಳೆಯಲ್ಲಿ ಹೆಚ್ಚು ಹುಲಿಗಳಿವೆ.

ಮೊದಲಿಗೆ ಅವರು ಬೇಟೆ ವಿರುದ್ಧ ಕೈಗೊಂಡ ಕಠಿಣ ಕ್ರಮಗಳು ಸಹಜವಾಗಿಯೇ ಬೇಟೆಗಾರರಿಗೆ ಆಹುತಿಯಾಗಲಿದ್ದ ಹುಲಿಗಳ ಜೊತೆಗೆ, ಅವುಗಳಿಗೆ ಆಹಾರವಾಗಬೇಕಿದ್ದ ಇತರೆ ಪ್ರಾಣಿಗಳನ್ನೂ ರಕ್ಷಿಸಿದವು.

ಕಾಡನ್ನು ಉಳಿಸುವುದು ಹೇಗೆಂದು ಇದುವರೆಗೂ ಒಂದೂವರೆ ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಅರಣ್ಯ ಇಲಾಖೆಯ ಸಾವಿರಾರು ಸಿಬ್ಬಂದಿಗೆ ತರಬೇತಿ ನೀಡಿರುವುದು ಚಿಣ್ಣಪ್ಪ ಅವರ ಹೆಗ್ಗಳಿಕೆ.

ಕೆ.ಎಂ.ಚಿಣ್ಣಪ್ಪ ನಿಧನ

ಕೆ.ಎಂ.ಚಿಣ್ಣಪ್ಪ

ಮಡಿಕೇರಿ: 'ವೈಲ್ಡ್‌ಲೈಫ್ ಫಸ್ಟ್' ಸಂಘಟನೆಯ ಅಧ್ಯಕ್ಷ ಕೆ.ಎಂ.ಚಿಣ್ಣಪ್ಪ (84) ಅವರು ಇಲ್ಲಿನ ಪೊನ್ನಂಪೇಟೆ ತಾಲ್ಲೂಕಿನ ಕುಮಟೂರು ಗ್ರಾಮದ ಸ್ವಗೃಹದಲ್ಲಿ ಸೋಮವಾರ ಅನಾರೋಗ್ಯದಿಂದ ನಿಧನರಾದರು. ಅವರಿಗೆ ಪುತ್ರ ಹಾಗೂ ಪತ್ನಿ ಇದ್ದಾರೆ. ಅಂತ್ಯಕ್ರಿಯೆ ಫೆ. 27ರಂದು ಬೆಳಿಗ್ಗೆ ಸ್ವಗ್ರಾಮದಲ್ಲಿ ನಡೆಯಲಿದೆ.

ಕೋಟ್ರಂಗಡ ಮೇದಪ್ಪ ಚಿಣ್ಣಪ್ಪ ಅವರು ಕೋಟ್ರಂಗಡ ಮೇದಪ್ಪ ಮತ್ತು ನೀಲವ್ವ ಅವರ ಪುತ್ರನಾಗಿ 1941ರಲ್ಲಿ ಕೊಡಗಿನ ಕುಮಟೂರಿನಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸ ಕುಮಟೂರು ಮತ್ತು ಕಾಕೂರಿನಲ್ಲಿ, ಪ್ರೌಢಶಾಲಾ ವಿದ್ಯಾಭ್ಯಾಸ ಶ್ರೀಮಂಗಲದಲ್ಲಿ ನಡೆಯಿತು. 1967ರಲ್ಲಿ ಫಾರೆಸ್ಟರ್ ಆಗಿ ಅರಣ್ಯ ಇಲಾಖೆಗೆ ಸೇರಿದರು. 1970ರಲ್ಲಿ ನಾಗರಹೊಳೆ ವನ್ಯಜೀವಿ ವಿಭಾಗ ಸೇರಿ, 1975ರಲ್ಲಿ ರೇಂಜರ್ ಆಗಿ ಸುಂಕದಕಟ್ಟೆಯಲ್ಲಿ ನೇಮಕಗೊಂಡರು. ನಂತರ, ಅರಣ್ಯ ರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು 1993ರಲ್ಲಿ ಸ್ವಯಂನಿವೃತ್ತಿ ಪಡೆದರು. 'ವೈಲ್ಡ್ ಲೈಫ್ ಫಸ್ಟ್' ಸಂಘಟನೆಯನ್ನು ಸ್ಥಾಪಿಸಿ ಕುದುರೆಮುಖದ ಗಣಿಗಾರಿಕೆ ವಿರುದ್ಧ ಹಾಗೂ ಅರಣ್ಯ ರಕ್ಷಣೆಗಾಗಿ ಹಲವು ಕಾನೂನಿನಾತ್ಮಕ ಹೋರಾಟಗಳನ್ನು ಕೈಗೊಂಡರು. ಸದ್ಯ, ವಿದ್ಯಾರ್ಥಿಗಳಿಗೆ ಅರಣ್ಯದ ಮಹತ್ವ ತಿಳಿಸುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದರು.

ತಮ್ಮ ಬದುಕನ್ನು ಕುರಿತು 'ಕಾಡಿನೊಳಗೊಂದು ಜೀವ' ಶೀರ್ಷಿಕೆಯಡಿ ಕೃತಿ ಹೊರತಂದಿದ್ದರು. ಟಿ.ಎಸ್. ಗೋಪಾಲ್ ನಿರೂಪಿಸಿದ್ದರು.

1985ರಲ್ಲಿ ಮುಖ್ಯಮಂತ್ರಿಗಳ ಚಿನ್ನದ ಪದಕ. 1996ರಲ್ಲಿ ಟೈಗರ್ ಲಿಂಕ್ ಬಾಗ್ ಸೇವಕ್ ಪ್ರಶಸ್ತಿ, 1998ರಲ್ಲಿ ನ್ಯೂಯಾರ್ಕ್ ಜುಆಲಾಜಿಕಲ್ ಸೊಸೈಟಿ ಪ್ರಶಸ್ತಿ, 2000ರಲ್ಲಿ ಎಸ್ಸೋ ಹುಲಿ ಸಂರಕ್ಷಣಾ ಪ್ರಶಸ್ತಿ, 2004ರಲ್ಲಿ ಸ್ಯಾಂಕ್ಚುಯರಿ ಮ್ಯಾಗಜೈನ್ ಎಬಿಎನ್ ಅಮ್ರೊ ಪ್ರಶಸ್ತಿ ಹಾಗೂ 2009ರಲ್ಲಿ ಸಿಎನ್‌ಎನ್–ಐಬಿಎನ್ ರಿಯಲ್ ಹಿರೋಸ್‌ನಂಥ ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ವರ್ಣಾಶ್ರಮ, ಜಾತಿಪದ್ಧತಿ, ಮೇಲು– ಕೀಳು ಭಾವನೆಯಂತಹ ಮಧ್ಯಯುಗದ ಕ್ರೂರ, ಕರಾಳ ತತ್ವಗಳೆಲ್ಲಾ ವೈಜ್ಞಾನಿಕ ದೃಷ್ಟಿಯ ಅಗ್ನಿಕುಂಡದಲ್ಲಿ ಭಸ್ಮವಾಗಬೇಕು.

–ಕುವೆಂಪು

ಹಿರಿಯ ನಾಗರಿಕರ ಆರೈಕೆ ಬೇಕಿದೆ ದೀರ್ಘಾವಧಿ ಕಾರ್ಯತಂತ್ರ

‘ಭಾರತದಲ್ಲಿ ಹಿರಿಯ ನಾಗರಿಕರ ಆರೈಕೆ’ ಹೆಸರಿನಲ್ಲಿ ನೀತಿ ಆಯೋಗ ಸಿದ್ಧಪಡಿಸಿರುವ ವರದಿಯು ದೇಶದಲ್ಲಿ ಜನಸಂಖ್ಯೆಯ ಸ್ವರೂಪದಲ್ಲಿ ಆಗುತ್ತಿರುವ ಬದಲಾವಣೆಗಳ ಮೇಲೆ, ಹಲವು ಬಗೆಗಳಲ್ಲಿ ಇದು ತರಲಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದೆ. ಹಿರಿಯ ನಾಗರಿಕರ ಪ್ರಮಾಣವು ಈಗ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 8.6ರಷ್ಟು ಇದೆ ಎಂದು ಅಂದಾಜಿಸಲಾಗಿದೆ. ಇದು 2030ರೊಳಗೆ ಶೇ 13ಕ್ಕೆ ಹೆಚ್ಚಾಗಲಿದೆ, 2050ರೊಳಗೆ ಶೇ 20ಕ್ಕೆ ಏರಿಕೆ ಆಗಲಿದೆ ಎಂದು ವರದಿಯು ಅಂದಾಜಿಸಿದೆ. ಇದರ ಅರ್ಥ, ಹಿರಿಯ ನಾಗರಿಕರ ಆರೈಕೆಯನ್ನು ಗಮನದಲ್ಲಿ ಇರಿಸಿಕೊಂಡು ಹಲವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ, ಅವರ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಹಲವು ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ಹೆಚ್ಚಿನ ಕೆಲಸಗಳು ಆಗಿಲ್ಲ, ಕರಾರುವಾಕ್ ಆಗಿರುವ ಅಧ್ಯಯನಗಳು, ಅಂದಾಜುಗಳು ಕೂಡ ಲಭ್ಯವಿಲ್ಲ. ದೇಶದ ಹಿರಿಯ ನಾಗರಿಕರ ಪೈಕಿ ಶೇ 71ರಷ್ಟು ಮಂದಿ ಗ್ರಾಮೀಣ ಪ್ರದೇಶಗಳಲ್ಲಿ ಇದ್ದಾರೆ. ಅಲ್ಲಿ ಹಣಕಾಸಿನ ಸೇವೆಗಳು, ಆರೋಗ್ಯ ಸೇವಾ ಸೌಲಭ್ಯಗಳು ಹಾಗೂ ಇತರ ಅಭಿವೃದ್ಧಿ ಕ್ರಮಗಳು ನಗರ ಪ್ರದೇಶಗಳಲ್ಲಿ ಇರುವಷ್ಟು ದೊಡ್ಡ ಮಟ್ಟದಲ್ಲಿ ಲಭ್ಯವಿಲ್ಲ. ಹಿರಿಯ ನಾಗರಿಕರಿಗೆ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿರುವುದೇ ಈ ಸೌಲಭ್ಯಗಳು.

ವೃದ್ಧಾಪ್ಯದಲ್ಲಿ ಇರುವವರಿಗೆ ಹಣಕಾಸಿನ ಭದ್ರತೆ ಕಲ್ಪಿಸಲು ಯೋಜನೆ ರೂಪಿಸಬೇಕು. ಆರೋಗ್ಯ ಸೇವಾ ಸೌಲಭ್ಯಗಳನ್ನು ಇನ್ನಷ್ಟು ಬಲಪಡಿಸಬೇಕು

ನೀತಿ ಆಯೋಗದ ವರದಿಯು ಕೆಲವು ಕಟು ವಾಸ್ತವಗಳ ಬಗ್ಗೆಯೂ ಗಮನ ಸೆಳೆಯುವ ಕೆಲಸ ಮಾಡಿದೆ. ಹಿರಿಯ ನಾಗರಿಕರ ಪೈಕಿ ಸರಿಸುಮಾರು ಶೇ 75ರಷ್ಟು ಮಂದಿ ದೀರ್ಘಾವಧಿಯ ಕಾಯಿಲೆಗಳಿಗೆ ತುತ್ತಾಗಿದ್ದಾರೆ, ಪ್ರತಿ ಮೂವರಲ್ಲಿ ಒಬ್ಬರು ಖಿನ್ನತೆಯ ಲಕ್ಷಣಗಳನ್ನು ಹೊಂದಿದ್ದಾರೆ. ಹಿರಿಯ ನಾಗರಿಕರಿಗೆ ಆರೋಗ್ಯ ಸೇವೆಗಳನ್ನು ಒದಗಿಸುವುದು ಸವಾಲಿನ ಕೆಲಸವೇ ಹೌದು. ಹಿರಿಯ ನಾಗರಿಕರಿಗೆ ವೈದ್ಯಕೀಯ ಸೇವೆ ಒದಗಿಸುವಲ್ಲಿನ ತಜ್ಞತೆಯು ದೇಶದಲ್ಲಿ ಹೆಚ್ಚಿಲ್ಲ. ಅಲ್ಲದೆ, ಹಲವರಿಗೆ ತೀರಾ ಮೂಲಭೂತವಾದ ವೈದ್ಯಕೀಯ ಸೌಲಭ್ಯಗಳೂ ಸಿಗುತ್ತಿಲ್ಲ. ಹಿರಿಯ ನಾಗರಿಕರ ಪೈಕಿ ಶೇ 78ರಷ್ಟು ಮಂದಿಗೆ ಯಾವುದೇ ಪಿಂಚಣಿ ಸೌಲಭ್ಯ ಇಲ್ಲ, ಶೇ 18ರಷ್ಟು ಮಂದಿಗೆ ಮಾತ್ರ ಆರೋಗ್ಯ ವಿಮೆಯ ಸೌಲಭ್ಯ ಇದೆ. ಇವರಲ್ಲಿ ಹೆಚ್ಚಿನವರು ಆರ್ಥಿಕ ಅಭದ್ರತೆಯಲ್ಲಿದ್ದಾರೆ. ಹಲವರಿಗೆ ದಿನನಿತ್ಯದ ಆಹಾರವೇ ದೊಡ್ಡ ಸಮಸ್ಯೆ, ಸಾಮಾಜಿಕ ಭದ್ರತಾ ಸೌಲಭ್ಯಗಳು ಸಾಕಾಗುತ್ತಿಲ್ಲ ಅಥವಾ ಅವು ಇಲ್ಲವೇ ಇಲ್ಲ. ಸಣ್ಣ ಕುಟುಂಬಗಳ ಕಾರಣದಿಂದಾಗಿ ಹಿರಿಯ ನಾಗರಿಕರು ಒಂಟಿತನ ಅನುಭವಿಸುತ್ತಿದ್ದಾರೆ, ಅವರಲ್ಲಿ ನಿರಾಶೆ ಮನೆಮಾಡಿದೆ. ಹಿರಿಯ ನಾಗರಿಕರ ಪೈಕಿ ಮಹಿಳೆಯರಲ್ಲಿ ಶೇ 54ರಷ್ಟು ಮಂದಿ ವಿಧವೆಯರು, ಇವರಲ್ಲಿ ಶೇ 9ರಷ್ಟು ಮಂದಿ ಒಂಟಿಯಾಗಿ ವಾಸಿಸುತ್ತಿದ್ದಾರೆ ಎಂದು ವರದಿಯು ಹೇಳಿದೆ. ತಮಗಾಗಿ ರೂಪಿಸಲಾಗಿರುವ ಯೋಜನೆಗಳು ಹಾಗೂ ಇರುವ ಸೌಲಭ್ಯಗಳ ಬಗ್ಗೆ ಹಲವರಿಗೆ ಮಾಹಿತಿಯೇ ಇಲ್ಲ ಎಂದು ಕೂಡ ಅದರಲ್ಲಿ ಉಲ್ಲೇಖಿಸಲಾಗಿದೆ.

ಜನಸಂಖ್ಯೆಯ ಸ್ವರೂಪದಲ್ಲಿನ ಬದಲಾವಣೆಯು ಮುಂದಿನ ದಿನಗಳಲ್ಲಿ ಹೆಚ್ಚು ವೇಗವಾಗಿ ಆಗಲಿರುವ ಕಾರಣದಿಂದ ಪರಿಸ್ಥಿತಿಯು ಇನ್ನಷ್ಟು ಕೆಡಲಿದೆ. ಹೀಗಾಗಿ, ಈ ಸಮಸ್ಯೆಯನ್ನು ನಿಭಾಯಿಸಲು ಅಗತ್ಯವಿರುವ ಕೆಲಸಗಳು, ಯೋಜನೆಗಳು ಈಗಿನಿಂದಲೇ ಸಿದ್ಧವಾಗಬೇಕು. ಜನಸಂಖ್ಯೆಯಲ್ಲಿ ಯುವ ಜನರ ಪ್ರಮಾಣ ಹೆಚ್ಚಿನ ಮಟ್ಟದಲ್ಲಿ ಇರುವ ಕಾರಣದಿಂದಾಗಿ ಹಲವಷ್ಟು ಲಾಭಗಳು ಸಿಗಲಿವೆ ಎಂಬ ನಿರೀಕ್ಷೆ ಇದೆ. ಆದರೆ, ಹಿರಿಯ ನಾಗರಿಕರಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳದೆ ಇದ್ದರೆ ಹಾಗೂ ಯೋಜನೆಗಳನ್ನು ರೂಪಿಸದೆ ಇದ್ದರೆ, ಅದರಿಂದ ಉಂಟಾಗುವ ಸಮಸ್ಯೆಗಳನ್ನು ನಿಭಾಯಿಸುವ ಭರದಲ್ಲಿಯೇ ಜನಸಂಖ್ಯೆಯಿಂದ ಸಿಗುವ ಎಲ್ಲ ಬಗೆಯ ಲಾಭಗಳ ಪ್ರಯೋಜನ ದಕ್ಕದಂತೆ ಆಗಿಬಿಡುತ್ತದೆ. ಆರೋಗ್ಯ ಸೇವಾ ಸೌಲಭ್ಯಗಳನ್ನು ಇನ್ನಷ್ಟು ಬಲಪಡಿಸಬೇಕು, ತುರ್ತು ಸಂದರ್ಭಗಳಲ್ಲಿ ಅಗತ್ಯವಿರುವ ಮೂಲಸೌಕರ್ಯವನ್ನು ಉತ್ತಮಪಡಿಸಬೇಕು ಎಂದು ವರದಿಯಲ್ಲಿ ಹೇಳಲಾಗಿದೆ. ವೃದ್ಧಾಪ್ಯದಲ್ಲಿ ಇರುವವರಿಗೆ ಹಣಕಾಸಿನ ಭದ್ರತೆ ಕಲ್ಪಿಸಲು ಯೋಜನೆ ರೂಪಿಸಬೇಕಿದೆ. ಪಿಂಚಣಿ, ವಿಮೆ, ತೆರಿಗೆ ಸುಧಾರಣೆಗಳು ಮತ್ತು ಹಿರಿಯ ನಾಗರಿಕರಿಗೆ ಸಂಬಂಧಿಸಿದ ಇತರ ಸುಧಾರಣಾ ಕ್ರಮಗಳ ಬಗ್ಗೆ ಗಮನ ನೀಡಬೇಕು. ಜೀವಿತಾವಧಿ ಹೆಚ್ಚಾದಂತೆಲ್ಲ ಕೆಲಸದ ಸ್ವರೂಪದಲ್ಲಿ ಇನ್ನಷ್ಟು ಸುಧಾರಣೆಗಳನ್ನು ತರಬೇಕಾಗುತ್ತದೆ. ಹಿರಿಯ ನಾಗರಿಕರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿಭಾಯಿಸಲು ದೀರ್ಘಾವಧಿಯ ಕಾರ್ಯತಂತ್ರವೊಂದನ್ನು ರೂಪಿಸಬೇಕು. ಈ ಕಾರ್ಯತಂತ್ರವನ್ನು ಕಾಲಕಾಲಕ್ಕೆ ಪರಿಷ್ಕರಿಸಬೇಕು.

ವಿವಿಧ ವಲಯಗಳ ಇಚ್ಛಾಶಕ್ತಿಗಳು ಒಗ್ಗೂಡಿದಾಗ ವಿರೋಧಿ ಒಕ್ಕೂಟಕ್ಕೆ ಬಲ ಬರಬಲ್ಲದು

ವಿರೋಧಿ ಒಕ್ಕೂಟ– ಅಧಿಕಾರದ ಇಚ್ಛಾಶಕ್ತಿ

ವಿಶ್ಲೇಷಣೆ

ನಟರಾಜ್ ಹುಳಿಯಾರ್

1975-77ರ ತುರ್ತುಪರಿಸ್ಥಿತಿಯಲ್ಲಿ ವಿರೋಧ ಪಕ್ಷಗಳು ಒಟ್ಟಾಗಿದ್ದರ ಹಿನ್ನೆಲೆಯ ಬಗ್ಗೆ ಚಾಲ್ತಿಯಲ್ಲಿದ್ದ ಒಂದು ಜೋಕ್: ‘ಇಂದಿರಾ ಗಾಂಧಿ ನೇತೃತ್ವದ ಸರ್ಕಾರ ವಿರೋಧ ಪಕ್ಷದವರನ್ನು ಒಟ್ಟಾಗಿ ಜೈಲಿಗೆ ಹಾಕಿದ್ದರಿಂದ ಅಲ್ಲೇ ಅವರೆಲ್ಲ ಮಾತಾಡಿಕೊಂಡು ಒಂದಾದರು; ತುರ್ತುಪರಿಸ್ಥಿತಿ ರದ್ದಾಗಿ ಚುನಾವಣೆ ಘೋಷಣೆಯಾದ ಮೇಲೆ ಹೊರಬಂದು ಒಟ್ಟಾಗಿ ಜನತಾ ಪಾರ್ಟಿ ಮಾಡಿಕೊಂಡು ಚುನಾವಣೆ ಎದುರಿಸಿ ಗೆದ್ದರು. ಇದಕ್ಕೆ ಅವರು ಇಂದಿರಾ ಗಾಂಧಿಯವರಿಗೆ ಕೃತಜ್ಞರಾಗಿರಬೇಕು!’

ಆದರೆ ಆ ಅಪೂರ್ವ ಗೆಲುವು ಸಾಧ್ಯವಾದದ್ದು ಜಯಪ್ರಕಾಶ ನಾರಾಯಣರಂಥ ನಿಸ್ವಾರ್ಥಿ ನಾಯಕರು ಈ ಪಕ್ಷಗಳ ನೈತಿಕ ಅಂಕುಶವಾಗಿ ಕೆಲಸ ಮಾಡಿದ್ದರಿಂದ ಎಂಬುದನ್ನು ಮರೆಯಬಾರದು. ವಿಭಿನ್ನ ಧಾರೆಯ ಪಕ್ಷಗಳ ಏಕದನಿಯ ಹೋರಾಟದ ಇಚ್ಛಾಶಕ್ತಿ ಹಾಗೂ ಸ್ವಾತಂತ್ರ್ಯಪ್ರಿಯರಾದ ಜನರ ಇಚ್ಛಾಶಕ್ತಿಯ ಜೊತೆಗೆ ದಿಟ್ಟ, ಪ್ರಾಮಾಣಿಕ ಪತ್ರಿಕೋದ್ಯಮದ ಹೋರಾಟವೂ ಸೇರಿದ್ದರಿಂದ ಕೂಡ ಸರ್ಕಾರ ಬದಲಾಯಿತು.

ಈಗಲೂ ವಿರೋಧ ಪಕ್ಷದ ಹಲವರನ್ನು ಜೈಲಿಗೆ ಕಳಿಸಲಾಗುತ್ತಿದೆ. ಬಿಜೆಪಿ ಸೇರಿದ ಮೇಲೆ ವಿಚಾರಣೆ, ಜೈಲು, ಇ.ಡಿ. ದಾಳಿಗಳಿಂದ ವಿನಾಯಿತಿ ಪಡೆದವರ ಪಟ್ಟಿಯನ್ನೂ ಈಚೆಗೆ ಪ್ರಕಟಿಸಲಾಗಿದೆ. ಪಟ್ಟಿಯಲ್ಲಿ ಮಹಾರಾಷ್ಟ್ರದ ಅಜಿತ್ ಪವಾರ್, ಅಶೋಕ್ ಚವಾಣ್, ಛಗನ್ ಭುಜಬಲ್, ಪಶ್ಚಿಮ ಬಂಗಾಳದ ಸುವೇಂದು ಅಧಿಕಾರಿ ಥರದವರಿಂದ ಹಿಡಿದು ಹತ್ತಾರು ಹೆಸರುಗಳಿವೆ. ದೆಹಲಿಯ ಉಪಮುಖ್ಯಮಂತ್ರಿಯಾಗಿದ್ದ ಮನೀಷ್ ಸಿಸೋಡಿಯಾ, ಜಾರ್ಖಂಡ್ ಮುಖ್ಯಮಂತ್ರಿಯಾಗಿದ್ದ ಹೇಮಂತ್ ಸೊರೇನ್ ಜೈಲಿನಲ್ಲಿದ್ದಾರೆ. ಕೇಜ್ರಿವಾಲ್ ಇ.ಡಿ. ಸಮನ್ಸ್ ತಪ್ಪಿಸಿಕೊಳ್ಳುತ್ತಲೇ ಇದ್ದಾರೆ.

ವಿರೋಧಿ ನಾಯಕರ ಅಸ್ತಿತ್ವದ ಆತಂಕ ಹಾಗೂ ಲೋಕಸಭಾ ಚುನಾವಣೆಯಲ್ಲಿ ಸೋಲುವ ಭಯದಿಂದ ‘ಇಂಡಿಯಾ’ ಒಕ್ಕೂಟ ಸೇರಿದ್ದ ಹದಿನೈದು ಪಕ್ಷಗಳಲ್ಲಿ ರಾಷ್ಟ್ರೀಯ ಲೋಕದಳ ಹಾಗೂ ಸಂಯುಕ್ತ ಜನತಾದಳವು ಒಕ್ಕೂಟಕ್ಕೆ ಕೈ ಕೊಟ್ಟಿವೆ. ಕೆಲವು ಪಕ್ಷಗಳು ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆ ವಿಚಾರದಲ್ಲಿ ತರಲೆ ಮಾಡಿಕೊಂಡರೂ ಒಕ್ಕೂಟದಲ್ಲಿ ಮುಂದುವರಿಯುತ್ತಿವೆ. ಚಂಡೀಗಢ ಕಾರ್ಪೊರೇಷನ್ ಚುನಾವಣೆಯಲ್ಲಿ ಸುಪ್ರೀಂ ಕೋರ್ಟಿನ ಮಧ್ಯಪ್ರವೇಶದಿಂದ ಕಾಂಗ್ರೆಸ್–ಎಎಪಿ ಒಕ್ಕೂಟಕ್ಕೆ ಮೇಯರ್ ಸ್ಥಾನ ಸಿಕ್ಕ ತಕ್ಷಣ ದೆಹಲಿಯಲ್ಲಿ ಎಎಪಿ 4, ಕಾಂಗ್ರೆಸ್ 3 ಲೋಕಸಭಾ ಕ್ಷೇತ್ರಗಳನ್ನು ಹಂಚಿಕೊಂಡಿವೆ. ಹರಿಯಾಣ, ಗುಜರಾತ್, ಗೋವಾದಲ್ಲಿ ಕಾಂಗ್ರೆಸ್-ಎಎಪಿ ಮಿಂಚಿನ ವೇಗದಲ್ಲಿ ಹೊಂದಾಣಿಕೆ ಮಾಡಿಕೊಂಡಿವೆ.

ಸೀಟು ಹಂಚಿಕೆಯಲ್ಲಿ ತೋರಿರುವ ತರಾತುರಿಯನ್ನು ಪರಸ್ಪರ ಮತಗಳ ವರ್ಗಾವಣೆಯಲ್ಲೂ ಪ್ರಾಮಾಣಿಕವಾಗಿ ತೋರಿದರೆ ಮಾತ್ರ ಎಎಪಿ- ಕಾಂಗ್ರೆಸ್ ಮೈತ್ರಿ ದೇಶದ ಮತದಾರ ವಲಯದಲ್ಲಿ ಹೊಸ ಸಂದೇಶ ಹೊರಡಿಸಬಲ್ಲದು. ತನ್ನ ಜೊತೆ ಕೈಜೋಡಿಸಿದ ಪಕ್ಷಕ್ಕೆ ತನ್ನ ಪಾಲಿನ ಮತಗಳನ್ನು ವರ್ಗಾವಣೆ ಮಾಡುವ ಕಾರ್ಯತಂತ್ರ, ಬದ್ಧತೆ, ನೈತಿಕತೆಯನ್ನು ಕಾಂಗ್ರೆಸ್ ಮೊದಲು ರೂಢಿಸಿಕೊಳ್ಳಬೇಕಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರ ತಾಳ್ಮೆಯ ಸಂಧಾನದ ರಾಜಕಾರಣದಲ್ಲಿ ಕಾಂಗ್ರೆಸ್ ಈ ಹೊಸ ಪಾಠವನ್ನೂ ಕಲಿಯಲೆಂದು ಆಶಿಸೋಣ. ಅದೇ ರೀತಿ ಸೀಟು ಹೊಂದಾಣಿಕೆಯಾಗದ ರಾಜ್ಯಗಳಲ್ಲೂ ಎಎಪಿಯ ನಾಯಕ, ಕಾರ್ಯಕರ್ತರನ್ನು ಹಾಗೂ ಕಮ್ಯುನಿಸ್ಟ್ ಪಕ್ಷಗಳನ್ನು ಚುನಾವಣಾ ಸಿದ್ಧತೆ, ಪ್ರಚಾರದಲ್ಲಿ ಒಳಗೊಳ್ಳುವುದು ಅತ್ಯಗತ್ಯ. ಈ ಬಗೆಯ ಸಾಮೂಹಿಕ ದನಿ ದೇಶದಾದ್ಯಂತ ಮತದಾರ ವಲಯದಲ್ಲಿ ಪರ್ಯಾಯದ ಆಸೆ ಹುಟ್ಟಿಸಬಲ್ಲದು.

ಒಂದು ಮಟ್ಟದಲ್ಲಾದರೂ ಅಖಿಲ ಭಾರತ ಹಾಜರಿಯಿರುವ ಬಹುಜನ ಸಮಾಜ ಪಕ್ಷದ ಶಕ್ತಿ ಕುಂದಿದ್ದರೂ ಅದು ಏಕಾಂಗಿಯಾಗೇ ಚುನಾವಣೆಗೆ ಹೊರಟಿದೆ. ಕಾಂಗ್ರೆಸ್-ಎಎಪಿ ಗುಜರಾತಿನಲ್ಲಿ 26:2, ಹರಿಯಾಣದಲ್ಲಿ 9:1 ಪ್ರಮಾಣದಲ್ಲಿ ಸೀಟು ಹಂಚಿಕೊಂಡಿವೆ; ಆದರೆ ಪಂಜಾಬಿನಲ್ಲಿ ಏಕಾಂಗಿಯಾಗಿ ಹೊರಟಿವೆ. ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಶೇ 42ರಷ್ಟು ಮತ ಗಳಿಸಿದ್ದರೆ, ಕಾಂಗ್ರೆಸ್ ಶೇ 23ರಷ್ಟು ಮತಗಳನ್ನು ಗಳಿಸಿತ್ತು. ಕಿಸಾನ್ ಆಂದೋಲನದ ಪ್ರಭಾವವಿರುವ ಪಂಜಾಬಿನಲ್ಲಿ ಎಎಪಿ-ಕಾಂಗ್ರೆಸ್ ಕೊನೇಪಕ್ಷ 10:2ರ ಪ್ರಮಾಣದಲ್ಲಾದರೂ ಸೀಟು ಹೊಂದಾಣಿಕೆ ಮಾಡಿಕೊಂಡು ಒಟ್ಟಾಗಿ ಸ್ಪರ್ಧಿಸಿದರೆ ರೈತರ ವೋಟುಗಳು ಇತ್ತ ಒಗ್ಗೂಡಬಲ್ಲವು; ಆ ಮೂಲಕ ಈ ಸಂಬಂಧದ ಗಟ್ಟಿತನದ ಸ್ಪಷ್ಟ ಸಂದೇಶ ದೇಶದುದ್ದಕ್ಕೂ ತಲುಪಬಲ್ಲದು. ರಾಜಕೀಯ ಪಂಡಿತರ ಏಕಮುಖ ವಿಶ್ಲೇಷಣೆ ಏನೇ ಇರಲಿ, ರಾಹುಲ್ ಗಾಂಧಿ ಹಾಗೂ ಕೇಜ್ರಿವಾಲ್ ಈ ಶತಮಾನದ ಹೊಸ ನಾಯಕರಾಗಿ ಬೆಳೆಯುತ್ತಿರುವುದನ್ನು ಕಡೆಗಣಿಸಲಾಗದು.

ಉತ್ತರಪ್ರದೇಶದಲ್ಲಿ ರಾಷ್ಟ್ರೀಯ ಲೋಕದಳ ಕೈ ಕೊಟ್ಟ ತಕ್ಷಣ ಸಮಾಜವಾದಿ ಪಕ್ಷವು ಕಾಂಗ್ರೆಸ್ಸಿಗೆ 17 ಸೀಟುಗಳನ್ನು ಬಿಟ್ಟುಕೊಟ್ಟಿದೆ. ಬಿಎಸ್‌ಪಿಯ ಏಕಾಂಗಿ ಸ್ಪರ್ಧೆ ಪಕ್ಷದ ನಿಷ್ಠಾವಂತ ಮತದಾರರಲ್ಲಿ ಕೂಡ ಈಗ ಉತ್ಸಾಹ ಹುಟ್ಟಿಸಲಾರದು. ಬಿಎಸ್‌ಪಿ ನಾಯಕರ ವಲಸೆ ಶುರುವಾಗಿದೆ. ಮಾಯಾವತಿ ಅವರ ನಂತರ ಉತ್ತರ ಪ್ರದೇಶದಲ್ಲಿ ಹೊಸ ದಲಿತ ನಾಯಕನಾಗಿ ಬೆಳೆಯುತ್ತಿರುವ ಚಂದ್ರಶೇಖರ ಆಜಾದ್ ರಾವಣ್ ಅವರನ್ನು ಸ್ವಾಗತಿಸಲು ಎಸ್‌ಪಿ- ಕಾಂಗ್ರೆಸ್ ಉತ್ಸುಕವಾಗಿವೆ. ರಾಷ್ಟ್ರೀಯ ಲೋಕದಳದ ಕಾರ್ಯಕರ್ತರು ಈಚೆಗೆ ನ್ಯಾಯಯಾತ್ರೆಯಲ್ಲಿ ರಾಹುಲ್, ಅಖಿಲೇಶ್ ಜೊತೆ ಹೆಜ್ಜೆ ಹಾಕಿದ್ದಾರೆ. ಇಂಥ ಬಿಡಿಬಿಡಿ ಬೆಳವಣಿಗೆಗಳು ಹನಿಹನಿಗೂಡಿದಂತೆಲ್ಲ ಚುನಾವಣೆಯ ಅಲೆಯೇ ಬದಲಾಗತೊಡಗುತ್ತದೆ.

ಬಿಹಾರದಲ್ಲಿ ಕಾಂಗ್ರೆಸ್- ಆರ್‌ಜೆಡಿ- ಕಮ್ಯುನಿಸ್ಟ್ ಪಕ್ಷಗಳ ಮೈತ್ರಿಯು ಗೊಂದಲವಿಲ್ಲದೆ ಸೀಟು ಹಂಚಿಕೆ ಮಾಡಿಕೊಳ್ಳಬಲ್ಲದು. ತಮಿಳುನಾಡಿನಲ್ಲೂ ಹೆಚ್ಚು ಗೊಂದಲವಿಲ್ಲ. ಮಹಾರಾಷ್ಟ್ರದಲ್ಲಿ ಪ್ರಕಾಶ್ ಅಂಬೇಡ್ಕರ್ ಬಲವೂ ಸೇರಿದರೆ ‘ಇಂಡಿಯಾ’ ಒಕ್ಕೂಟ ಎನ್‌ಡಿಎಗೆ ಸಮಬಲದ ಪೈಪೋಟಿ ನೀಡಬಲ್ಲದು. ಮಮತಾ ಬ್ಯಾನರ್ಜಿ ಅತಿ ಮಾಡಿದರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿಗೆ ಆದ ಹಿನ್ನಡೆಯು ಪುನರಾವರ್ತನೆಯಾದರೂ ಅಚ್ಚರಿಯಿಲ್ಲ. ಮಮತಾ ಥರವೇ ಆಡುತ್ತಿದ್ದ ಕೆ. ಚಂದ್ರಶೇಖರ ರಾವ್ ಅವರಿಗೆ ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಆದ ಗತಿಯನ್ನು ವಿರೋಧ ಪಕ್ಷಗಳು ಎಚ್ಚರದಿಂದ ಗಮನಿಸಿ ಪಾಠ ಕಲಿಯಬೇಕು.

ಬಿಜೆಪಿ ಬಗೆಗಿನ ಹೆದರಿಕೆಯೊಂದೇ ವಿರೋಧ ಪಕ್ಷಗಳನ್ನು ಗುರಿ ಮುಟ್ಟಿಸಲಾರದು. ಲೋಹಿಯಾ ಅವರು ವಿರೋಧ ಪಕ್ಷಗಳಿಗೆ ಮತ್ತೆ ಮತ್ತೆ ಹೇಳುತ್ತಿದ್ದ ‘ಅಧಿಕಾರ ಹಿಡಿಯುವ ಇಚ್ಛಾಶಕ್ತಿ’ (ವಿಲ್ ಟು ಪವರ್) ಮುಖ್ಯ ಚಾಲಕಶಕ್ತಿ ಎಂಬುದನ್ನು ಮರೆಯಬಾರದು. ತಾವು ಯಾಕೆ ಅಧಿಕಾರ ಹಿಡಿಯಲೇಬೇಕು ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವ ಗಟ್ಟಿ ಚಿಂತನೆ ಒಕ್ಕೂಟದಿಂದ ಮೂಡಿಬರಬೇಕು. ಈ ಪಕ್ಷಗಳನ್ನು ತಾತ್ವಿಕವಾಗಿ ಒಗ್ಗೂಡಿಸಿ ಏಕದನಿ ಹೊರಡಿಸಲು ನಾಯಕರು ಮಾನಸಿಕವಾಗಿ ತಯಾರಾಗಬೇಕು. ತಂತಮ್ಮ ಭಾಷಾ ಪ್ರದೇಶಗಳಲ್ಲಿ ದೇಶದ ಎಲ್ಲ ವಲಯಗಳ ಭವಿಷ್ಯದ ಬಗ್ಗೆ ಖಚಿತ ಮುನ್ನೋಟ ಮಂಡಿಸಬಲ್ಲ ಪ್ರಾದೇಶಿಕ ನಾಯಕರ ಅಗತ್ಯವೂ ಈ ಒಕ್ಕೂಟಕ್ಕಿದೆ. ಅಖಿಲೇಶ್ ಯಾದವ್, ತೇಜಸ್ವಿ ಯಾದವ್, ಮಮತಾ ಬ್ಯಾನರ್ಜಿ, ಸ್ಟಾಲಿನ್ ಥರದವರು ತಂತಮ್ಮ ರಾಜ್ಯದಾಚೆಗೆ ಜನಪ್ರಿಯತೆ ಉಳ್ಳವರಲ್ಲ. ಆದರೂ ಕರ್ನಾಟಕದಂಥ ಕಡೆ ತಮಿಳು ಭಾಷಿಕರ ವಲಯದಲ್ಲಿ ಸ್ಟಾಲಿನ್ ಪ್ರಭಾವ ಬೀರಬಲ್ಲರು.

ಅಖಿಲ ಭಾರತ ವ್ಯಾಪ್ತಿಯುಳ್ಳ ನಾಯಕರನ್ನು ಸದಾ ತಯಾರು ಮಾಡುವ ಯೋಜನೆ, ಸಿದ್ಧತೆಗಳು ನಮ್ಮ ಬಹುತೇಕ ರಾಜಕೀಯ ಪಕ್ಷಗಳ ಸಂಕುಚಿತ ಮನಸ್ಸಿನ ಮುಂದಾಳುಗಳಲ್ಲಿಲ್ಲ. ನಾಯಕತ್ವದ ಸಾಮರ್ಥ್ಯ ಇರುವವರು ತಮ್ಮ ಪಕ್ಷದಲ್ಲೇ ಇದ್ದರೂ ತಂತಮ್ಮ ಉಳಿವಿಗಾಗಿ ಅವರನ್ನು ಮಟ್ಟ ಹಾಕುವ ಕಾಯಿಲೆಯಿಂದ ವಿರೋಧ ಪಕ್ಷಗಳಾದರೂ ಪಾರಾಗಬೇಕಾಗಿದೆ.

ಕೊನೆಯದಾಗಿ, ಅಧಿಕಾರದ ಇಚ್ಛಾಶಕ್ತಿ ರಾಜಕೀಯ ಪಕ್ಷಗಳಲ್ಲಷ್ಟೇ ಹೊಮ್ಮಿದರೆ ಸಾಲದು. ಆ ಇಚ್ಛಾಶಕ್ತಿ ಜನರಲ್ಲೂ ಉಕ್ಕಬೇಕು. ತಮಗೆ ಬೇಕಾದ ಪಕ್ಷಗಳನ್ನು ಅಧಿಕಾರಕ್ಕೆ ತರುವುದರಿಂದ ತಮಗೆ ಅಧಿಕಾರ ದಕ್ಕುತ್ತದೆ ಎಂಬ ಇಚ್ಛಾಶಕ್ತಿ ಜನರಲ್ಲಿ ಪ್ರಬಲವಾಗಿ ಮೂಡಿದಾಗ ಮಾತ್ರ ಚುನಾವಣೆಗಳಲ್ಲಿ ಊಹಾತೀತ ಫಲಿತಾಂಶ ಬರಬಲ್ಲದು. ಈಚಿನ ಸಮೀಕ್ಷೆಗಳಲ್ಲಿ ದೇಶದ ಆರ್ಥಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಶೇ 50ಕ್ಕಿಂತ ಹೆಚ್ಚು ಜನ ಕೇಂದ್ರ ಸರ್ಕಾರದ ಬಗ್ಗೆ ಅಸಮಾಧಾನ ಸೂಚಿಸಿರುವುದನ್ನು ಚುನಾವಣಾ ತಜ್ಞ ಯೋಗೇಂದ್ರ ಯಾದವ್ ಗುರುತಿಸಿದ್ದಾರೆ. ಈ ಪ್ರಶ್ನೆಗಳ ಬಗ್ಗೆ ವಿರೋಧಿ ಒಕ್ಕೂಟ ತೀವ್ರಗಮನ ಕೊಡುವ ಅಗತ್ಯವಿದೆ. ವಿರೋಧಿ ಒಕ್ಕೂಟ ಈ ಆರ್ಥಿಕ ಸವಾಲುಗಳನ್ನು ಜನರಿಗೆ ಸರಳವಾಗಿ ಮನವರಿಕೆ ಮಾಡಿಕೊಟ್ಟಾಗ ಮಾತ್ರ ಜನರ ಇಚ್ಛಾಶಕ್ತಿಯೂ ವಿರೋಧ ಪಕ್ಷಗಳ ಇಚ್ಛಾಶಕ್ತಿಯೂ ಬೆರೆತು ಚುನಾವಣೆಯ ದಿಕ್ಕು ಬದಲಾಗಬಲ್ಲದು.

ಚುರುಮುರಿ

ರಾಜಕೀಯ ಡಂಕಿಗಳು

• ಲಿಂಗರಾಜು ಡಿ.ಎಸ್.

‘ಮನ್ನೆ ಒಬ್ಬರು ಟಿಕೆಟ್‌ಗೋಸ್ಕರ ಎರಡು ಪಕ್ಷ ಬದ್ಲಾಸಿ ಮೂಲ ಪಕ್ಷಕ್ಕೆ ವಾಪಾಸ್ ಬಂದ ಮ್ಯಾಲೆ, ಪಕ್ಷ ಬುಟ್ಟೋಗಿದ್ದಕ್ಕೆ ಪಶ್ಚಾತ್ತಾಪ ಪಡ್ತಾವರಂತೆ!’ ಅಂತಂದ ಚಂದ್ರು.

‘ಇನ್ನು ಎಲೆಕ್ಷನ್ ಬಂತಲ್ಲ, ಆರು ಕೊಟ್ರೆ ಅತ್ತೆ ಕಡೆ, ಮೂರು ಕೊಟ್ರೆ ಸೊಸೆ ಕಡೆಗೆ ಬೇಲಿ ಹಾರೋ ಮಲ್ಲಾಗರು ಸುರುವಾಯ್ತದೆ. ಈವತ್ತಿನ ಎಲೆಕ್ಷನ್ನಲ್ಲಿ ವಡ್ಡ ಮತದಾನದ ಭಯ ಅದಂತೆ. ಪಕ್ಷಾಂತರಕ್ಕೆ ಬೇರೆ ಏನನ್ನಾ ಹೆಸರು ಕೊಡಿ ಸಾ’ ಅಂತ ಕೊರೆದೆ.

‘ಮಧ್ಯಮ ವರ್ಗದ ಪಾಪದ ಜನ ಬದುಕು ಹುಡುಕಿಕೊಂಡು ಪಾಸ್‌ಪೋರ್ಟು, ವೀಸಾ ಇಲ್ಲದೇ ಕಳ್ಳತನದಲ್ಲಿ ದೇಸದ ಗಡಿಗಳನ್ನ ದಾಟಿ ದೇಸಾಂತರ ಹೋಯ್ತರೆ. ಇವರನ್ನ ಹಿಂದಿಯಲ್ಲಿ, ಪಂಜಾಬಿ ಭಾಷೆಯಲ್ಲಿ ಡಂಕಿ ಅಂತರೆ’ ತುರೇಮಣೆ ವಿಷಯದ ಗಂಟು ಬಿಚ್ಚಿದರು.

‘ಕೆಲಸ ಹುಡುಕೋರು ಡಂಕಿ ಆದ್ರೆ ರಾಜಕೀಯದವುಕ್ಕೆ ಏನನ್ನಬೇಕು?’ ಅಂತು ಯಂಟಪ್ಪಣ್ಣ.

‘ಅಧಿಕಾರಕ್ಕೋಸ್ಕರ, ಸಂಪಾದನೆಗೋಸ್ಕರ ನೀತಿ ಬುಟ್ಟು ಪಕ್ಷಾಂತರ ಮಾಡೋರನ್ನ ರಾಜಕೀಯ ಡಂಕಿಗಳು ಅನ್ನಬೈದು. ‘ಅಲ್ಲಿ ಉಸಿರು ಕಟ್ಟೋ ವಾತಾವರಣ ಇತ್ತು’ ಅಂತ ಪುಂಗ್ತವೆ’ ತುರೇಮಣೆ ವಿವರಿಸಿದರು.

‘ಕರೆಕ್ಟಾಗಿ ಹೇಳಿದ್ರಿ ಸಾ. ಪಕ್ಷದಿಂದ ಪಕ್ಷಕ್ಕೆ ಕಾಲಾಡ್ಸ್ಯಂದು ಆಸ್ತಿ ಪ್ರಮಾಣವನ್ನ ಬಡಕಾಯಿ ಸಿಕ್ಕಂದಿರತವೆ!’ ಅಂದ ಚಂದ್ರು.

‘ರಾಜಕೀಯ ಡಂಕಿಗಳು ಐದೈದು ವರ್ಸಕ್ಕೆ ಆಸ್ತಿ ಡಬಲ್ ಮಾಡಿಕ್ಯಳೋ ಸೀಕ್ರೇಟು ಏನು ಅನ್ನೋದನ್ನ ಜನಕ್ಕೆ ಹೇಳಿಕೊಟ್ರೆ ಬಡವರು ಬದುಕಿಕ್ಯತರಪ್ಪ’ ಅಂತು ಯಂಟಪ್ಪಣ್ಣ.

‘ಅದು ಪದವಿಯಿಂದ ಪದವಿಗೆ ಏರಿಕೊಂಡು ಹೋಗೋ ಗ್ರೇಡ್ ಸೀಕ್ರೆಟ್ ಯಂಟಪ್ಪಣ್ಣ. ಹೈಕಮಾಂಡ್ ಮುಂದೆ ಮನೋಜಯ ಆದ ಮ್ಯಾಲೆ ಹೆಸರುಬಲ ನೋಡಬಕು. ಲೇಣೆದೇಣೆ ಯವಾರ ಚುಕ್ತ ಆಗಬಕು. ಡಂಕಿಗಳನ್ನ ಕರಕಬಂದ ಏಜೆಂಟರ ರಾಜಪಾಲು, ಬಲೆಪಾಲು, ಕಮಿಷನ್ನು ಅಂತ ಬಾರಾನಮೂನೆ ಲೆಕ್ಕ ಇರತವೆ. ಇವೆಲ್ಲ ಮುಗಿದ ಮ್ಯಾಲೆ ಟಿಕೆಟ್ ಪಿಕ್ಸಾದರೆ ಮತರಾಹುಗಳಿಂದ ಬೂತುಚೇಷ್ಟೆ ಸುರುವಾಯ್ತದೆ’ ಅಂತ ವಿಷಯ ಬಿಡಿಸಿಟ್ಟರು.

ದಿನದ ಟ್ವೀಟ್

ಎಲ್ಲೆಡೆಯ ಸಮಸ್ಯೆ!

ಹೈದರಾಬಾದ್‌ನಲ್ಲಿ ಕಳವಳಕ್ಕೆ ಕಾರಣವಾಗುವ ಬೆಳವಣಿಗೆಯೊಂದನ್ನು ಕಂಡೆ. ಎಲ್ಲೆಲ್ಲೂ ಉಪಾಹಾರ ಗೃಹಗಳು– ರಸ್ತೆಬದಿಯ ಸ್ಟಾಲ್‌ಗಳಿಂದ ಹಿಡಿದು ಭರ್ಜರಿ ರೆಸ್ಟೊರೆಂಟ್‌ಗಳವರೆಗೆ. ಜನ ಕ್ರಮೇಣ ಅಡುಗೆ ಮಾಡುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ! ಚಯಾಪಚಯ ಸಂಬಂಧಿ ಕಾಯಿಲೆಗಳು ಹೆಚ್ಚಾಗಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಅಡುಗೆ ಮತ್ತು ಪೌಷ್ಟಿಕಾಂಶ ತರಗತಿಗಳನ್ನು ಶಾಲೆಯಲ್ಲಿ ಕಡ್ಡಾಯಗೊಳಿಸಬೇಕಾಗಿದೆ.

ಡಾ. ಸುನಿತಾ, ವೈದ್ಯೆ

ಕಿಡಿನುಡಿ

ನದಿಗಳಲ್ಲಿ, ಅದರಲ್ಲೂ ದೇವಸ್ಥಾನಗಳಿರುವ ಪ್ರದೇಶಗಳಲ್ಲಿ ಸ್ನಾನ ಮಾಡುವುದನ್ನು ಸರ್ಕಾರ ನಿಷೇಧಿಸಲೇಬೇಕು. ನದಿಗಳ ಮಾಲಿನ್ಯ ತಡೆಗಟ್ಟುವ ಸಲುವಾಗಿ ಇಂತಹದ್ದೊಂದು ಕ್ರಮ ಅತ್ಯಗತ್ಯವಾಗಿ ಬೇಕಾಗಿದೆ.

ನಾರಾಯಣ ಎಚ್.ಪಿ.

25 ವರ್ಷಗಳ ಹಿಂದೆ

ಶನಿವಾರ, 27-2-1999

• **ಎಸ್‌ಎಸ್‌ಎಲ್‌ಸಿವರೆಗೆ ಕನ್ನಡದಲ್ಲೇ ಶಿಕ್ಷಣ– ಭೈರಪ್ಪ ಆಗ್ರಹ**

ಡಿ.ಎಲ್.ನರಸಿಂಹಾಚಾರ್ ನಗರ (ಕನಕಪುರ), ಫೆ. 26– ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು; ಆಡಳಿತ ಭಾಷೆಯಾಗಬೇಕು; ಇದಕ್ಕೆ ಸಂವಿಧಾನದ ಯಾವುದೇ ಅನುಚ್ಛೇದ ಅಡ್ಡಿಯಾಗುವಂತಿದ್ದರೆ ಅದನ್ನು ನಿವಾರಿಸಲು ಸೂಕ್ತ ತಿದ್ದುಪಡಿ ತರಬೇಕು; ಗಡಿ ಸೀಮೆಯ ರಕ್ಷಣೆ, ಕನ್ನಡಿಗರಿಗೆ ಉದ್ಯೋಗಾವಕಾಶ ಸೇರಿದಂತೆ ನಾಡು–ನುಡಿ ರಕ್ಷಣೆಗೆ ಸರ್ಕಾರ ರಾಜಕೀಯ ಸಂಕಲ್ಪ ಮಾಡಬೇಕು ಎಂದು ಅಖಿಲ ಭಾರತ ಅರವತ್ತೆಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಹಾಗೂ ಹೆಸರಾಂತ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಕರೆ ನೀಡಿದರು.

ಇಂದು ಇಲ್ಲಿನ ಡಾ. ಅನುಪಮಾ ನಿರಂಜನ ವೇದಿಕೆಯಲ್ಲಿ ಆರಂಭವಾದ ಅರವತ್ತೆಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಅವರು, ‘ಕನ್ನಡ ನಾಡು–ನುಡಿಯ ಏಳ್ಗೆಗಾಗಿ ಒಳನೋಟ, ವಿಶ್ಲೇಷಣೆ, ಚಿಂತನೆಗಳಿಗೆ ಕರ್ನಾಟಕದಲ್ಲಿ ಯಾವತ್ತೂ ಕೊರತೆ ಇಲ್ಲ; ಕೊರತೆಯಿರುವುದು ಅವುಗಳನ್ನು ಕಾರ್ಯಗತಗೊಳಿಸಲು ಬೇಕಾದ ರಾಜಕೀಯ ಸಂಕಲ್ಪ ಶಕ್ತಿಯಲ್ಲಿ; ನಾಡು–ನುಡಿಗಳ ಹಿತರಕ್ಷಣೆ ಮತ್ತು ಬೆಳವಣಿಗೆಗಳ ಬಗೆಗೆ ನೆರೆ ರಾಜ್ಯಗಳ ಜನರಿಗಿರುವಷ್ಟು ಸ್ಪಷ್ಟ ಪ್ರಜ್ಞೆ ಕನ್ನಡಿಗರಿಗಿಲ್ಲ’ ಎಂದು ವಿಷಾದಿಸಿದರು.

‘ಮುಂದಿನ ಸಾಹಿತ್ಯ ಹೀಗೇ ಇರುತ್ತದೆ ಎಂದು ಯಾರೂ ಖಚಿತವಾಗಿ ಹೇಳಲು ಸಾಧ್ಯವಿಲ್ಲ; ಆದರೆ ಕನ್ನಡ ಸಾಹಿತ್ಯವು ಮುಂದೆಯೂ ಉಳಿಯುತ್ತದೆಯೇ ಬೆಳೆಯುತ್ತದೆಯೇ ಎಂಬ ಬಗೆಗೆ ಪ್ರತಿಯೊಬ್ಬರೂ ಆತಂಕಪಡಬೇಕಾದ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಸಾವಿರದ ಐನೂರು ವರ್ಷಗಳ ಲಿಖಿತ ಇತಿಹಾಸವುಳ್ಳ ಕನ್ನಡ ಸಾಹಿತ್ಯದ ಸೃಜನಶೀಲತೆಯು ಇನ್ನು ಕೆಲವು ದಶಕಗಳಲ್ಲಿ ನಿಂತುಹೋಗುವ ಸಂಭವವಿದೆ. ಈ ಮುಂದಿನ ತಲೆಮಾರು ಇಂಗ್ಲಿಷಿನಲ್ಲಾದರೂ ಸಾಹಿತ್ಯ ಸೃಷ್ಟಿಸುವುದು ಸಾಧ್ಯವಿಲ್ಲ. ಏಕೆಂದರೆ ಅದು ಅವರ ಇಡೀ ಜನಾಂಗದ ಸಂಸ್ಕೃತಿಯನ್ನು ಅಭಿವ್ಯಕ್ತಿಸುವ ಭಾಷೆಯಲ್ಲ. ಎಸ್‌ಎಸ್‌ಎಲ್‌ಸಿ ಮುಗಿಯುವವರೆಗಾದರೂ ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮ ಆಗಬೇಕು. ಭಾಷಾವಾರು ಪ್ರಾಂತ್ಯ ರಚನೆಯ ಮೂಲ ಉದ್ದೇಶಗಳಲ್ಲಿ ಇದೂ ಒಂದು’ ಎಂದು ಅಭಿಪ್ರಾಯಪಟ್ಟರು.

50 ವರ್ಷಗಳ ಹಿಂದೆ

ಬುಧವಾರ, 27-2-1974

• **ಪಶ್ಚಿಮ ಘಟ್ಟಗಳ ಅಭಿವೃದ್ಧಿ ಬಗ್ಗೆ ಸಮಿತಿ ರಚನೆ**

ಬೆಂಗಳೂರು, ಫೆ. 26– ಪಶ್ಚಿಮಘಟ್ಟಗಳ ಅಭಿವೃದ್ಧಿ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿ ಅಧ್ಯಕ್ಷರಾಗಿರುವ ಸಮಿತಿಯೊಂದನ್ನು ಯೋಜನಾ ಆಯೋಗ ರಚಿಸಿದೆಯೆಂದು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

‘ಅದರಲ್ಲಿ ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ಪ್ರತಿನಿಧಿಗಳು ಸದಸ್ಯರಾಗಿದ್ದಾರೆ’ ಎಂದು ಹೇಳಿದರು.

• **ಕರ್ನಾಟಕ ಎಕ್ಸ್‌ಪ್ರೆಸ್ ರೈಲಿಗೆ ನಾಳೆಯಿಂದ ಡೀಸೆಲ್ ಎಂಜಿನ್**

ಹೈದರಾಬಾದ್, ಫೆ. 26– ಬೆಂಗಳೂರು ನಗರದಿಂದ ಮೀರಜ್‌ಗೆ ಹೋಗುವ ಕರ್ನಾಟಕ ಎಕ್ಸ್‌ಪ್ರೆಸ್ ರೈಲಿಗೆ ಈ ತಿಂಗಳ 28ರಿಂದ ಡೀಸೆಲ್ ಎಂಜಿನ್ ಅಳವಡಿಸಲಾಗುವುದು. ದಕ್ಷಿಣ– ಮಧ್ಯ ರೈಲ್ವೆ ವಿಭಾಗದಲ್ಲಿ ಮೀಟರ್ ಗೇಜ್‌ನಲ್ಲಿ ಎಕ್ಸ್‌ಪ್ರೆಸ್ ರೈಲೊಂದಕ್ಕೆ ಡೀಸೆಲ್ ಎಂಜಿನ್ ಅಳವಡಿಸುತ್ತಿರುವುದು ಇದೇ ಪ್ರಪ್ರಥಮ ಎಂದು ರೈಲ್ವೆ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಸಂಗತ

ಶಿಕ್ಷೆ, ಶಿಸ್ತುಕ್ರಮ ಮತ್ತು ಶಿಕ್ಷಣ

ಮಕ್ಕಳೊಂದಿಗೆ ಪ್ರೀತಿ, ಕಾಳಜಿ ಹಾಗೂ ಸಮಾಧಾನದಿಂದ ವ್ಯವಹರಿಸುತ್ತಾ ನಮ್ಮನ್ನು ನಾವು ಪ್ರಯೋಗಕ್ಕೆ ಒಡ್ಡಿಕೊಳ್ಳಬೇಕಾಗಿದೆ

• ಎಚ್.ಬಿ.ಚಂದ್ರಶೇಖರ್

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಸರ್ಕಾರಿ ಶಾಲೆಯೊಂದರ ಶಿಕ್ಷಕಿ ಮಕ್ಕಳಿಗೆ ಶಿಕ್ಷೆ ನೀಡಿದ ಸುದ್ದಿ (ಪ್ರ.ವಾ., ಫೆ. 20) ವರದಿಯಾಗಿದೆ. ಮಕ್ಕಳಿಗೆ ಶಾಲೆಯಲ್ಲಿ ಶಿಕ್ಷೆ ನೀಡುವ ಸುದ್ದಿಗಳು ಆಗಾಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇರುತ್ತವೆ. ದೈಹಿಕ ಶಿಕ್ಷೆ ನೀಡುವುದರಿಂದ ಮಕ್ಕಳಿಗೆ ಶಿಸ್ತು ಕಲಿಸಬಹುದು ಮತ್ತು ಒಳ್ಳೆಯ ಶಿಕ್ಷಣ ನೀಡಬಹುದು ಎಂದು ನಂಬುವ ಪೋಷಕರು ಹಾಗೂ ಶಿಕ್ಷಕರು ಜಗತ್ತಿನಾದ್ಯಂತ ಇದ್ದಾರೆ.

ಅಮೆರಿಕದ ಕೆಲವು ರಾಜ್ಯಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ ಹಾಗೂ ಮತ್ತೆ ಕೆಲವು ರಾಜ್ಯಗಳಲ್ಲಿನ ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುವುದು ಕಾನೂನುಸಮ್ಮತವಾಗಿದೆ. ದೇಶದ ಮೂರನೇ ಒಂದು ಭಾಗದಷ್ಟು ಪೋಷಕರು ತಮ್ಮ ಒಂದು ವರ್ಷದ ಒಳಗಿನ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುತ್ತಾರೆ ಎನ್ನಲಾಗಿದೆ. ಅಲ್ಲಿನ ಮಹಿಳೆಯೊಬ್ಬಳು ತನ್ನ ಮಕ್ಕಳಿಗೆ ಉಗ್ರವಾದ ದೈಹಿಕ ಶಿಕ್ಷೆ ನೀಡಿ, ಅದಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ತನ್ನ ಯುಟ್ಯೂಬ್ ಚಾನೆಲ್‌ನಲ್ಲಿ ಅಳವಡಿಸಿ, ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುವುದನ್ನು ಸಮರ್ಥಿಸುವ ಸಂದೇಶಗಳನ್ನು ಅದರಲ್ಲಿ ಹಾಕುತ್ತಿದ್ದಳು. ಇತ್ತೀಚೆಗೆ ಅವಳನ್ನು ಬಂಧಿಸಿ 60 ವರ್ಷಗಳ ಬಂಧನದ ಶಿಕ್ಷೆ ನೀಡಲಾಗಿದೆ. ಮಕ್ಕಳಿಗೆ ಕಿರುಕುಳ, ತೊಂದರೆ ಆಗುತ್ತಿರುವ ಬಗ್ಗೆ ದೂರು ಬಂದರೆ ತಕ್ಷಣ ಶಿಸ್ತುಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಅಮೆರಿಕದಲ್ಲಿದೆ.

ಮಕ್ಕಳು ದೊಡ್ಡವರಂತೆ ಹಕ್ಕುಗಳನ್ನು ಹೊಂದಲು ವಿಶ್ವಸಂಸ್ಥೆಯು ಮಕ್ಕಳ ಹಕ್ಕುಗಳ ಜಾಗತಿಕ ಒಡಂಬಡಿಕೆಯನ್ನು 1989ರಲ್ಲಿ ರೂಪಿಸಲಾಯಿತು. ಭಾರತವು 1992ರಲ್ಲಿ ಈ ಒಡಂಬಡಿಕೆಗೆ ಸಹಿ ಹಾಕಿದೆ. ವಿಶ್ವದ ಅಧಿಕ ರಾಷ್ಟ್ರಗಳು (194 ರಾಷ್ಟ್ರಗಳು) ಸಹಿ ಹಾಕಿದ ಒಡಂಬಡಿಕೆ ಎಂದರೆ ಅದು ಮಕ್ಕಳ ಹಕ್ಕುಗಳ ಜಾಗತಿಕ ಒಡಂಬಡಿಕೆಯಾಗಿದೆ. ಇದರ ಪ್ರಕಾರ, ಮಕ್ಕಳಿಗೆ 54 ಹಕ್ಕುಗಳನ್ನು ನೀಡಲಾಗಿದ್ದು, ಇವು ವಿಶೇಷ ಮಾನವ ಹಕ್ಕುಗಳಾಗಿವೆ. ಮಕ್ಕಳನ್ನು ಗೌರವದಿಂದ ನಡೆಸಿಕೊಳ್ಳುವುದು ಸೇರಿದಂತೆ ಅವರಿಗೆ ರಕ್ಷಣೆ, ಆರೈಕೆ ಒದಗಿಸುವುದು, ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡುವ ಅವಕಾಶಗಳನ್ನು ಕೊಡಲಾಗಿದೆ. ಈ ಮೂಲಕ, ಜಗತ್ತಿನ ಹೆಚ್ಚಿನ ರಾಷ್ಟ್ರಗಳು ಮಕ್ಕಳನ್ನು ಗೌರವದಿಂದ ನಡೆಸಿಕೊಳ್ಳುವ ಹಾಗೂ ಅವರಿಗೆ ದೈಹಿಕ ಶಿಕ್ಷೆಯನ್ನು ನೀಡದೇ ಇರುವ ತೀರ್ಮಾನಕ್ಕೆ ಬಂದಿವೆ.

ಸ್ವೀಡನ್ ದೇಶವು ಮಕ್ಕಳಿಗೆ ದೈಹಿಕ ಶಿಕ್ಷೆಯನ್ನು ನಿಷೇಧಿಸಿದ ಮೊದಲ ರಾಷ್ಟ್ರವಾಗಿದೆ. ಕುಟುಂಬವೂ ಸೇರಿದಂತೆ ಎಲ್ಲೆಡೆ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುವುದನ್ನು ಈವರೆಗೆ 65 ರಾಷ್ಟ್ರಗಳು ನಿಷೇಧಿಸಿವೆ. 128 ರಾಷ್ಟ್ರಗಳಲ್ಲಿ ಮಕ್ಕಳಿಗೆ ಶಾಲೆಗಳಲ್ಲಿ ದೈಹಿಕ ಶಿಕ್ಷೆ ನೀಡುವುದನ್ನು ನಿಷೇಧಿಸಲಾಗಿದೆ.

ನಮ್ಮ ದೇಶದಲ್ಲಿನ ಶಾಲೆಗಳಲ್ಲಿ ದೈಹಿಕ ಶಿಕ್ಷೆಯನ್ನು ನಿಷೇಧಿಸಬೇಕೆಂದು ಸುಪ್ರೀಂ ಕೋರ್ಟ್ 2000ನೇ ಇಸವಿಯಲ್ಲಿ ತೀರ್ಪು ನೀಡಿತು. ಇದಾದ ನಂತರ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ– 2009ರ ಪ್ರಕಾರ ಶಾಲೆಗಳಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷೆಯನ್ನು ನಿಷೇಧಿಸಲಾಗಿದೆ. ಈ ಕಾಯ್ದೆಯ 17ನೇ ವಿಧಿಯ ಅನ್ವಯ ಶಾಲೆಗಳಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷೆ ಮತ್ತು ಮಾನಸಿಕ ಕಿರುಕುಳ ನೀಡುವುದನ್ನು ನಿಷೇಧಿಸಲಾಗಿದೆ ಮತ್ತು ಇದನ್ನು ಉಲ್ಲಂಘಿಸುವವರಿಗೆ ಸೇವಾ ನಿಯಮಾವಳಿಗಳ ಅನುಸಾರವಾಗಿ ಶಿಕ್ಷೆ ನೀಡಬಹುದಾಗಿದೆ.

ಮಕ್ಕಳ ಹಕ್ಕುಗಳ ರಾಷ್ಟ್ರೀಯ ಆಯೋಗವು ಶಾಲೆಗಳಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷೆಯನ್ನು ನಿಷೇಧಿಸಿ ವಿಸ್ತೃತವಾದ ಮಾರ್ಗಸೂಚಿಯನ್ನು ಹೊರಡಿಸಿದೆ. ಅದರ ಅನುಸಾರ, ರಾಜ್ಯದಲ್ಲಿ ಡಿಎಸ್‌ಇಆರ್‌ಟಿ ನೇತೃತ್ವದಲ್ಲಿ ಒಂದು ತರಬೇತಿ ಮಾದರಿಯನ್ನು ರೂಪಿಸಿ ಶಿಕ್ಷಕರಿಗೆ ತರಬೇತಿ ಪ್ರಾರಂಭಿಸಲಾಗಿದೆ. ಶಿಕ್ಷಕರ ಸಭೆ, ತರಬೇತಿಗಳಲ್ಲಿ ಸಂವಾದ ಮಾಡುವಾಗ ಅನೇಕರು ಮಕ್ಕಳಿಗೆ ದೈಹಿಕ ಶಿಕ್ಷೆ ನೀಡದೇ ಇರುವುದು ಸಮ್ಮತವಲ್ಲ ಎಂದು ಬಲವಾಗಿ ಪ್ರತಿಪಾದಿಸುತ್ತಾರೆ. ಮಕ್ಕಳು ತಿಳಿಯದೆ ಮಾಡುವ ತಪ್ಪಿಗೂ ಕಾನೂನನ್ನು ಉಲ್ಲಂಘಿಸುವ ಅಪರಾಧಗಳಿಗೂ ಇರುವ ವ್ಯತ್ಯಾಸವನ್ನು ಅನೇಕರು ಗುರುತಿಸದೇ ಇರುವಂತೆ ಮಾತನಾಡುತ್ತಾರೆ.

ಮಕ್ಕಳಿಗೆ ದೈಹಿಕ ಶಿಕ್ಷೆ ನೀಡದೇ ಇದ್ದಲ್ಲಿ ಅವರನ್ನು ಸರಿದಾರಿಗೆ ತರುವುದು ಹೇಗೆ, ಅವರು ತೋರುವ ಅಶಿಸ್ತು, ಅವಿಧೇಯತೆಯನ್ನು ಸರಿಪಡಿಸುವುದು ಹೇಗೆ ಎಂಬ ಗೊಂದಲ ಅನೇಕರದ್ದಾಗಿರುತ್ತದೆ. ಮಕ್ಕಳು ಮಾಡುವ ಸಣ್ಣಪುಟ್ಟ ತಪ್ಪುಗಳನ್ನು ನಿರ್ಲಕ್ಷಿಸುವುದು ಹಾಗೂ ಅವರು ಮಾಡುವ ಗಂಭೀರವಾದ ತಪ್ಪುಗಳನ್ನು ಸರಿಪಡಿಸಲು ಮನೋವೈಜ್ಞಾನಿಕ ಕ್ರಮಗಳನ್ನು ತೆಗೆದುಕೊಳ್ಳುವ ಕುರಿತಂತೆ ಶಿಕ್ಷಕರಿಗೆ ಹೆಚ್ಚಿನ ಮಾಹಿತಿ, ತರಬೇತಿ ಅಗತ್ಯವಾಗಿದೆ. ಈ ಕುರಿತ ಎಲ್ಲ ವಿವರಗಳು ಡಿಎಸ್‌ಇಆರ್‌ಟಿ ರಚಿಸಿರುವ ತರಬೇತಿ ಸಂಚಿಕೆಯಲ್ಲಿ ಇವೆ. ತರಬೇತಿ ಮಾತ್ರದಿಂದ ಬದಲಾವಣೆ ಸಾಧ್ಯವಾಗದು. ಮಕ್ಕಳನ್ನು ಅರ್ಥ ಮಾಡಿಕೊಳ್ಳುವ ಬಗೆ ಹಾಗೂ ಅವರಿಗೆ ಶಿಕ್ಷಣ ನೀಡುವಲ್ಲಿ, ಶಿಸ್ತು ಮೂಡಿಸುವಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಇರುವ ಸಾಹಿತ್ಯವನ್ನು ಓದಿಕೊಂಡು ಚಿಂತನಶೀಲರಾಗುವುದು ಪರಿಹಾರವಾಗಬಲ್ಲದು. ಅವರೊಂದಿಗೆ ಒಡನಾಡುವಾಗ ಒಂದಷ್ಟು ಪ್ರೀತಿ, ಕಾಳಜಿ ಹಾಗೂ ಸಮಾಧಾನದಿಂದ ವ್ಯವಹರಿಸುತ್ತಾ ನಮ್ಮನ್ನು ನಾವು ಪ್ರಯೋಗಕ್ಕೆ ಒಡ್ಡಿಕೊಳ್ಳಬೇಕು. ಈ ರೀತಿಯ ನಿರಂತರ ಪ್ರಯೋಗಶೀಲತೆಯು ಮಕ್ಕಳಸ್ನೇಹಿ ಚಿಂತನೆಗಳನ್ನು ಗಟ್ಟಿಗೊಳಿಸಬಲ್ಲದು.

ವಾಚಕರ ವಾಣಿ

ಅರಣ್ಯ ವಿಸ್ತರಣೆ: ಬರೀ ಘೋಷಣೆಯಾಗದಿರಲಿ

ಮಾನವ– ವನ್ಯಜೀವಿ ಸಂಘರ್ಷದ ಕಾರಣ ಕೃಷಿ ಮಾಡಲು ಸಾಧ್ಯವಾಗದೇ ಇರುವ ಪ್ರದೇಶದಲ್ಲಿ ಅಥವಾ ವನ್ಯಜೀವಿ ಕಾರಿಡಾರ್ ವ್ಯಾಪ್ತಿಯಲ್ಲಿನ ಖಾಸಗಿ ಜಮೀನನ್ನು ರೈತರು ಸ್ವ ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟುಕೊಡಲು ಮುಂದೆ ಬಂದರೆ, ಅಂತಹ ಜಮೀನುಗಳನ್ನು ಸ್ವಾಧೀನಕ್ಕೆ ಪಡೆದು ಅರಣ್ಯವನ್ನು ವಿಸ್ತರಿಸುವ ಸರ್ಕಾರದ ಆಲೋಚನೆಯು (ಪ್ರ.ವಾ., ಫೆ. 23) ಸಂತ್ರಸ್ತ ರೈತರಿಗೆ ಸಂತೋಷ ತಂದಿದೆ. ಪಶ್ಚಿಮಘಟ್ಟದ ಅರಣ್ಯದ ಪಕ್ಕದಲ್ಲಿರುವ ಈ ಜಮೀನುಗಳು ವನ್ಯಜೀವಿಗಳ ಭಂಡಾರವೇ ಆಗಿವೆ. ಇತ್ತೀಚೆಗೆ ಆನೆಗಳ ಹಾವಳಿ ವಿಪರೀತವಾಗಿದ್ದು ರೈತರ ಬದುಕು ಕಡು ಕಷ್ಟಕರವಾಗಿ ಪರಿಣಮಿಸಿದೆ.

ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯ ಸುಮಾರು ಎಂಟು ಗ್ರಾಮಗಳ ರೈತರು ತಮ್ಮ 3,355 ಎಕರೆ ಜಮೀನನ್ನು ಈ ಉದ್ದೇಶಕ್ಕೆ ಬಿಟ್ಟುಕೊಡಲು ತಯಾರಾಗಿರುವುದಾಗಿ ಸ್ವತಃ ಒಪ್ಪಿಗೆ ನೀಡಿದ್ದಾರೆ. ಇದರಿಂದಾಗಿ ಸರ್ಕಾರಿ ಜಮೀನು ಸೇರಿದಂತೆ ಸುಮಾರು 18,000 ಎಕರೆ ಪ್ರದೇಶವು ವನ್ಯಜೀವಿಗಳಿಗೆ ಮುಕ್ತವಾಗುತ್ತದೆ. ಸರ್ಕಾರ ಈ ಯೋಜನೆಗೆ ಈ ಹಿಂದೆಯೇ ಬಜೆಟ್‌ನಲ್ಲಿ ಹಣ ಮೀಸಲಿರಿಸಿದ್ದರೂ ಅದು ಕಾರ್ಯಗತವಾಗಲಿಲ್ಲ. ಯೋಜನೆಯನ್ನು ಸರ್ಕಾರ ಈಗಲಾದರೂ ಜಾರಿಗೆ ತರಬೇಕು. ಅದಕ್ಕೆ ಬೇಕಾದ ಹಣ ಬಿಡುಗಡೆ ಮಾಡಿ ವನ್ಯಜೀವಿ– ಮಾನವ ಸಂಘರ್ಷವನ್ನು ತಪ್ಪಿಸಬೇಕು.

ಅತ್ತಿಹಳ್ಳಿ ದೇವರಾಜ್, ಹಾಸನ

ಸಲ್ಲದ ಹೇಳಿಕೆಯೂ ಚುನಾವಣಾ ಗಿಮಿಕ್

ಅನುದಾನ ತಾರತಮ್ಯ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ನಡೆಯುತ್ತಿರುವ ತಿಕ್ಕಾಟವನ್ನು, ಕಾಂಗ್ರೆಸ್ ಪಕ್ಷ ಮಾಡುತ್ತಿರುವ ಚುನಾವಣಾ ಗಿಮಿಕ್ ಎಂದು ಅರ್ಥೈಸಿದ್ದಾರೆ ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ (ಪ್ರ.ವಾ., ಫೆ. 26). ಅವರ ಈ ಥರದ ಹೇಳಿಕೆ ಸಹ ‘ಚುನಾವಣಾ ಗಿಮಿಕ್’ ಅಲ್ಲವೇ? ಕೆಲವು ತಿಂಗಳ ಹಿಂದೆ ಅವರು ಬಿಜೆಪಿಯನ್ನು ತ್ಯಜಿಸಿ, ಕಾಂಗ್ರೆಸ್ ಸೇರಿ, ಮತ್ತೆ ಕಾಂಗ್ರೆಸ್ ತ್ಯಜಿಸಿ, ಬಿಜೆಪಿ ಸೇರಿ ಇದೀಗ ಕಾಂಗ್ರೆಸ್ ಅನ್ನು ಟೀಕಿಸುವುದು, ಬಿಜೆಪಿಯನ್ನು ಹೊಗಳುವುದು ಬಾಲಿಶತನವಲ್ಲವೇ?

ಶೆಟ್ಟರ್ ಅವರು ಮುಖ್ಯಮಂತ್ರಿ ಕೂಡ ಆಗಿದ್ದವರು. ಅಂಥವರು ಬರೀ ಅಧಿಕಾರದ ಆಸೆಗಾಗಿ ಪುನಃ ಪುನಃ ಪಕ್ಷಾಂತರ ಮಾಡಿರುವುದರ ಹಿಂದೆ ಇರುವ ಅಧಿಕಾರದಾಹವನ್ನು ಜನ ಅರ್ಥ ಮಾಡಿಕೊಂಡಿದ್ದಾರೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಹುಂಡಿ ಹಣ ವಿನಿಯೋಗಕ್ಕೊಂದು ಸರಳ ಸೂತ್ರ

ದೇವಸ್ಥಾನಗಳ ಹುಂಡಿಗೆ ಭಕ್ತರು ಧನಕನಕ ಅರ್ಪಿಸಿದ ನಂತರ ಅವರಿಗೆ ಅದರ ಮೇಲೆ ಯಾವ ಅಧಿಕಾರವೂ ಇರುವುದಿಲ್ಲ. ಅದು ಆಗ ದೇವರ ದುಡ್ಡು. ದೇವರು ಎಲ್ಲರನ್ನೂ ಪ್ರೀತಿಸುತ್ತಾನೆ, ಸಮಾನವಾಗಿ ಕಾಣುತ್ತಾನೆ ಎಂದು ಧರ್ಮಗ್ರಂಥಗಳು ಹೇಳುತ್ತವೆ, ಧರ್ಮಗುರುಗಳೂ ಹೇಳುತ್ತಾರೆ. ಆದ್ದರಿಂದ, ಸಮಾಜದಲ್ಲಿ ಈಗ ಬೇರೂರಿರುವ ದ್ವೇಷ, ಅಸಮಾನತೆಯ ನಿವಾರಣೆಗಾಗಿ ಹುಂಡಿಯ ಸಂಪತ್ತು ವಿನಿಯೋಗವಾಗಬೇಕು. ಅರ್ಥಾತ್, ಜಾತಿ-ಮತಗಳ ಸೌಹಾರ್ದದ ಉದ್ದೇಶ ಹೊಂದಿದ ಕಾರ್ಯಗಳಿಗೆ, ಕಡುಬಡವರ ಜೀವನೋಪಾಯಕ್ಕೆ, ಶಿಕ್ಷಣ ಮತ್ತು ಆರೋಗ್ಯಕ್ಕೆ, ಶೋಷಣೆ, ಅಸ್ಪೃಶ್ಯತೆಯ ನಿವಾರಣೆಗೆ ಬಳಕೆಯಾಗಬೇಕು.

ಮುಜರಾಯಿ ಇಲಾಖೆಯ ದೇವಾಲಯ ಮತ್ತು ಸಾಧ್ಯವಿರುವ ಇತರ ದೇಗುಲಗಳ ಹುಂಡಿಯ ಸಂಪತ್ತನ್ನು ಒಟ್ಟಾಗಿ ಪರಿಗಣಿಸಿ, ದೇಗುಲ-ಸಿಬ್ಬಂದಿಯ ನಿರ್ವಹಣೆ ಮಾತ್ರಕ್ಕೆ ಬಳಸಿ ಉಳಿದ ಎಲ್ಲ ಸಂಪತ್ತೂ ಮೇಲೆ ಹೇಳಿದಂತೆ ವಿನಿಯೋಗವಾಗುವಂತೆ ಕಾನೂನು ಮತ್ತು ಯೋಜನೆಗಳು ಜಾರಿಗೆ ಬರಬೇಕು.

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ತೆರಿಗೆ ಹಂಚಿಕೆ: ಗೊಂದಲ ಬಗೆಹರಿಸಿ

ತೆರಿಗೆ ಹಂಚಿಕೆ ವಿಷಯದಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದು ರಾಜ್ಯ ಸರ್ಕಾರ ಆರೋಪಿಸುತ್ತಿದೆ. ಹಣಕಾಸು ಆಯೋಗದ ಶಿಫಾರಸಿನ ಅನ್ವಯವೇ ಎಲ್ಲ ರಾಜ್ಯಗಳಿಗೂ ತೆರಿಗೆ ಹಣ ಹಂಚಿಕೆಯಾಗುತ್ತಿದೆ ಎಂದು ಅರ್ಥ ಸಚಿವೆ ನಿರ್ಮಲಾ ಸೀತಾರಾಮನ್ ಸಮರ್ಥಿಸಿಕೊಂಡಿದ್ದಾರೆ. ತೆರಿಗೆ ಹಂಚಿಕೆ ನ್ಯಾಯಸಮ್ಮತ ಎಂದು ಬಿಜೆಪಿ ಪರ ವಕ್ತಾರರು, ತಾರತಮ್ಯ ನಡೆದಿದೆ ಎಂದು ಕಾಂಗ್ರೆಸ್ ಪರ ಇರುವವರು ವಾದಿಸುತ್ತಿದ್ದಾರೆ. ಹೀಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೇಳಿಕೆಗಳು ಪರಸ್ಪರ ವಿರುದ್ಧವಾಗಿದ್ದು, ಯಾರು ಸರಿ ಎನ್ನುವುದರ ಬಗ್ಗೆ ಪ್ರಜೆಗಳಲ್ಲಿ ಗೊಂದಲ ಮೂಡಿದೆ. ಆದ್ದರಿಂದ ಎರಡೂ ಸರ್ಕಾರಗಳು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವ ದಾಖಲೆಗಳನ್ನು ಮಾಧ್ಯಮಗಳ ಮೂಲಕ ಪ್ರಜೆಗಳ ಮುಂದಿಟ್ಟು ಗೊಂದಲಕ್ಕೆ ಅಂತ್ಯ ಹಾಡಬೇಕು. ಈ ಮೂಲಕ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು.

ಜಿ.ನಾಗೇಂದ್ರ ಕಾವೂರು, ಸಂಡೂರು

ನೀರನ್ನು ಸ್ವಿಸ್ ಬ್ಯಾಂಕಿನಲ್ಲಿ ಇಡಲಾಗದು!

‘ಬ್ರ್ಯಾಂಡ್ ಬೆಂಗಳೂರು ಕಟ್ಟುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುವ ಬದಲು ಬೆಂಗಳೂರಿನ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಗಮನ ಹರಿಸಬೇಕು’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸರ್ಕಾರಕ್ಕೆ ಸಲಹೆ ನೀಡಿರುವುದಾಗಿ ವರದಿಯಾಗಿದೆ. ಜೊತೆಗೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ನೀರಿನ ಅಭಾವ ಉದ್ಭವ ಆಗದಂತೆ ಪಾಲಿಕೆ, ಜಲಮಂಡಳಿ ಅಧಿಕಾರಿಗಳು ಕ್ರಮಗಳನ್ನು ಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಸೂಚಿಸಿರುವುದಾಗಿ ಮತ್ತೊಂದು ವರದಿ ತಿಳಿಸಿದೆ. ನೀರಿನ ಪರಿಹಾರಕ್ಕಾಗಿ ಬರೀ ಮುಖ್ಯಮಂತ್ರಿಯವರಿಗೆ ಸಲಹೆ ನೀಡುವುದು ಮತ್ತು ಅಧಿಕಾರಿಗಳ ಮೇಲೆ ಒತ್ತಡ ಹಾಕುವುದರಿಂದ ಸಮಸ್ಯೆ ಇತ್ಯರ್ಥ ಆಗದು. ನೀರು ಲಭ್ಯವಿದ್ದರೆ ಜನರಿಗೆ ಕೊಟ್ಟೇ ಕೊಡುತ್ತಾರೆ. ಅದನ್ನು ಸ್ವಿಸ್ ಬ್ಯಾಂಕಿನಲ್ಲಿ ಇಡಲಾಗದು.

ರಾಜಕಾಲುವೆಗಳ ಒತ್ತುವರಿ, ಕೆರೆಗಳ ಕಬಳಿಕೆ, ಮರಗಳ ಕಡಿಯುವಿಕೆ, ಅರಣ್ಯ ನಾಶ ಹಾಗೂ ಒತ್ತುವರಿಯಿಂದ ಈ ಪರಿಸ್ಥಿತಿ ಉದ್ಭವವಾಗಿದೆ ಎಂಬುದು ಸ್ಪಷ್ಟ. ಇದಕ್ಕೆ ಕಾರಣ, ಅಭಿವೃದ್ಧಿಯ ಹೆಸರಿನಲ್ಲಿ ಮಾಡುವ ಅರ್ಥಹೀನ ಮತ್ತು ಅವೈಜ್ಞಾನಿಕ ಕಾಮಗಾರಿಗಳು. ಇಂತಹವನ್ನು ಮೊದಲು ನಿಲ್ಲಿಸಿ ಕೆರೆಕಟ್ಟೆಗಳನ್ನು ತುಂಬಿಸುವುದರತ್ತ ಗಮನ ಹರಿಸಲಿ. ಈ ಪರಿಸ್ಥಿತಿಗೆ ಸರ್ಕಾರವಷ್ಟೇ ಕಾರಣವಲ್ಲದೆ ಜನರೂ ಕಾರಣಕರ್ತರೇ ಎಂಬುದು ಗಮನಾರ್ಹ. ನೀರನ್ನು ಮಾನವ ಸೃಷ್ಟಿಸಲಾಗದು. ನಿಸರ್ಗದಿಂದಲೇ ಪಡೆಯಬೇಕು ಮತ್ತು ಅದನ್ನು ಉಳಿಸಿ ಬಳಸಬೇಕು. ಹೀಗಾಗಿ, ಸರ್ಕಾರ ಮತ್ತು ಜನ ಇಬ್ಬರೂ ಎಚ್ಚೆತ್ತುಕೊಳ್ಳಬೇಕಿದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮನೆ ವೆಚ್ಚ

ಕಡಿಮೆಯಾಗದ ಸಾಮಾಜಿಕ, ಆರ್ಥಿಕ ಅಂತರ

ಶೇ 11.28ರಷ್ಟು ಬಹು ಆಯಾಮದ ಬಡವರು

ಪ್ರಜಾವಾಣಿ ವಾರ್ತೆ

ದೇಶದ ನಗರ ಪ್ರದೇಶದ ಪ್ರತಿ ಕುಟುಂಬವು ಪ್ರತಿ ತಿಂಗಳು ಮನೆ ಖರ್ಚಿಗೆಂದು ಸರಾಸರಿ ₹6,521 ವೆಚ್ಚ ಮಾಡಿದರೆ, ಗ್ರಾಮೀಣ ಪ್ರದೇಶದ ಕುಟುಂಬವು ₹3,860 ವೆಚ್ಚ ಮಾಡುತ್ತದೆ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿಯ 'ಕುಟುಂಬ ಗೃಹಬಳಕೆ ವೆಚ್ಚ ಸಮೀಕ್ಷೆ'ಯಲ್ಲಿ ಹೇಳಲಾಗಿದೆ. 2011-12ರಲ್ಲಿ ಹೀಗೆ ಮಾಡುತ್ತಿದ್ದ ವೆಚ್ಚಕ್ಕೂ 2022-23ನೇ ಸಾಲಿನಲ್ಲಿ ಮಾಡಿದ ವೆಚ್ಚದ ಮಧ್ಯೆ ಎರಡುಪಟ್ಟು ಏರಿಕೆಯಾಗಿದೆ. ವೆಚ್ಚದಲ್ಲಿ ಆಗಿರುವ ಏರಿಕೆಯು ಒಂದೆಡೆ ದಿನಬಳಕೆ ವಸ್ತುಗಳ ಬೆಲೆ ಏರಿಕೆಯನ್ನು ಸೂಚಿಸಿದರೆ, ಮತ್ತೊಂದೆಡೆ ಜನರ ಖರೀದಿ ಸಾಮರ್ಥ್ಯ ಏರಿಕೆಯಾಗಿರುವುದನ್ನೂ ಸೂಚಿಸುತ್ತದೆ. ಆದರೆ ಬಡವರು ಮತ್ತು ಸಿರಿವಂತರ ನಡುವಣ ವೆಚ್ಚದ ಮೊತ್ತದ ನಡುವಣ ಅಂತರವು ಅಧಿಕವಾಗಿಯೇ ಇದೆ. ವಿವಿಧ ಸಾಮಾಜಿಕ ವರ್ಗಗಳ ನಡುವಣ ಈ ಅಂತರವೂ ಢಾಳಾಗಿ ಕಾಣುತ್ತದೆ. ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಲ್ಲಿ ವಂಚಿತರು ವಂಚಿತರಾಗಿಯೇ ಇದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ.

'ಕುಟುಂಬ ಗೃಹಬಳಕೆ ವೆಚ್ಚ ಸಮೀಕ್ಷೆ'ಯು ದೇಶದ ಆರ್ಥಿಕ ಸ್ಥಿತಿಗತಿಗೆ ಹಿಡಿದ ಕೈಗನ್ನಡಿ ಎಂದು ಭಾನುವಾರವಷ್ಟೇ ಬಿಡುಗಡೆಯಾದ ಸಂಕ್ಷಿಪ್ತ ವರದಿಯಲ್ಲಿ ಹೇಳಲಾಗಿದೆ. ದೇಶದ ಆರ್ಥಿಕ ಪ್ರಗತಿ, ಹಣದುಬ್ಬರದ ಸ್ಥಿತಿ, ಜಿಡಿಪಿ ಬೆಳವಣಿಗೆ, ಜನರ ಜೀವನ ಮಟ್ಟ ಸುಧಾರಣೆಯನ್ನು ಈ ಸಮೀಕ್ಷೆಯ ವರದಿ ತೆರೆದಿಡುತ್ತದೆ. ಈ ಸಮೀಕ್ಷೆಯ ವರದಿಯ ಪ್ರಕಾರ ದೇಶದ ಜನರ ವೆಚ್ಚ ಮಾಡುವ ಸಾಮರ್ಥ್ಯವು ಹನ್ನೊಂದು ವರ್ಷಗಳಲ್ಲಿ ಎರಡುಪಟ್ಟು ಏರಿಕೆಯಾಗಿದೆ. ಆದರೆ ಬಡವರು ಮತ್ತು ಸಿರಿವಂತರ ನಡುವೆ ಇದ್ದ ವೆಚ್ಚ ಮಾಡುವ ಸಾಮರ್ಥ್ಯದ ಅಂತರವು ಹಾಗೇ ಉಳಿದುಕೊಂಡಿದೆ.

ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶದಲ್ಲಿನ ಕುಟುಂಬಗಳು ಪ್ರತಿ ತಿಂಗಳು ಮನೆ ಖರ್ಚಿಗೆ ಮಾಡಬೇಕಿರುವ ವೆಚ್ಚದ ನಡುವಣ ಅಂತರವೂ ಹತ್ತು ವರ್ಷಗಳಲ್ಲಿ ಹಾಗೆಯೇ ಉಳಿದಿದೆ. ಜಾತಿ ಸಮುದಾಯಗಳ ನಡುವೆ ಇರುವ ಈ ವೆಚ್ಚ ಅಂತರವೂ ಹಾಗೇ ಉಳಿದಿದೆ. ಕೇಂದ್ರ ಸರ್ಕಾರದ ಉಚಿತ ಪಡಿತರ ಯೋಜನೆ, ಉಚಿತ ವೈದ್ಯಕೀಯ ಸೇವೆ ಮತ್ತಿತರ ಕಲ್ಯಾಣ ಕಾರ್ಯಕ್ರಮಗಳ ಕಾರಣದಿಂದ ಜನರ ವೆಚ್ಚ ಮಾಡುವ ಸಾಮರ್ಥ್ಯ ಏರಿಕೆಯಾಗಿದೆ ಎಂದು ಸಂಕ್ಷಿಪ್ತ ವರದಿಯಲ್ಲಿ ಹೇಳಲಾಗಿದೆ. ಇಂತಹ ಕಾರ್ಯಕ್ರಮಗಳ ಫಲಾನುಭವಿಗಳು ಸಾಮಾನ್ಯವಾಗಿ ಆರ್ಥಿಕವಾಗಿ ಹಿಂದುಳಿದವರೇ ಆಗಿದ್ದಾರೆ. ಇಂತಹ ಕಲ್ಯಾಣ ಕಾರ್ಯಕ್ರಮಗಳ ಹೊರತಾಗಿಯೂ ಜೀವನಮಟ್ಟವನ್ನು ಸುಧಾರಿಸುವಂತಹ ಸರಕು ಮತ್ತು ಸೇವೆಗಳಿಗಾಗಿ ಈ ಜನರು ಮಾಡುತ್ತಿರುವ ವೆಚ್ಚ ಮತ್ತು ಸಿರಿವಂತರು ಮಾಡುವ ವೆಚ್ಚದ ಅಂತರ ಹಾಗೇ ಉಳಿದಿದೆ.

ಈ ಸಂಕ್ಷಿಪ್ತ ವರದಿಯನ್ನು ಬಿಡುಗಡೆ ಮಾಡಿದ ನಂತರ ಕೆಲವು ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ್ದ ನೀತಿ ಆಯೋಗದ ಅಧಿಕಾರಿಯೊಬ್ಬರು, 'ಈ ದತ್ತಾಂಶಗಳನ್ನು ಗಮನಿಸಿದರೆ ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಪ್ರಮಾಣ ಶೇ 5ಕ್ಕಿಂತ ಕಡಿಮೆ ಇದೆ' ಎಂದು ಹೇಳಿದ್ದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿತ್ತು. ಆದರೆ ಇದೇ ನೀತಿ ಆಯೋಗವು ಬಿಡುಗಡೆ ಮಾಡಿರುವ ವಿವಿಧ ವರದಿಗಳ ಪ್ರಕಾರ ದೇಶದಲ್ಲಿನ ಬಡವರ ಪ್ರಮಾಣವು ಶೇ 5ಕ್ಕಿಂತ ಹೆಚ್ಚೇ ಇದೆ. 2022-23ರ ಬಹು ಆಯಾಮದ ಬಡತನ ವರದಿಯ ಪ್ರಕಾರ ದೇಶದಲ್ಲಿನ ಬಹು ಆಯಾಮದ ಬಡವರ ಪ್ರಮಾಣ ಶೇ 11.28ರಷ್ಟು. ಭಾನುವಾರ ಬಿಡುಗಡೆಯಾದ ವರದಿಯಲ್ಲಿ ಯಾವ ಭಾಗದಲ್ಲೂ 'ಬಡತನ ರೇಖೆಗಿಂತ ಕೆಳಗಿರುವವರ ಪ್ರಮಾಣ ಶೇ 5ಕ್ಕಿಂತ ಕಡಿಮೆ' ಎಂದು ಉಲ್ಲೇಖಿಸಿಲ್ಲ.

ಜಾತಿ ಸಮುದಾಯಗಳ ನಡುವೆ ವೆಚ್ಚ ಅಂತರ ವಿಪರೀತ

ಸಾಮಾಜಿಕ-ಆರ್ಥಿಕ ಹಿನ್ನೆಲೆಯಲ್ಲಿಯೂ ಈ ಸಮೀಕ್ಷೆಯನ್ನು ನಡೆಸಲಾಗಿದೆ. ಸಮಾಜದ ತಳ ಸಮುದಾಯಗಳ ಕುಟುಂಬವೊಂದು ತಿಂಗಳಿಗೆ ಎಷ್ಟು ಖರ್ಚು ಮಾಡುವ ಸಾಮರ್ಥ್ಯ ಹೊಂದಿದೆ ಎನ್ನುವುದನ್ನು ಈ ಸಮೀಕ್ಷೆಯ ಅಂಕಿಅಂಶಗಳು ನಿರೂಪಿಸಿವೆ. ಜೊತೆಗೆ, ಇವೇ ಜಾತಿ-ಸಮುದಾಯಗಳ ಕುಟುಂಬವು ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದರೆ, ಆ ಕುಟುಂಬದ ಸಾಮರ್ಥ್ಯ ಎಷ್ಟು ಎಂಬುದನ್ನೂ ಇಲ್ಲಿ ಹೇಳಲಾಗಿದೆ.

ಸಾಮಾಜಿಕ ಸ್ತರವಿನ್ಯಾಸದಲ್ಲಿ ಮೇಲಿನ ಸ್ಥಾನದಲ್ಲಿರುವ ಜಾತಿ ಸಮುದಾಯಗಳಿಗೆ (ಸಮೀಕ್ಷೆಯಲ್ಲಿ ಇವನ್ನು ಉಳಿದ ಜಾತಿ ಸಮುದಾಯ ಎಂದು ಗುರುತಿಸಲಾಗಿದೆ) ಹೋಲಿಸಿಕೊಂಡರೆ, ತಳ ಸಮುದಾಯಗಳ ಕುಟುಂಬದ ಖರ್ಚು ಮಾಡುವ ಸಾಮರ್ಥ್ಯವು ಕಡಿಮೆ ಇದೆ. ಪರಿಶಿಷ್ಟ ಜಾತಿ, ವರ್ಗ ಅಥವಾ ಹಿಂದುಳಿದ ಸಮುದಾಯದ ಕುಟುಂಬವೊಂದು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದರೆ ಅದು ಸುಮಾರು ₹3,000ದಿಂದ ₹3,950ವರಗೆ ಖರ್ಚು ಮಾಡುತ್ತವೆ. ಅದೇ ಉಳಿದ ಜಾತಿ-ಸಮುದಾಯಗಳ ಕುಟುಂಬವೊಂದು ಸುಮಾರು ₹4,500ರಷ್ಟು ಖರ್ಚು ಮಾಡುತ್ತವೆ. ನಗರ ಪ್ರದೇಶದ ವಸ್ತುಸ್ಥಿತಿಯು ಇದಕ್ಕಿಂತ ಭಿನ್ನವೇನಿಲ್ಲ.



ನೈಜ ವೆಚ್ಚ ಸಾಮರ್ಥ್ಯವೆಷ್ಟು...

ಕುಟುಂಬವೊಂದು ಜೀವನ ನಿರ್ವಹಣೆಗೆ ಮಾಡಬೇಕಿರುವ ವೆಚ್ಚವನ್ನು ಎರಡು ಮಾದರಿಗಳಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ. ಸಾಲ, ಮನೆಯಲ್ಲಿಯೇ ಕೆಲವು ಬೆಳೆಗಳನ್ನು ಬೆಳೆದುಕೊಳ್ಳುತ್ತಿದ್ದರೆ, ಇಂಥ ಬೆಳೆಗಳ ದಾಸ್ತಾನು ಇದ್ದರೆ, ಉಡುಗೊರೆಗಳನ್ನು ಪಡೆದುಕೊಂಡಿದ್ದರೆ, ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳಾಗಿದ್ದರೆ ಅವುಗಳ ವೆಚ್ಚವನ್ನೂ ಇದರಲ್ಲಿ ಸೇರಿಸಲಾಗುತ್ತದೆ. ಅಂದರೆ ವಾಸ್ತವವಾಗಿ ಆ ಕುಟುಂಬದ ವೆಚ್ಚ ಮಾಡುವ ಸಾಮರ್ಥ್ಯವು ಇನ್ನೂ ಕಡಿಮೆ ಇದೆ. ಈ ಬಾರಿಯ ಸಮೀಕ್ಷೆಯಲ್ಲಿ ಈ ಉಚಿತ ಮತ್ತು ಖರೀದಿ ಮಾಡದ ವಸ್ತುಗಳ ವೆಚ್ಚವನ್ನು ಪ್ರತ್ಯೇಕವಾಗಿ ತೋರಿಸಲಾಗಿದೆ. ಆ ವೆಚ್ಚವನ್ನು ಕಡಿಮೆ ಮಾಡಿದರೆ, ಕುಟುಂಬಗಳು ವೆಚ್ಚ ಮಾಡುವ ಸಾಮರ್ಥ್ಯವು ಇನ್ನಷ್ಟು ಕಡಿಮೆಯಾಗುತ್ತದೆ. ಉದಾಹರಣೆಗೆ ಕೇಂದ್ರ ಸರ್ಕಾರದ್ದೇ ದಾಖಲೆಗಳ ಪ್ರಕಾರ 80 ಕೋಟಿ ಜನರಿಗೆ ಉಚಿತ ಪಡಿತರವನ್ನು ಒದಗಿಸಲಾಗುತ್ತಿದೆ. ಮೇಲೆ ಹೇಳಲಾದ ವೆಚ್ಚದಿಂದ ಈ ಪಡಿತರದ ವೆಚ್ಚವನ್ನು ಪ್ರತ್ಯೇಕಿಸಿದರೆ, ಜನರ ವೆಚ್ಚದ ಪ್ರಮಾಣ ಮತ್ತಷ್ಟು ಕಡಿಮೆಯಾಗುತ್ತದೆ.



ಮನೆವೆಚ್ಚ: ಬಡವರು-ಸಿರಿವಂತರ ನಡುವೆ ಭಾರಿ ಅಂತರ

ದೇಶದಲ್ಲಿನ ವಿವಿಧ ವರ್ಗದ ಜನರು ಪ್ರತಿ ತಿಂಗಳು ಮನೆ ಖರ್ಚಿಗೆಂದು ಮಾಡುವ ವೆಚ್ಚದಲ್ಲಿ ಭಾರಿ ಅಂತರವಿದೆ. ದೇಶದ ಗ್ರಾಮೀಣ ಪ್ರದೇಶದ ಅತ್ಯಂತ ಬಡ ಕುಟುಂಬಗಳು ಪ್ರತಿ ತಿಂಗಳು ಮಾಡುವ ಸರಾಸರಿ ವೆಚ್ಚವು ₹1,400ರ ಆಸುಪಾಸಿನಲ್ಲಿ ಇದೆ. ಆದರೆ ಗ್ರಾಮೀಣ ಪ್ರದೇಶದಲ್ಲಿನ ಸಿರಿವಂತ ಕುಟುಂಬಗಳು ಪ್ರತಿ ತಿಂಗಳು ಮಾಡುವ ಸರಾಸರಿ ವೆಚ್ಚವು ₹10,000ಕ್ಕಿಂತಲೂ ಹೆಚ್ಚು. ಈ ಎರಡೂ ವೆಚ್ಚಗಳ ನಡುವಣ ಅಂತರ ಶೇ 600ಕ್ಕಿಂತಲೂ ಹೆಚ್ಚು ಎನ್ನುತ್ತದೆ ಈ ದತ್ತಾಂಶ.

ಅಂದರೆ ದೇಶದ ಗ್ರಾಮೀಣ ಪ್ರದೇಶದಲ್ಲಿನ ಅತ್ಯಂತ ಕಡೆಯ ಶೇ 5ರಷ್ಟು ಬಡ ಕುಟುಂಬಗಳು ಪ್ರತಿ ತಿಂಗಳು ಮಾಡುವ ಸರಾಸರಿ ವೆಚ್ಚಕ್ಕಿಂತ, ಗ್ರಾಮೀಣ ಪ್ರದೇಶದ ಸಿರಿವಂತರಲ್ಲೇ ಮೊದಲ ಶೇ 5ರಷ್ಟು ಕುಟುಂಬವು ಪ್ರತಿ ತಿಂಗಳು ಮಾಡುವ ಸರಾಸರಿ ವೆಚ್ಚವು ಶೇ 634ರಷ್ಟು ಹೆಚ್ಚು. ನಗರ ಪ್ರದೇಶದಲ್ಲಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ನಗರ ಪ್ರದೇಶದಲ್ಲಿ ಇಂತಹ ಅಂತರದ ಪ್ರಮಾಣವು ಶೇ 898ರಷ್ಟು ಇದೆ.

ಈ ಲೆಕ್ಕಾಚಾರವು ಸರಾಸರಿ ರೂಪದಲ್ಲಿ ಇರುವ ಕಾರಣ, ನೈಜ ಚಿತ್ರಣವನ್ನು ನೀಡುವುದಿಲ್ಲ. ಹೀಗಾಗಿ ಬಡವರು ಮಾಡುವ ವೆಚ್ಚವು ಇಲ್ಲಿ ತೋರಿಸಿದ್ದಕ್ಕಿಂತ ಕಡಿಮೆ ಇರಬಹುದು ಮತ್ತು ಸಿರಿವಂತರು ಮಾಡುವ ವೆಚ್ಚವು ಇಲ್ಲಿ ತೋರಿಸಿದ್ದಕ್ಕಿಂತ ಹೆಚ್ಚು ಇರಬಹುದು.

ವಾಸ್ತವ ಸ್ಥಿತಿ ತೋರಿಸದ ಸರ್ಕಾರದ ವೆಚ್ಚ ಲೆಕ್ಕಾಚಾರ

ಪ್ರತಿ ಕುಟುಂಬಗಳು ಪ್ರತಿ ತಿಂಗಳು ಮಾಡುವ ಒಟ್ಟು ಸರಾಸರಿ ವೆಚ್ಚದ ವಿವರವನ್ನು ಎನ್‌ಎಸ್‌ಎಸ್‌ಒ ಸಮೀಕ್ಷೆ ಒದಗಿಸಿದೆ. ಸಮೀಕ್ಷೆಯಲ್ಲಿ ದೊರೆತ ವೆಚ್ಚ ವಿವರವನ್ನು ಸರಾಸರಿ ರೂಪಕ್ಕೆ ಪರಿವರ್ತಿಸಲಾಗಿದೆ. ದೇಶದ ಎಲ್ಲಾ ರಾಜ್ಯಗಳಲ್ಲಿ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಗುತ್ತಿರುವ ವೆಚ್ಚವನ್ನು ಸರಾಸರಿಗೆ ಪರಿವರ್ತಿಸಲಾಗಿದೆ. ಈವರೆಗೆ ನಡೆಸಲಾದ ಇಂತಹ ಎಲ್ಲಾ ಸಮೀಕ್ಷೆಗಳಲ್ಲೂ ಇದೇ ವಿಧಾನವನ್ನು ಅನುಸರಿಸಲಾಗಿದೆ. ಕೇವಲ 2 ಲಕ್ಷದಷ್ಟು ಜನರು ನೀಡುವ ಮಾಹಿತಿಯನ್ನು 140 ಕೋಟಿಗೂ ಹೆಚ್ಚು ಜನರಿಗೆ ಅನ್ವಯ ಮಾಡುವುದರಿಂದ, ಈ ದತ್ತಾಂಶಗಳು ವಾಸ್ತವಕ್ಕೆ ಹತ್ತಿರವಿರುವ ಚಿತ್ರಣವನ್ನು ಕೊಡುವುದಿಲ್ಲ. ಉದಾಹರಣೆಗೆ: ನಗರ ಪ್ರದೇಶದಲ್ಲಿ ಪ್ರತಿ ಕುಟುಂಬವು ಮನೆ ಬಾಡಿಗೆಗೆ ಎಂದು ಪ್ರತಿ ತಿಂಗಳು ಸರಾಸರಿ ₹424 ವೆಚ್ಚ ಮಾಡುತ್ತದೆ ಎನ್ನುತ್ತದೆ ಈ ವರದಿ. 'ಆದರೆ ನಗರ ಪ್ರದೇಶದಲ್ಲಿ ಇಷ್ಟು ಕಡಿಮೆ ಮೊತ್ತಕ್ಕೆ ಮನೆ ಬಾಡಿಗೆಗೆ ದೊರೆಯುತ್ತದೆಯೇ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಪ್ರಶ್ನಿಸಿದ್ದಾರೆ.

ಆಧಾರ: ಬಹು ಆಯಾಮದ ಬಡತನ ಸೂಚ್ಯಂಕ-2023, ಕುಟುಂಬ ಗೃಹಬಳಕೆ ವೆಚ್ಚ ಸಮೀಕ್ಷೆ: 2022-23, ಪಿಟಿಐ



ಬೆಂಗಳೂರು ಚಿತ್ರೋತ್ಸವದಲ್ಲಿ ಮಹಿಳಾ ಧ್ವನಿ



15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಫೆ.29ರಂದು ಉದ್ಘಾಟನೆಗೊಳ್ಳಲಿದ್ದು, ಈ ಬಾರಿಯ ಚಿತ್ರೋತ್ಸವದಲ್ಲಿ ಮಹಿಳಾ ಧ್ವನಿಗೆ ಆದ್ಯತೆ ದೊರಕಿದೆ. ಚಿತ್ರ ನಿರ್ಮಾಣದಲ್ಲಿ ಮಹಿಳೆಯರ ಶಕ್ತಿ ವಿಭಾಗದಡಿ ಮಹಿಳೆಯರು ನಿರ್ದೇಶಿಸಿದ 10 ಸಿನಿಮಾಗಳು ಈ ಬಾರಿ ಪ್ರದರ್ಶನಗೊಳ್ಳಲಿವೆ. ನಿರ್ದೇಶಕಿಯರ ಜೊತೆಗೆ ಲೇಖಕಿಯರ ಸಂಘದ ಸಂವಾದ, ಚರ್ಚೆಯೂ ಈ ವರ್ಷದ ವಿಶೇಷಗಳಲ್ಲಿ ಒಂದಾಗಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಚಿತ್ರೋತ್ಸವ ಸಮಿತಿಯ ಅಧ್ಯಕ್ಷ ಕೆ.ವಿ. ತ್ರಿಲೋಕ್ ಚಂದ್ರ, 'ವಿಧಾನಸೌಧದ ಮುಂಭಾಗ ಫೆ.29ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, 'ಸಿಂಹಾಸನ್', 'ಸಾಮ್ನಾ', 'ಡಾ.ಬಾಬಾ ಸಾಹೇಬ್ ಅಂಬೇಡ್ಕರ್' ಸಿನಿಮಾ ಖ್ಯಾತಿಯ ನಿರ್ದೇಶಕ ಜಬ್ಬಾರ್ ಪಟೇಲ್, ನಟ ಶಿವರಾಜ್‌ಕುಮಾರ್, ಬಾಂಗ್ಲಾದೇಶದ ನಟಿ ಅಜಮೇರಿ ಬಂದೋನ್ ಮುಂತಾದವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಈ ಬಾರಿ 50ಕ್ಕೂ ಅಧಿಕ ದೇಶಗಳ 185 ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ. ಕನ್ನಡ ಚಿತ್ರರಂಗ 90 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಮತ್ತು ಕರ್ನಾಟಕದ 50 ವರ್ಷಗಳ ಸಂಭ್ರಮದಲ್ಲಿ ಕನ್ನಡ ವಿಶೇಷ ವಿಭಾಗದಲ್ಲಿ 30 ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ' ಎಂದು ಮಾಹಿತಿ ನೀಡಿದರು.



ಕೆ.ವಿ. ತ್ರಿಲೋಕ್ ಚಂದ್ರ

'ಈ ಋತುವಿನ ಭಾರತದ ಯಾವುದೇ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಾಣದ 30ಕ್ಕೂ ಅಧಿಕ ಭಾರತೀಯ ಸಿನಿಮಾಗಳು ಈ ಬಾರಿಯ ಬೆಂಗಳೂರು ಚಿತ್ರೋತ್ಸವದಲ್ಲಿ ಮೊದಲ ಬಾರಿಗೆ ಪ್ರದರ್ಶನ ಕಾಣಲಿವೆ. ಈ ಬಾರಿಯ 21 ತೀರ್ಪುಗಾರರ ಪೈಕಿ 9 ಮಹಿಳೆಯರಿದ್ದರು. ಇವರಲ್ಲಿ ಹಲವರು ವಿದೇಶದವರು. ಜೊತೆಗೆ ಈ ಬಾರಿಯ ವಿಚಾರ ಸಂಕಿರಣಗಳು, ಸಂವಾದ, ಉಪನ್ಯಾಸ, ಕಾರ್ಯಾಗಾರಗಳಲ್ಲಿ ಸಿನಿಮಾ ರಂಗದಲ್ಲಿ ಇರುವ 52ಕ್ಕೂ ಅಧಿಕ ಮಹಿಳೆಯರು ಭಾಗವಹಿಸಲಿದ್ದಾರೆ. 'ಭಾರತೀಯ ಸಾಂವಿಧಾನಿಕ ಮೌಲ್ಯಗಳು ಮತ್ತು ಭಾರತೀಯ ಸಿನಿಮಾ' ಎಂಬ ವಿಷಯದಡಿ ನಿರ್ದೇಶಕ ಜಬ್ಬಾರ್ ಪಟೇಲ್ ಉಪನ್ಯಾಸ ನೀಡಲಿದ್ದಾರೆ' ಎಂದು ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್. ವಿದ್ಯಾಶಂಕರ್ ತಿಳಿಸಿದರು.

'ಈಗಾಗಲೇ 2 ಸಾವಿರ ಪ್ರತಿನಿಧಿಗಳು ನೋಂದಣಿ ಮಾಡಿಕೊಂಡಿದ್ದು, ಒರಾಯನ್ ಮಾಲ್, ಚಾಮರಾಜಪೇಟೆಯಲ್ಲಿರುವ ಕಲಾವಿದರ ಸಂಘದ ಡಾ.ರಾಜ್‌ಕುಮಾರ್ ಭವನ ಹಾಗೂ ಬನಶಂಕರಿ ಎರಡನೇ ಹಂತದಲ್ಲಿರುವ ಸುಚಿತ್ರಾ ಸಿನಿಮಾ ಅಕಾಡೆಮಿಯಲ್ಲಿ ಸಿನಿಮಾ ಪ್ರದರ್ಶನಗಳು ನಡೆಯಲಿವೆ' ಎಂದು ಸಮಿತಿಯ ಉಪಾಧ್ಯಕ್ಷ ಹೇಮಂತ ಎಂ. ನಿಂಬಾಳ್ಕರ್ ತಿಳಿಸಿದರು.

ತಲಾ 12 ಚಿತ್ರಗಳು: ಚಿತ್ರೋತ್ಸವದಲ್ಲಿ ಏಷ್ಯನ್, ಚಿತ್ರಭಾರತಿ ಹಾಗೂ ಕನ್ನಡ ಸಿನಿಮಾ ಹೀಗೆ ಮೂರು ವಿಭಾಗಗಳಲ್ಲಿ ಸ್ಪರ್ಧೆಗಳಿದ್ದು, ಪ್ರತಿ ವಿಭಾಗದಲ್ಲಿ 12 ಚಿತ್ರಗಳು ನಾಮನಿರ್ದೇಶನಗೊಂಡಿವೆ. ಈ ಪೈಕಿ ಸುಮಂತ್ ಭಟ್ ನಿರ್ದೇಶನದ 'ಮಿಥ್ಯ' ಏಷ್ಯನ್ ವಿಭಾಗದಲ್ಲಿ ಹಾಗೂ ಶಿಶಿರ್ ರಾಜಮೋಹನ್ ನಿರ್ದೇಶನದ 'ಅಬ್ರಕಡಾಬ್ರ' ಸಿನಿಮಾ ಚಿತ್ರಭಾರತಿ ವಿಭಾಗದಲ್ಲಿ ನಾಮನಿರ್ದೇಶನಗೊಂಡಿದೆ.

ಚಿತ್ರೋತ್ಸವದ ವಿಶೇಷಗಳು

- ಉದ್ಘಾಟನೆಗೆ ಮೊದಲು ಮೂರು ಬಾರಿ ಗ್ರ್ಯಾಮಿ ಪ್ರಶಸ್ತಿ ವಿಜೇತ ರಿಕಿ ಕೇಜ್ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮ
- ಉದ್ಘಾಟನಾ ಚಿತ್ರವಾಗಿ ಸ್ವಿಡ್ಜರ್ಲೆಂಡ್‌ನಲ್ಲಿನ ಅಧಿಕೃತ ಭಾಷೆಗಳ ಕುರಿತು ನಿರ್ಮಿಸಲಾಗಿರುವ ಹಾಸ್ಯಮಯ ಚಿತ್ರ 'ಬೋಂಜೂರ್ ಸ್ವಿಡ್ಜರ್ಲೆಂಡ್' ಪ್ರದರ್ಶನ
- ಜರ್ಮನಿಯ ಹೆಚ್ಚಿನ ಚಿತ್ರಗಳ ಪ್ರದರ್ಶನ
- ತುಳು, ಕೊಡವ, ಬಂಜಾರ, ಅರೆಭಾಷೆ ಸೇರಿದಂತೆ ಹಲವು ಪ್ರಾದೇಶಿಕ ಭಾಷೆಗಳ 9 ಸಿನಿಮಾಗಳ ಪ್ರದರ್ಶನ
- ಲೀಲಾವತಿ, ಭಗವಾನ್, ಸಿ.ವಿ.ಶಂಕರ್, ವಾಣಿ ಜಯರಾಂ ಗೌರವಾರ್ಥ ಅವರ ಚಲನಚಿತ್ರಗಳ ಪ್ರದರ್ಶನ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

2024ರ ಲೋಕಸಭಾ ಚುನಾವಣೆಗೆ ಚುನಾವಣಾ ಆಯೋಗವು ಬಿಡುಗಡೆ ಮಾಡಿದೆ ಎನ್ನಲಾದ ವೇಳಾಪಟ್ಟಿಯ ಸುತ್ತೋಲೆಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಸುತ್ತೋಲೆಯ ಪ್ರಕಾರ, 'ಮಾರ್ಚ್ 12ರಿಂದ ನೀತಿ ಸಂಹಿತೆ ಜಾರಿಯಾಗಲಿದೆ. ಮಾರ್ಚ್ 28ರಂದು ನಾಮಪತ್ರ ಸಲ್ಲಿಕೆ, ಏಪ್ರಿಲ್ 19ರಂದು ಮತದಾನ, ಮೇ 22ಕ್ಕೆ ಮತ ಎಣಿಕೆ ಮತ್ತು ಫಲಿತಾಂಶ ಹಾಗೂ ಮೇ 30ಕ್ಕೆ ಹೊಸ ಸರ್ಕಾರ ರಚನೆ' ಆಗಲಿದೆ ಎಂದು ಇದೆ. ಆದರೆ, ಇದು ಸುಳ್ಳು ಸುದ್ದಿ.



ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುತ್ತೋಲೆ

ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುತ್ತೋಲೆಯು ನಾವು ಹೊರಡಿಸಿದ್ದಲ್ಲ ಎಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ. ಈ ಕುರಿತು ತನ್ನ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿರುವ ಆಯೋಗವು, '2024ರ ಲೋಕಸಭಾ ಚುನಾವಣೆಯ ಕುರಿತು ವಾಟ್ಸ್‌ಆ್ಯಪ್‌ಗಳಲ್ಲಿ ತಪ್ಪು ಸಂದೇಶಗಳನ್ನು ಹಂಚಿಕೊಳ್ಳಲಾಗುತ್ತಿದೆ. ಈವರೆಗೆ ಚುನಾವಣಾ ದಿನಾಂಕವನ್ನು ಆಯೋಗ ಘೋಷಣೆ ಮಾಡಿಲ್ಲ. ಆಯೋಗವು ಚುನಾವಣಾ ವೇಳಾಪಟ್ಟಿಯನ್ನು ಪತ್ರಿಕಾಗೋಷ್ಠಿ ಮುಖಾಂತರ ಘೋಷಣೆ ಮಾಡುತ್ತದೆ' ಎಂದು ಸ್ಪಷ್ಟಪಡಿಸಿದೆ. ಜೊತೆಯಲ್ಲಿ, ಆಯೋಗವು ವೇಳಾಪಟ್ಟಿಯನ್ನು ಬಿಡುಗಡೆ ಮಾಡುವಾಗ ಎಲ್ಲ ಹಂತಗಳನ್ನು ದಿನಾಂಕಗಳ ಸಹಿತ ವಿವರ ನೀಡುತ್ತದೆ. ಜೊತೆಗೆ, ಹರಿದಾಡುತ್ತಿರುವ ಸುತ್ತೋಲೆಯಲ್ಲಿರುವಂತೆ ದೇಶದಾದ್ಯಂತ ಒಂದು ಹಂತದಲ್ಲಿ ಚುನಾವಣಾ ನಡೆಸುವುದಿಲ್ಲ. ಹೊಸ ಸರ್ಕಾರ ರಚನೆಯು ಈ ದಿನಾಂಕದಲ್ಲಿ ನಡೆಯಬೇಕು ಎಂದೂ ಆಯೋಗ ಹೇಳುವುದಿಲ್ಲ. ಆದ್ದರಿಂದ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುತ್ತೋಲೆಯು ನಿಜವಾದುದಲ್ಲ.

ಚುನಾವಣಾ ಆಯೋಗವು 2019ರ ಲೋಕಸಭಾ ಚುನಾವಣೆ ಸಂಬಂಧ ಬಿಡುಗಡೆ ಮಾಡಿದ್ದ ವೇಳಾಪಟ್ಟಿ ವಿವರ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 27, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ತೃತೀಯ ಗಂ. 25-54 ನಕ್ಷತ್ರ: ಹಸ್ತ ಅಹೋರಾತ್ರ ಯೋಗ: ಶೂಲ ಗಂ. 16-25 ಕರಣ: ವಣಿಜ ಗಂ. 12-36, ಕುಂಭ ಮಾಸದ 14ನೇ ದಿನ, ಮಳೆನಕ್ಷತ್ರ: ಶತಭಿಷ 3.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-51 ಸೂರ್ಯಾಸ್ತ : 06-35
ಮುಸ್ಲಿಂ ದಿನಾಂಕ : 16 ಶಬನ್
ಅದೃಷ್ಟ ಸಂಖ್ಯೆ : 5, 11

ಮೇಷ: ಆಫೀಸಿನಲ್ಲಿ ಯಾರೊಂದಿಗೂ ಸಲುಗೆ ಬೆಳೆಸದೆ ಬಿಗುವಾಗಿ ನಡೆದುಕೊಳ್ಳುವುದೇ ಸೂಕ್ತ. ಎಲ್ಲಾ ವಿಷಯಗಳನ್ನೂ ಸಮಗ್ರವಾಗಿ ಅವಲೋಕಿಸಲು ಇದು ಒಳ್ಳೆಯ ದಿನ. ಚರ್ಮದ ಉತ್ಪನ್ನಗಳಿಂದ ಹೇರಳ ಲಾಭ.

ವೃಷಭ: ಗರ್ವವಿಲ್ಲದ ನಿಮ್ಮ ವ್ಯಕ್ತಿತ್ವ ಹೆಚ್ಚಿನ ಶೋಭೆ ತರುವುದು. ತರಕಾರಿ ಬೆಳೆಗಾರರಿಗೆ ಸಮಾಧಾನಕರ ವರಮಾನ ಸಿಗುವುದು. ಕಚೇರಿಯಲ್ಲಿ ಸಹವರ್ತಿಗಳೊಂದಿಗೆ ಸ್ನೇಹಭಾವದಿಂದ ವರ್ತಿಸಿ.

ಮಿಥುನ: ಬೇರೆಯವರೊಂದಿಗೆ ಸೇರಿ ಮಾಡುವ ಕೆಲಸದಿಂದ ಯಶಸ್ಸು ಸಿಗುತ್ತದೆ. ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು.

ಕರ್ಕಾಟಕ: ರಹಸ್ಯವಾಗಿ ಸಿಗುವ ಬೆಂಬಲದಿಂದ ಕನಸುಗಳು ನನಸಾಗಲಿವೆ. ಮಹತ್ವದ್ದೆನಿಸಿದ ಕೆಲಸಗಳ ಬಗ್ಗೆ ದೀರ್ಘ ಸಮಾಲೋಚನೆ ನಡೆಯುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅತೀವ ಆಸಕ್ತಿ ಇರುವುದು.

ಸಿಂಹ: ಸಾಧಕರ ಉಪನ್ಯಾಸವು ಮನಸ್ಸಿಗೆ ಗಾಢ ಪರಿಣಾಮವನ್ನು ಉಂಟುಮಾಡಲಿದೆ. ಪ್ರೀತಿಪಾತ್ರರೊಂದಿಗೆ ಮನಬಿಚ್ಚಿ ಮಾತನಾಡುವ ಇಚ್ಛೆ ಪೂರ್ಣಗೊಳ್ಳಲಿದೆ. ಮನಸ್ಸಿನ ದುಗುಡತೆ ನಿವಾರಣೆಗೆ ತಾಳ್ಮೆಯು ಮುಖ್ಯ.

ಕನ್ಯಾ: ಹೊಸ ರೀತಿಯ ಚಿಂತನೆಗಳು ಫಲಕಾರಿಯಾಗಲು ಸಮಯ ಹಿಡಿದರೂ ಫಲ ನಿಶ್ಚಿತ ಎಂಬುದು ಮನದಟ್ಟಾಗಲಿದೆ. ಅವಕಾಶಗಳು ಎದುರಿಗಿದ್ದರೂ ಗೊಂದಲಗೊಳ್ಳದೆ ಸರಿಯಾದುದನ್ನೆ ಆಯ್ಕೆ ಮಾಡಿಕೊಳ್ಳುವಿರಿ.

ತುಲಾ: ವಿದ್ಯಾಬಲದಿಂದ ಉತ್ತಮ ಸ್ಥಾನಮಾನ ಪ್ರಾಪ್ತಿ. ಸಾಲಗಳಿಂದ ಮುಕ್ತರಾಗಿ ಆಪದ್ಧನವನ್ನು ಸಂಗ್ರಹಿಸಿಟ್ಟುಕೊಳ್ಳುವ ಯೋಗ ಬರಲಿದೆ. ಈ ದಿನ ಮೊದಲ ಗಮನ ಸಾಂಸಾರಿಕ ಜೀವನದ ಬಗ್ಗೆ ಇರಲಿ.

ವೃಶ್ಚಿಕ: ಸಂಜೆಯ ಸಮಯದಲ್ಲಿ ಕೆಲಸದ ಒತ್ತಡ ಹೆಚ್ಚಾಗಿ ಶಿರೋವೇದನೆಯ ಸಮಸ್ಯೆಯಾಗುವುದು. ಮಗನ ಕೆಲಸ ನೆರವೇರಿದ ಕಾರಣಕ್ಕೆ ಹೇಳಿಕೊಂಡ ಹರಕೆಯನ್ನು ಪೂರ್ಣಗೊಳಿಸುವ ಬಗ್ಗೆ ಮನೆಯಲ್ಲಿ ಪ್ರಸ್ತಾಪಿಸಿ.

ಧನು: ಕಲಾವಿದರಿಗೆ ಮತ್ತು ಹಾಡುಗಾರರಿಗೆ ಒಳ್ಳೆಯ ದಿನಗಳು ಬರಲಿವೆ. ದಿನದಿಂದ ದಿನಕ್ಕೆ ತಾಯಿಯ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ರಾಜಕೀಯ ರಂಗದಲ್ಲಿ ಜನಪ್ರಿಯತೆ ಪಡೆಯುವಿರಿ.

ಮಕರ: ವಾಗ್ವಾದದಲ್ಲಿ ನಿಮ್ಮನ್ನು ಮೀರಿಸುವವರೇ ಇಲ್ಲ. ಅಭಿಪ್ರಾಯಗಳು ಬೇರೆಯವರ ಆಲೋಚನೆಗೆ ಮನಸ್ಥಿತಿಗೆ ಹೊಂದಿಕೊಳ್ಳುವುದು. ಉಪ ಆದಾಯದಿಂದ ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ.

ಕುಂಭ: ಹೊಸ ಗೆಳೆಯರ ಪರಿಚಯ ಮುಂದಿನ ಹೂಡಿಕೆಗಳಿಗೆ ಹೆಚ್ಚಿನ ಲಾಭ ತರುವುದು. ಸಮಾಜ ಸೇವೆಯಲ್ಲಿ ನಿಮ್ಮೊಂದಿಗೆ ಹಲವರು ಕೈ ಸೇರುವುದರಿಂದ ಜವಾಬ್ದಾರಿ ಕಡಿಮೆಯಾಗಲಿದೆ. ಹಸಿರು ಬಣ್ಣ ಶುಭ ತರಲಿದೆ.

ಮೀನ: ರಾಜಕೀಯ ವ್ಯಕ್ತಿಗಳು ನಿಮ್ಮ ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಕೃಷಿಕರು ದಲ್ಲಾಳಿಗಳಿಂದ ಮೋಸ ಹೋಗುವ ಸ್ಥಿತಿ ಬರುವುದು.

ಹಸಿಗೋಡೆಯ ಮೇಲೆ ನೆಟ್ಟ ಹರಳು

ನುಡಿ ಬೆಳಗು

ಪಿ. ಚಂದ್ರಿಕಾ

ಅದೊಂದು ಪುಟ್ಟ ಹುಡುಗಿ;ಸೂಕ್ಷ್ಮ ಮನಸ್ಸಿನವಳು. ಶಾಲೆಯ ರಜೆ ಎಂದು ಪೇಟೆಯಿಂದ ಅಜ್ಜನ ಮನೆಗೆ ಬರುತ್ತಾಳೆ. ಅವಳಿಗೆ ಅಜ್ಜನ ಮನೆ ಎಂದರೆ ಸಂಭ್ರಮ. ಅಜ್ಜ ಮತ್ತು ಅಜ್ಜಿಯರಿಗೂ ಮೊಮ್ಮಗಳು ಅಂದರೆ ಅಷ್ಟೇ ಪ್ರೀತಿ. ಅವಳಿಗೆ ಬೇಕಾದ ತಿಂಡಿ ತಿನಿಸು ಮಾಡಿ ಅವಳನ್ನು ಖುಷಿಯಾಗಿರಿಸಿಕೊಳ್ಳುವ ಉತ್ಸಾಹ ಅವರದ್ದು. ಅವಳು ಬರುವ ಮೊದಲೇ ಮನೆಯನ್ನು ಸ್ವಚ್ಛಗೊಳಿಸುತ್ತಾರೆ. ಅವಳಿಗೆ ಪೇಟೆಯಲ್ಲಿ ಇರುವ ಅನುಕೂಲಗಳನ್ನು ಇಲ್ಲಿ ಮಾಡಿಕೊಡಲಾಗದೆ ಹೋಗಬಹುದು ಆದರೆ ಯಾವ ತೊಂದರೆಯೂ ಆಗದಂತೆ ನೋಡುವ ಉದ್ದೇಶ ಅವರದ್ದು.

ಪುಟ್ಟ ಹುಡುಗಿ ಹಳ್ಳಿಗೆ ಬಂದವಳೇ ತೋಟ ಹೊಲ ಎಂದೆಲ್ಲಾ ಸುತ್ತಿಕೊಂಡು ಬರುತ್ತಾಳೆ. ತನ್ನ ಇಷ್ಟದ ತಿಂಡಿ ತಿನಿಸುಗಳನ್ನು ತಿಂದು ಅಜ್ಜ ಅಜ್ಜಿಯ ಜೊತೆ ಕಥೆ ಹೇಳುತ್ತಾ ರಾತ್ರಿ ಆರಾಮವಾಗಿ ಮಲಗಿ ಕನಸು ಕಾಣುತ್ತಾಳೆ.

ಬೆಳಿಗ್ಗೆ ಹಕ್ಕಿಗಳ ಚಿಲಿಪಿಲಿ ಶಬ್ದದ ಜೊತೆ ಏಳುವ ಅವಳಿಗೆ ಒಂದು ದೃಶ್ಯ ಕಾಣುತ್ತದೆ. ಮನೆಯ ಬಾಗಿಲಲ್ಲಿ ಒಂದಿಷ್ಟು ಇರುವೆಗಳು ಎದ್ದಿರುತ್ತವೆ. ಅಜ್ಜ ಅವುಗಳಿಗೆ ಕೀಟನಾಶಕ ಹೊಡೆದು ಸಾಯಿಸುತ್ತಿರುತ್ತಾನೆ. ಅದನ್ನು ನೋಡಿದ ಹುಡುಗಿ ಜೋರಾಗಿ ಅಳಲಿಕ್ಕೆ ಶುರು ಮಾಡುತ್ತಾಳೆ. ಮನೆಯ ಜನರಿಗೆ ಇವಳ್ಯಾಕೆ ಅಳುತ್ತಿದ್ದಾಳೆ ಎನ್ನುವ ಆತಂಕ. ಅವಳು ಅಜ್ಜನ ಜೊತೆ ಜಗಳಕ್ಕೆ ನಿಲ್ಲುತ್ತಾಳೆ, 'ಅಜ್ಜಾ ನೀನು ಈ ಇರುವೆಗಳನ್ನು ಯಾಕೆ ಸಾಯಿಸಿದೆ? ಅವು ನನ್ನ ಫ್ರೆಂಡ್ಸ್' ಎಂದು.

ಅಜ್ಜ 'ಮಗೂ ಅವು ನಿನ್ನ ಫ್ರೆಂಡ್ಸ್ ಹೇಗಾಗುತ್ತವೆ? ಕಚ್ಚಿದರೆ ನಿನ್ನ ಮೈಯ್ಯಲ್ಲಿ ಗಾಯಗಳಾಗುತ್ತವೆ. ನಿನಗೆ ತೊಂದರೆ ಆಗಬಾರ್ದು ಎಂದು ಸಾಯಿಸುತ್ತಿರುವೆ' ಎನ್ನುತ್ತಾನೆ. ಅದನ್ನು ಕೇಳಿ ಇನ್ನಷ್ಟು ದುಃಖಿತಳಾದ ಹುಡುಗಿ, 'ನಿನಗೆ ಗೊತ್ತಿಲ್ಲವೇ? ಈ ಇರುವೆಗಳು ಭೂಮಿಯ ಮಣ್ಣನ್ನು ಹಗುರಾಗಿಸುತ್ತವೆ. ಬೆಳೆ ಬರಲಿಕ್ಕೆ ಅನುಕೂಲ ಮಾಡುತ್ತವೆ. ನಮ್ಮ ಊಟಕ್ಕೆ ಅವು ದುಡಿಯುತ್ತವೆ. ಎಷ್ಟೋ ಕ್ರಿಮಿಕೀಟಗಳನ್ನು ತಿನ್ನುತ್ತವೆ. ಪ್ರಕೃತಿ ಯಾವುದನ್ನೂ ಸುಮ್ಮನೆ ಸೃಷ್ಟಿ ಮಾಡಿಲ್ಲ ಎಂದು ನಮ್ಮ ಪಾಠದಲ್ಲಿ ಹೇಳಿದೆ. ಹಾಗಿದ್ದೂ ನನಗೆ ಕಚ್ಚುತ್ತದೆ ಎಂದು ನೀನು ಅವುಗಳನ್ನು ಸಾಯಿಸಿಬಿಟ್ಟೆಯಲ್ಲಾ? ನಿನ್ನ ಈ ತಪ್ಪಿಗಾಗಿ ನಾನು ನಿನ್ನನ್ನು ಎಂದೂ ಕ್ಷಮಿಸಲ್ಲ' ಎನ್ನುತ್ತಾಳೆ.

ಆಗ ಅಜ್ಜನಿಗೆ ತಾನು ತನ್ನ ಮೊಮ್ಮಗಳ ಬಗ್ಗೆ ಮಾತ್ರ ಯೋಚಿಸಿದರೆ ಅವಳು ಇಡೀ ಪ್ರಕೃತಿಯ ಬಗ್ಗೆ ಯೋಚನೆ ಮಾಡುತ್ತಿದ್ದಾಳೆ. ಇದ್ಯಾವುದನ್ನೂ ಯೋಚಿಸದ ತಾನೆಷ್ಟು ಸ್ವಾರ್ಥಿ ಎನ್ನಿಸಿ ತನ್ನ ಬಗ್ಗೆ ನಾಚಿಕೆ ಎನ್ನಿಸುತ್ತದೆ. ಮಕ್ಕಳ ಮನಸ್ಸು ಹಸಿ ಗೋಡೆಯ ಹಾಗೆ. ಸಣ್ಣ ಸಂಗತಿಗಳೂ ಬಲವಾಗಿ ಅದರಲ್ಲಿ ಕಚ್ಚಿಕೊಳ್ಳುತ್ತವೆ. ಅದಕ್ಕೆ ಮಕ್ಕಳು ಅದ್ಭುತ ಅಲ್ಲವೆ?

ಪದಬಂಧ 5604

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಸಿರನ್ನು ಹೊರಗೆ ಬಿಡುವಿಕೆ (3)
3.ದೂರವನ್ನು ಅಳೆಯುವ ಒಂದು ಪ್ರಮಾಣ (3)
5.ಅಭಿಪ್ರಾಯ ಭೇದವಿದು (5)
7.ಇದಂತೂ ತೀರಾ ನಿಕೃಷ್ಟವಾದುದು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗೆನ್ನಿ (3)
11.ತಿಗರಿಯ ಹತ್ತಿರ ಪತಿವ್ರತೆ ಇದ್ದಾಳಲ್ಲಾ (3)
13.ಇದು ಮುಖ್ಯವಾದುದು (3)
15.ಕುಯುಕ್ತಿಯಿಂದ ಎಗರಿಸಿದ ಕಪ್ಪೆ ಚಿಪ್ಪು! (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಕೂಗಾಟದಿಂದ ಉಂಟಾದ ಗದ್ದಲ (3)
18.ಕರು ತಿನ್ನುತ್ತಿರುವ ಧಾನ್ಯದ ತೆನೆ (3)

ಮೇಲಿಂದ ಕೆಳಕ್ಕೆ
2.ಸಭೆಯಲ್ಲಿ ಕುಳಿತಿರುವವನು (3)
3.ಗೀತೆಗಳನ್ನು ರಾಗಬದ್ಧವಾಗಿ ಹಾಡುವವನು (3)
6.ಕಾರಿನ ಹತ್ತಿರ ಭಿಕ್ಷೆ ಬೇಡುವವನಿದ್ದಾನೆ (3)
9.ಓಲಗ ಶಾಲೆಯಲ್ಲಿರುವ ವಾಚಕ (3)
10.ಸ್ನೇಹಿತೆ ಇಲ್ಲಿದ್ದಾಳೆ (3)
12.ದ್ರವ ಒಸರುತ್ತಿರುವ ಜಿಹ್ವೆ (3)
14.ನಮ್ಮ ರಾಷ್ಟ್ರ ಪಕ್ಷಿ (3)
15.ಶುಕದ ಹತ್ತಿರವಿರುವ ನಾಯಿ (3)



5603ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭಕ್ಷಕ 5.ಬೇಜವಾಬ್ದಾರಿ 7.ವನಚರ 9.ಮರ 10.ಗಹನ 12.ಋತ 14.ಪರಿಸರ 16.ಭವಬಂಧನ 18.ಜುಲ್ಮಾನೆ

ಮೇಲಿಂದ ಕೆಳಕ್ಕೆ: 1.ಭರವಸೆ 2.ಕರಚ 3.ಚಿಬೇ 4.ಪರಿಷೇಕ 6.ವಾನರ 8.ರಕ್ತಗತ 9.ಮನಸ್ತಾಪ 11.ಪ್ರಲೋಭನ 12.ರುದಬಂ 13.ಅರಮನೆ 15.ರಿವಾಜು 17.ನಗ್ನ

ಸುಡೊಕು 5989

	2	1		5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5988 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಷೇರುಪೇಟೆ ವಹಿವಾಟು 352



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,212
ಇಂದಿನ ಅಂತ್ಯ	22,122
▼	90
ದಿನದ ಕನಿಷ್ಠ	22,075

ವಿನಿಮಯ ದರ

$ ಡಾಲರ್	82.90
£ ಪೌಂಡ್	105.10
€ ಯುರೊ	89.85
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1510 (1500)
ಸೋಯಾ (ರಿಫೈನ್ಡ್)	₹920 (915)
ಸೂರ್ಯಕಾಂತಿ (ರಿಫೈನ್ಡ್)	₹915 (910)
ಪಾಮೋಲಿನ್	₹862 (862)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹280-450
ದ್ವಿತಳಿ (ಬಿ.ವಿ)	₹309-555

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹162.50
ಆರ್‌ಎಸ್‌ಎಸ್-5	₹157.50
ಲಾಟ್	₹142

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8900-10500
ತಿಪಟೂರು	₹8000-9207

ಮಾರುಕಟ್ಟೆ ಧಾರಣೆ

ಅಡಿಕೆ (ಕ್ವಿಂಟಲ್)	
ಕೋಕ	18000-28500
ಹೊಸತು	28500-34000
ಹಳತು	34000-42500
ಚಿತ್ರದುರ್ಗ	
ಅಪಿ	46119-46559
ಬೆಟ್ಟೆ	34629-35099
ಕೆಂಪುಗೋಟು	27609-28010
ರಾಶಿ	45639-46069
ಕುಮಟ	
ಚಿಪ್ಪು	25099-25899
ಕೋಕ	15089-25599
ಫ್ಯಾಕ್ಟರಿ	10509-20479
ಹಳೆಚಾಲಿ	33099-36015
ಹೊಸಚಾಲಿ	30099-33479
ಸಾಗರ	
ಬಿಳಿಗೋಟು	10100-23489
ಚಾಲಿ	26119-35001
ಕೋಕ	15899-26199
ಕೆಂಪುಗೋಟು	23199-33199
ರಾಶಿ	30899-47670
ಸಿಪ್ಪೆಗೋಟು	7899-17869
ಶಿವಮೊಗ್ಗ	
ಬೆಟ್ಟೆ	45102-53559
ಗೊರಬಲು	16589-34169
ರಾಶಿ	32159-47759
ಸರಕು	61000-76420
ಸಿದ್ದಾಪುರ	
ಬಿಳಿಗೋಟು	24099-27299
ಚಾಲಿ	34619-36799
ಕೋಕ	24519-28219
ಹೊಸಚಾಲಿ	30899-36099
ಕೆಂಪುಗೋಟು	30100-33899
ರಾಶಿ	43299-46499
ತಟ್ಟಿಬೆಟ್ಟೆ	37009-39099
ಶಿರಸಿ	
ಬೆಟ್ಟೆ	38418-44099
ಬಿಳಿಗೋಟು	25099-30199
ಚಾಲಿ	36018-37939
ಕೆಂಪುಗೋಟು	30218-34199
ರಾಶಿ	43208-46399
ಯಲ್ಲಾಪುರ	
ಅಪಿ	53699-70309
ಬಿಳಿಗೋಟು	25011-37499
ಚಾಲಿ	31009-37499
ಕೋಕ	14899-27699
ಕೆಂಪುಗೋಟು	25011-35409
ರಾಶಿ	44009-52829
ತಟ್ಟಿಬೆಟ್ಟೆ	36040-43809

ಮುಂಬೈ ಧಾರಣೆ

ಶೇಂಗಾ 26-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ರಹಿತ)	1520 (1510)
ಒಂದು ವಾರದ ಡೆಲಿವರಿ	1515 (1505)
ಸೋಯಾ ಕಚ್ಚಾ	900 (900)
ಪಾಮ್ ವಾರದ ಡೆಲಿವರಿ	860 (860)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹61,950 (62,025)
ಬೆಳ್ಳಿ ಕೆ.ಜಿ **₹69,500** (69,750)
ಆವರಣದಲ್ಲಿ ಶನಿವಾರದ ಧಾರಣೆ

ಮಧ್ಯಪ್ರದೇಶದಿಂದ ಆವಕ ಹೆಚ್ಚಳ: ಸಗಟು ದರ ಇಳಿಕೆ

ತಗ್ಗಿದ ಬೆಳ್ಳುಳ್ಳಿ ಧಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಲ್ಲರೆ ಮಾರುಕಟ್ಟೆಯಲ್ಲಿ ಗಗನಮುಖಿಯಾಗಿದ್ದ ಬೆಳ್ಳುಳ್ಳಿ ಧಾರಣೆಯು ಇಳಿಕೆಯತ್ತ ಸಾಗಿದ್ದು, ಗ್ರಾಹಕರು ನಿಟ್ಟುಸಿರು ಬಿಡುವಂತಾಗಿದೆ.

ಕಳೆದ ವರ್ಷದ ಡಿಸೆಂಬರ್ ತಿಂಗಳ ಎರಡನೇ ವಾರದಲ್ಲಿಯೇ ರಾಜ್ಯದ ವಿವಿಧ ಚಿಲ್ಲರೆ ಮಾರುಕಟ್ಟೆಗಳಲ್ಲಿ ಬೆಳ್ಳುಳ್ಳಿ ದರವು ಏರಿಕೆಯಾಗಿತ್ತು. ಒಂದು ಕೆ.ಜಿ ಹೈಬ್ರಿಡ್ ಬೆಳ್ಳುಳ್ಳಿ ₹450 ಹಾಗೂ ನಾಟಿ ಬೆಳ್ಳುಳ್ಳಿ ದರವು ₹500 ದಾಟಿತ್ತು.

ಸದ್ಯ ಬೆಂಗಳೂರಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಹೈಬ್ರಿಡ್ ಬೆಳ್ಳುಳ್ಳಿಯ ಸಗಟು ಧಾರಣೆಯು ಕೆ.ಜಿಗೆ ₹70ರಿಂದ ₹150ಕ್ಕೆ ಇಳಿಕೆಯಾಗಿದೆ. 'ಎ' ದರ್ಜೆಯ ಸರಕಿಗೆ ಮಾತ್ರವೇ ₹150 ದರವಿದೆ. ಹಾಗಾಗಿ, ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹250ಕ್ಕೆ ಇಳಿದಿದೆ.

ಆದರೆ, ಬೆಂಗಳೂರಿನ ಕೆಲವು ಪ್ರತಿಷ್ಠಿತ ಬಡಾವಣೆಗಳಲ್ಲಿ ಮಾತ್ರವೇ ಚಿಲ್ಲರೆ ವ್ಯಾಪಾರಿಗಳು ಈಗಲೂ ಕೆ.ಜಿಗೆ ₹300ಕ್ಕೆ ಮಾರಾಟ ಮಾಡುತ್ತಿದ್ದಾರೆ. ಉಳಿದೆಡೆ ಚಿಲ್ಲರೆ ಧಾರಣೆಯು ಗಣನೀಯವಾಗಿ ತಗ್ಗಿದೆ. ದಾಸ್ತಾನು ಇಟ್ಟುಕೊಂಡಿದ್ದ ಕೆಲವು ವ್ಯಾಪಾರಿಗಳು ದರ ಇಳಿಕೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲು ಮುಂದಾಗಿಲ್ಲ ಎನ್ನುತ್ತಾರೆ ಸಗಟು ವ್ಯಾಪಾರಿಗಳು.

ಹೆಚ್ಚಿದ ಆವಕ: ಯಶವಂತಪುರದ ಮಾರುಕಟ್ಟೆಯಿಂದ ಬೆಂಗಳೂರು ನಗರ ಸೇರಿದಂತೆ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ, ಮೈಸೂರಿಗೂ ಬೆಳ್ಳುಳ್ಳಿ ಪೂರೈಕೆಯಾಗುತ್ತದೆ. ಅಲ್ಲದೆ, ಬೆಂಗಳೂರಿನ ಗಡಿ ಭಾಗದಲ್ಲಿರುವ ತಮಿಳುನಾಡಿನ ಪ್ರದೇಶಗಳಿಗೂ ರವಾನೆ ಆಗುತ್ತದೆ.

'ಮಾರುಕಟ್ಟೆಯಿಂದ ಈ ಪ್ರದೇಶಗಳಿಗೆ ಪ್ರತಿದಿನ ಸರಾಸರಿ 5 ಸಾವಿರ ಚೀಲದಷ್ಟು (ಪ್ರತಿ ಚೀಲ 50 ಕೆ.ಜಿ) ಬೆಳ್ಳುಳ್ಳಿ ಪೂರೈಕೆಯಾಗುತ್ತದೆ. ಸೋಮವಾರದಂದು ಮಧ್ಯಪ್ರದೇಶದಿಂದ 12 ಸಾವಿರ ಚೀಲ ಆವಕವಾಗಿದೆ. ಸಗಟು ವ್ಯಾಪಾರಿಗಳ ಬಳಿ ಮಾರಾಟವಾಗದ ಇನ್ನೂ 7 ಸಾವಿರ ಚೀಲ ದಾಸ್ತಾನಿದೆ' ಎಂದು ಬೆಂಗಳೂರಿನ ಗುಜರಾತ್ ಟ್ರೇಡರ್ಸ್‌ನ ವರ್ತಕ ಬಬ್ಲೂಜೀ 'ಪ್ರಜಾವಾಣಿ'ಗೆ ತಿಳಿಸಿದರು.

'ಮಧ್ಯಪ್ರದೇಶದಲ್ಲಿ ಈಗ ಕೊಯ್ಲು ಆರಂಭವಾಗಿದ್ದು, ಆವಕ ಮತ್ತಷ್ಟು ಹೆಚ್ಚಳವಾಗಲಿದೆ. ಮುಂದಿನ ವಾರದೊಳಗೆ ಸಗಟು ದರವು ಕೆ.ಜಿಗೆ ₹100ರಿಂದ ₹120ಕ್ಕೆ ಸ್ಥಿರವಾಗಲಿದೆ. ಹಾಗಾಗಿ, ಚಿಲ್ಲರೆ ಮಾರುಕಟ್ಟೆಯಲ್ಲೂ ಧಾರಣೆ ಸ್ಥಿರವಾಗಲಿದೆ' ಎಂದು ವಿವರಿಸಿದರು.

ಅಂಕಿ ಅಂಶಗಳು

5,000 ಚೀಲ
ಯಶವಂತಪುರ ಎಪಿಎಂಸಿಯಿಂದ ಪ್ರತಿದಿನ ಸರಾಸರಿ ಮಾರಾಟ

12,000 ಚೀಲ
ಸೋಮವಾರದಂದು ಮಧ್ಯಪ್ರದೇಶದಿಂದ ಪೂರೈಕೆಯಾದ ಬೆಳ್ಳುಳ್ಳಿ

7,000 ಚೀಲ
ಸಗಟುದಾರರ ಬಳಿ ಮಾರಾಟವಾಗದೆ ಉಳಿದಿರುವ ಬೆಳ್ಳುಳ್ಳಿ

ಚೇತರಿಕೆ ಕಂಡ ಹುಣಸೆ ಹಣ್ಣಿನ ಬೆಲೆ

ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯದ ಅತಿದೊಡ್ಡ ಹುಣಸೆ ಹಣ್ಣಿನ ಮಾರುಕಟ್ಟೆಯಾದ ನಗರದ ಎಪಿಎಂಸಿಗೆ ಹಣ್ಣಿನ ಆವಕದಲ್ಲಿ ಹೆಚ್ಚಳವಾಗಿದ್ದು, ಉತ್ತಮ ಬೆಲೆಯೂ ಸಿಗುತ್ತಿದೆ. ಆವಕ ಹೆಚ್ಚಿದಂತೆ ಧಾರಣೆ ಕುಸಿಯಬಹುದು ಎಂಬ ಆತಂಕ ಸದ್ಯದ ಮಟ್ಟಿಗೆ ದೂರವಾದಂತೆ ಕಾಣುತ್ತಿದೆ.

ಎಪಿಎಂಸಿಯಲ್ಲಿ ಸೋಮವಾರ ಗುಣಮಟ್ಟದ ಹಣ್ಣು ಕ್ವಿಂಟಲ್‌ಗೆ ₹27 ಸಾವಿರದವರೆಗೂ ಮಾರಾಟವಾಗಿದೆ. ಗುಣಮಟ್ಟದ ಹಣ್ಣಿಗೆ ಉತ್ತಮ ಬೆಲೆ ಸಿಗುತ್ತಿದೆ. ಗುಣಮಟ್ಟ ಇಲ್ಲದಿದ್ದರೆ ಧಾರಣೆ ಸಹಜವಾಗಿ ಕಡಿಮೆಯಾಗುತ್ತಿದೆ. ಹೊರಗಡೆಯಿಂದ ಬರುವ ವ್ಯಾಪಾರಿಗಳು ಸಹ ಗುಣಮಟ್ಟದ ಹಣ್ಣಿಗೆ ಹೆಚ್ಚು ಹಣ ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ಹಾಗಾಗಿ, ಬೆಲೆ ಏರಿಕೆಯಾಗುತ್ತಿದೆ ಎಂದು ವರ್ತಕರು ಹೇಳುತ್ತಿದ್ದಾರೆ.

ಸೋಮವಾರ ಬಟವಾಡಿ ಎಪಿಎಂಸಿಗೆ ಸುಮಾರು 20 ಲೋಡ್ ಹುಣಸೆ ಹಣ್ಣು ಬಂದಿದೆ. ಗುಣಮಟ್ಟದ ಹಣ್ಣು ಕ್ವಿಂಟಲ್‌ಗೆ ₹27 ಸಾವಿರಕ್ಕೆ ಮಾರಾಟವಾಗಿದೆ. ಅದಕ್ಕಿಂತ ಸ್ವಲ್ಪ ಕಡಿಮೆ ಗುಣಮಟ್ಟದ ಹಣ್ಣು ₹20 ಸಾವಿರದಿಂದ ₹27 ಸಾವಿರದ ವರೆಗೆ, ಸಾಧಾರಣ ಗುಣಮಟ್ಟದ ಹಣ್ಣು ₹15 ಸಾವಿರದಿಂದ ₹19 ಸಾವಿರ ಹಾಗೂ ಅತ್ಯಂತ ಕಡಿಮೆ ದರ್ಜೆಯ ಹಣ್ಣು ಕ್ವಿಂಟಲ್‌ಗೆ ₹10 ಸಾವಿರದಿಂದ ₹12 ಸಾವಿರಕ್ಕೆ ಮಾರಾಟವಾಗಿದೆ.

ಹೆಚ್ಚಿನ ಪ್ರಮಾಣದಲ್ಲಿ ಹಣ್ಣು ಬರಲಾರಂಭಿಸಿದರೆ ಬೆಲೆ ಇಳಿಕೆಯಾಗಬಹುದು. ಹಿಂದಿನ ವರ್ಷ ಇದೇ ಅವಧಿಯಲ್ಲಿ ಧಾರಣೆ ಇಳಿಕೆಯಾಗಿತ್ತು. ಈ ಬಾರಿಯೂ ಅಂಥದ್ದೆ ಪರಿಸ್ಥಿತಿ ಎದುರಾಗಬಹುದು ಎಂಬ ಆತಂಕ ರೈತರಲ್ಲಿ ಇತ್ತು. ಆದರೆ ಈ ಸಲ ಸದ್ಯದ ಮಟ್ಟಿಗೆ ಬೆಲೆ ಕುಸಿಯುವಂತೆ ಕಾಣುತ್ತಿಲ್ಲ. ಇನ್ನೂ ಒಂದು ತಿಂಗಳ ಕಾಲ ಇದೇ ದರ ಇರುತ್ತದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

> **ಆವಕವೂ ಹೆಚ್ಚುತ್ತಿದೆ. ಖರೀದಿದಾರರು ಹೊರಗಡೆಯಿಂದ ಬರುತ್ತಿದ್ದಾರೆ. ಗುಣಮಟ್ಟದ ಹಣ್ಣು ಖರೀದಿಗೆ ಆದ್ಯತೆ ನೀಡುತ್ತಿದ್ದಾರೆ. ಗುಣಮಟ್ಟದ ಹಣ್ಣಿಗೆ ಬೆಲೆ ಇದ್ದೇ ಇದೆ**
> **ದೇವೇಂದ್ರಪ್ಪ,** ವರ್ತಕ

ಬೈಜುಸ್ ಕಂಪನಿ ಬಿಕ್ಕಟ್ಟು ಪರಿಶೀಲನೆಗೆ ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯ ಮಾತೃಸಂಸ್ಥೆಯಾದ ಥಿಂಕ್ ಆ್ಯಂಡ್ ಲರ್ನ್‌ನಲ್ಲಿ ತಲೆದೋರಿರುವ ಬಿಕ್ಕಟ್ಟಿನ ಬಗ್ಗೆ ತ್ವರಿತವಾಗಿ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು, ಅಧಿಕಾರಿಗಳಿಗೆ ಸೂಚಿಸಿದೆ.

ಅಧಿಕಾರಿಗಳು ಸಲ್ಲಿಸುವ ವರದಿಯನ್ನು ಪರಾಮರ್ಶೆ ನಡೆಸಿದ ಬಳಿಕ ಕಂಪನಿಗಳ ಕಾಯ್ದೆಯಡಿ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದೆ.

'ಕಳೆದ ವರ್ಷದ ಜುಲೈನಲ್ಲಿಯೇ ಥಿಂಕ್ ಆ್ಯಂಡ್ ಲರ್ನ್ ಸಂಸ್ಥೆಯ ಬಿಕ್ಕಟ್ಟಿನ ಬಗ್ಗೆ ಪರಿಶೀಲನೆ ನಡೆಸುವಂತೆ ಹೈದರಾಬಾದ್‌ನ ಪ್ರಾದೇಶಿಕ ನಿರ್ದೇಶಕರಿಗೆ ಸಚಿವಾಲಯವು ಸೂಚಿಸಿತ್ತು' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮತ್ತೊಂದೆಡೆ ಕೆಲವು ನಿರ್ದಿಷ್ಟ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಬೈಜುಸ್‌ನಲ್ಲಿ ಲೆಕ್ಕ ಪರಿಶೋಧನೆಗೆ ಅನುಸರಿಸಿರುವ ಮಾನದಂಡಗಳ ಬಗ್ಗೆ ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆಯು (ಐಸಿಎಐ) ವರದಿ ಸಿದ್ಧಪಡಿಸುತ್ತಿದೆ ಎಂದು ಅಧ್ಯಕ್ಷ ರಂಜೀತ್ ಕುಮಾರ್ ಅಗರ್ವಾಲ್ ಹೇಳಿದ್ದಾರೆ.

ಇತ್ತೀಚೆಗೆ ಕಂಪನಿಯ ಪ್ರಮುಖ ಹೂಡಿಕೆದಾರರು ಕರೆದಿದ್ದ ಷೇರುದಾರರ ವಿಶೇಷ ಸಾಮಾನ್ಯ ಸಭೆಯಲ್ಲಿ ಕಂಪನಿಯ ಸಿಇಒ ಬೈಜು ರವೀಂದ್ರನ್ ಹಾಗೂ ಅವರ ಕುಟುಂಬದ ಸದಸ್ಯರನ್ನು ಆಡಳಿತ ಮಂಡಳಿಯಿಂದ ಪದಚ್ಯುತಿಗೊಳಿಸುವಂತೆ ನಿರ್ಣಯ ಅಂಗೀಕರಿಸಲಾಗಿದೆ.

'ಹೋಟೆಲ್ ಉದ್ಯಮ ಶೇ 9ರಷ್ಟು ಬೆಳವಣಿಗೆ'

ಕೋಲ್ಕತ್ತ (ಪಿಟಿಐ): 2024–25ನೇ ಹಣಕಾಸು ವರ್ಷದಲ್ಲಿ ದೇಶದ ಹೋಟೆಲ್ ಉದ್ಯಮದ ವರಮಾನವು ಶೇ 7ರಿಂದ ಶೇ 9ರ ವರೆಗೆ ಹೆಚ್ಚಳವಾಗಲಿದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಐಸಿಆರ್‌ಎ ಅಂದಾಜಿಸಿದೆ.

ಲೋಕಸಭಾ ಚುನಾವಣೆ ಸಮಯದ ಹೊರತಾಗಿಯೂ ಪ್ರವಾಸ, ಸಭೆಗಳ ಆಯೋಜನೆಗೆ ಬೇಡಿಕೆ ಹೆಚ್ಚಿದೆ. ಸಮ್ಮೇಳನ ಮತ್ತು ವಸ್ತು ಪ್ರದರ್ಶನಗಳಂತಹ ಕಾರ್ಯಕ್ರಮಗಳು ಈ ವಲಯದ ಬೇಡಿಕೆ ಹೆಚ್ಚಲಿವೆ. 2023–24ನೇ ಹಣಕಾಸು ವರ್ಷದಲ್ಲಿ ಹೋಟೆಲ್ ಕೊಠಡಿಗಳ ಸರಾಸರಿ ದರವು ₹7,200ರಿಂದ ₹7,400ಕ್ಕೆ ಹೆಚ್ಚಳವಾಗುವ ನಿರೀಕ್ಷೆ ಇದೆ. 2024–25ರಲ್ಲಿ ಈ ದರ ₹7,800ರಿಂದ ₹8,000ಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2000-2800
ಮಧ್ಯಮ	₹1600-2000
ಸಣ್ಣ	₹1000-1600

'ಜವಳಿ ವಲಯದ ಅಭಿವೃದ್ಧಿಗೆ ಬದ್ಧ'

₹12 ಲಕ್ಷ ಕೋಟಿ ದಾಟಿದ ಜವಳಿ ಮಾರುಕಟ್ಟೆ ಮೌಲ್ಯ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): '2014ರಲ್ಲಿ ದೇಶದ ಜವಳಿ ವಲಯದ ಮಾರುಕಟ್ಟೆ ಮೌಲ್ಯವು ₹7 ಲಕ್ಷ ಕೋಟಿಗಿಂತಲೂ ಕಡಿಮೆ ಇತ್ತು. ಈಗ ₹12 ಲಕ್ಷ ಕೋಟಿ ದಾಟಿದೆ. ಕಳೆದ ಹತ್ತು ವರ್ಷಗಳಲ್ಲಿ ನೂಲು, ಬಟ್ಟೆ, ಸಿದ್ಧಉಡುಪು ಉತ್ಪಾದನೆಯು ಶೇ25ರಷ್ಟು ಹೆಚ್ಚಳವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಇಲ್ಲಿನ ಭಾರತ ಮಂಟಪಂನಲ್ಲಿ ಸೋಮವಾರ ಆರಂಭವಾದ 'ಭಾರತ್ ಟೆಕ್ಸ್ 2024'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಸರ್ಕಾರವು ಜವಳಿ ವಲಯದ ಅಭಿವೃದ್ಧಿಗೆ ಬದ್ಧವಾಗಿದೆ. 2047ನೇ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮಲು, ಈ ಕ್ಷೇತ್ರದ ಕೊಡುಗೆ ಹೆಚ್ಚಿಸುವತ್ತ ಕೆಲಸ ಮಾಡುತ್ತಿದೆ' ಎಂದರು.

ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ ಭಾರತವನ್ನು 'ವಿಕಸಿತ ಭಾರತ'ವಾಗಿ ರೂಪಿಸುವುದು ಸರ್ಕಾರದ ಗುರಿ. ಬಡವರು, ಯುವಜನರು, ರೈತರು ಹಾಗೂ ಮಹಿಳೆಯರೇ ಈ ವಿಕಸಿತ ಭಾರತದ ಪ್ರಮುಖ ಆಧಾರಸ್ತಂಭಗಳಾಗಿದ್ದಾರೆ. ಜವಳಿ ವಲಯವು ಈ ನಾಲ್ಕು ವರ್ಗಗಳೊಟ್ಟಿಗೆ ಸಂಪರ್ಕ ಬೆಸೆದುಕೊಂಡಿದೆ. ಹಾಗಾಗಿ, ಭಾರತ್ ಟೆಕ್ಸ್ ಕಾರ್ಯಕ್ರಮವು ನಮಗೆ ಬಹುಮುಖ್ಯವಾಗಿದೆ ಎಂದು ತಿಳಿಸಿದರು.

ಹತ್ತು ಮಂದಿ ಸಿದ್ಧಉಡುಪು ತಯಾರಕರಲ್ಲಿ ಏಳು ಮಹಿಳೆಯರು ಇದ್ದಾರೆ. ಕೈಮಗ್ಗ ಉತ್ಪನ್ನಗಳ ತಯಾರಿಕೆಯಲ್ಲಿ ಈ ಸಂಖ್ಯೆ ಹೆಚ್ಚಿದೆ ಎಂದರು.

ದೇಶದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಗಳ ಸಂಖ್ಯೆಯನ್ನು 19ಕ್ಕೆ ಹೆಚ್ಚಿಸಲಾಗಿದೆ. ಸ್ಥಳೀಯ ನೇಕಾರರು ಮತ್ತು ಕುಶಲಕರ್ಮಿಗಳಿಗೆ ಇವುಗಳ ಮೂಲಕ ಕೌಶಲ ತರಬೇತಿ ನೀಡಲಾಗುತ್ತಿದೆ ಎಂದು ವಿವರಿಸಿದರು.

ನವದೆಹಲಿಯ ಭಾರತ ಮಂಟಪಂನಲ್ಲಿ ಸೋಮವಾರದಿಂದ ಆರಂಭವಾದ 'ಭಾರತ್ ಟೆಕ್ಸ್ 2024' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಮಳಿಗೆಯೊಂದಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು –ಪಿಟಿಐ ಚಿತ್ರ

40 ಸಾವಿರ ಮಂದಿ ಭಾಗಿ

ಜವಳಿ ವಲಯದಲ್ಲಿ ವ್ಯಾಪಾರ ಮತ್ತು ಹೂಡಿಕೆಗೆ ಉತ್ತೇಜನ ನೀಡಲು ಭಾರತ್ ಟೆಕ್ಸ್ ಆಯೋಜಿಸಲಾಗಿದೆ. ನಾಲ್ಕು ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮದಲ್ಲಿ 65 ಗೋಷ್ಠಿ ಗಳನ್ನು ಏರ್ಪಡಿಸಲಾಗಿದ್ದು, ಜಾಗತಿಕ ಮಟ್ಟದ 100ಕ್ಕೂ ಹೆಚ್ಚು ತಜ್ಞರು ವಿವಿಧ ವಿಷಯಗಳ ಬಗ್ಗೆ ಮಾತನಾಡಲಿದ್ದಾರೆ.

3,500 ಹೆಚ್ಚು ಪ್ರದರ್ಶಕರು, 100ಕ್ಕೂ ಹೆಚ್ಚು ದೇಶಗಳ ಮೂರು ಸಾವಿರ ಖರೀದಿದಾರರು ಸೇರಿದಂತೆ 40 ಸಾವಿರ ವ್ಯಾಪಾರ ಸಂದರ್ಶಕರು ಪಾಲ್ಗೊಂಡಿದ್ದಾರೆ. ಜವಳಿ ವಿಷಯ ಅಧ್ಯಯನದ ವಿದ್ಯಾರ್ಥಿಗಳು, ನೇಕಾರರು, ಕುಶಲಕರ್ಮಿಗಳು, ಜವಳಿ ಕಾರ್ಮಿಕರು ಭಾಗವಹಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

1ನೇ ವರ್ಷದ ಪುಣ್ಯಸ್ಮರಣೆ

ಸತೀಶ್ ಆರ್.
27-02-2023
ರಾಜಕಲ್ಲಹಳ್ಳಿ ಗ್ರಾಮ, ವೇಮಗಲ್ ಹೋಬಳಿ
ನಿಮ್ಮ ಸವಿನೆನಪಿನಲಿ
ತಾಯಿ : ಸಾಕಮ್ಮ, ಪತ್ನಿ : ಜಯಂತಿ
ಹಾಗೂ ಕುಟುಂಬವರ್ಗದವರು

ಪೇಟಿಎಂ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ವಿಜಯ್ ಶರ್ಮಾ ರಾಜೀನಾಮೆ

ನವದೆಹಲಿ (ಪಿಟಿಐ): ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಲಿಮಿಟೆಡ್‌ನ (ಪಿಪಿಬಿಎಲ್) ಅಧ್ಯಕ್ಷ ಸ್ಥಾನಕ್ಕೆ ವಿಜಯ್ ಶೇಖರ್ ಶರ್ಮಾ ರಾಜೀನಾಮೆ ನೀಡಿದ್ದು, ಆಡಳಿತ ಮಂಡಳಿಯನ್ನು ಪುನರ್ ರಚಿಸಲಾಗಿದೆ.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಮಾಜಿ ಮುಖ್ಯಸ್ಥ ಶ್ರೀನಿವಾಸನ್ ಶ್ರೀಧರ್, ನಿವೃತ್ತ ಐಎಎಸ್ ಅಧಿಕಾರಿಗಳಾದ ದೇಬೇಂದ್ರನಾಥ ಸಾರಂಗಿ, ರಜನಿ ಸೆಖ್ರಿ ಸಿಬಲ್ ಹಾಗೂ ಬ್ಯಾಂಕ್ ಆಫ್ ಬರೋಡಾದ ಮಾಜಿ ಕಾರ್ಯ ನಿರ್ವಾಹಕ ನಿರ್ದೇಶಕ ಅಶೋಕ್ ಕುಮಾರ್ ಗಾರ್ಗ್ ಅವರು, ಆಡಳಿತ ಮಂಡಳಿಗೆ ಸ್ವತಂತ್ರ ನಿರ್ದೇಶಕರಾಗಿ ಸೇರ್ಪಡೆಯಾಗಿದ್ದಾರೆ ಎಂದು ಸೋಮವಾರ ಕಂಪನಿಯು ಷೇರುಪೇಟೆಗೆ ತಿಳಿಸಿದೆ.

'ಶರ್ಮಾ ಅವರು ಕಾರ್ಯ ನಿರ್ವಾಹಕೇತರ ಅಧ್ಯಕ್ಷ ಸ್ಥಾನ ಹಾಗೂ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನದಿಂದ ಕೆಳಗಿಳಿದಿರುವ ಬಗ್ಗೆ ಬ್ಯಾಂಕ್‌ನ ಮಾತೃಸಂಸ್ಥೆಯಾದ ಒನ್ 97 ಕಮ್ಯುನಿಕೇಷನ್ ಲಿಮಿಟೆಡ್‌ಗೂ ಪ್ರತ್ಯೇಕವಾಗಿ ಮಾಹಿತಿ ನೀಡಲಾಗಿದೆ. ಹೊಸ ಅಧ್ಯಕ್ಷರ ನೇಮಕ ಪ್ರಕ್ರಿಯೆ ಆರಂಭಿಸುವ ಬಗ್ಗೆ ನಿರ್ದೇಶಕರಿಗೆ ಪೇಟಿಎಂ ಬ್ಯಾಂಕ್ ಮಾಹಿತಿ ನೀಡಿದೆ' ಎಂದು ವಿವರಿಸಲಾಗಿದೆ.

ಪಿಪಿಬಿಎಲ್ ವೆಬ್‌ಸೈಟ್ ಪ್ರಕಾರ, ಬ್ಯಾಂಕ್ ದೇಶದಲ್ಲಿ 30 ಕೋಟಿ ವ್ಯಾಲೆಟ್‌ಗಳು ಹಾಗೂ 3 ಕೋಟಿ ಗ್ರಾಹಕರನ್ನು ಹೊಂದಿದೆ.

ಪೇಟಿಎಂ ಷೇರಿನ ಮೌಲ್ಯ ಏರಿಕೆ: ಪೇಟಿಎಂನ ಮಾತೃಸಂಸ್ಥೆಯಾದ ಒನ್‌97 ಕಮ್ಯುನಿಕೇಷನ್‌ನ ಷೇರಿನ ಮೌಲ್ಯ ಸೋಮವಾರ ಶೇ 5ರಷ್ಟು ಏರಿಕೆ ಆಗಿದೆ.

ಸೆನ್ಸೆಕ್ಸ್ ಮತ್ತು ನಿಫ್ಟಿಯಲ್ಲಿ ಕ್ರಮವಾಗಿ ಷೇರಿನ ಬೆಲೆ ₹428.10 ಮತ್ತು ₹427.95ಕ್ಕೆ ತಲುಪಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿರುವುದರಿಂದ ಯುಪಿಐ ಬಳಸಿಕೊಂಡು ಬೇರೆ ಬ್ಯಾಂಕ್‌ಗಳಿಗೆ ಪೇಟಿಎಂ ಬ್ಯಾಂಕ್‌ನ ಬಳಕೆದಾರರು ವರ್ಗಾವಣೆ ಆಗುವ ಸಾಧ್ಯತೆ ಬಗ್ಗೆ ಪರಿಶೀಲಿಸುವಂತೆ ಎನ್‌ಪಿಸಿಐಗೆ ಆರ್‌ಬಿಐ ಸೂಚಿಸಿದ್ದರಿಂದ ಷೇರಿನ ಮೌಲ್ಯ ಏರಿಕೆ ಆಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಗೋವಾದಲ್ಲಿ ಮನೆಗೆ ಮಹಿಳಾ ಅಡುಗೆಯವರು ಅಗತ್ಯವಿದೆ. ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗುವುದು. ಕೊಂಕಣಿ/ ಹಿಂದಿ/ ಮರಾಠಿ ಜ್ಞಾನವನ್ನು ಹೊಂದಿರಬೇಕು. ಸಂಬಳ: 8000-10,000. ಸಂಪರ್ಕ: (+91)9168378318 (ಪೂಜಾ).

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Multiple Vacancy

REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9035482999

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

12.04.2024 17.05.2024 ಸಿಂಗಾಪುರ್ ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 12.04.2024 ದುಬೈ,ಅಬುದಾಬಿ 5 ದಿನಗಳು. 12.04.2024 05.05.2024 ಭೂತಾನ್ 8 ದಿನಗಳು. 17.03.2024 12.04.2024 ಶ್ರೀಲಂಕಾ 7 ದಿನಗಳು. 02.04.2024 03.05.2024 29.05.2024 ಅಸ್ಸಾಂ ಅರುಣಾಚಲಪ್ರದೇಶ ಮೇಘಾಲಯ 9 ದಿನಗಳು. 25.03.2024 16.04.2024 ಕಾಶಿ,ಗಯಾ,ಅಯೋಧ್ಯಾ 8 ದಿನಗಳು. 05.04.2024 25.04.2024 14.05.2024 ಶಿಮ್ಲಾ ಕುಲುಮನಾಲಿ 7 ದಿನಗಳು. 21.04.2024 06.05.2024 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 7 ದಿನಗಳು. 15.04.2024 21.05.2024 ನೇಪಾಳ 9 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

16.3.2024 ಮತ್ತು 29.3.2024 ರಿಂದ 5ದಿನ ಕಾಶಿ. ಅಯೋಧ್ಯೆ. ಗಯಾ. ಅಲಹಾಬಾದ್. 23.3.2024 ರಿಂದ 8ದಿನ ಉಜ್ಜಯಿನಿ. ಓಂಕಾರೇಶ್ವರ, ಭೀಮಾಶಂಕರ, ಶಿರಡಿ, ತುಳಜಾಪುರ, ಎಲ್ಲೋರ, ಪಂಡರಾಪುರ. 28.3.2024 ರಿಂದ 4ದಿನ ರಾಮೇಶ್ವರ- ಕನ್ಯಾಕುಮಾರಿ- ಮಧುರೈ- ಶ್ರೀರಂಗ.21.4.2024 ರಿಂದ 10 ದಿನ, ವೈಷ್ಣೋದೇವಿ. ದೆಹಲಿ, ಕುಲುಮನಾಲಿ, ವಾಘಾಬಾರ್ಡರ್. 27.4.2024 ರಿಂದ 4ದಿನ, ಧರ್ಮಸ್ಥಳ- ಹೊರನಾಡು- ಕೊಲ್ಲೂರು ಮೂಕಾಂಬಿಕೆ, ಸಿಗಂದೂರು. 28.4.2024 ರಿಂದ 4ದಿನ ತಿರುನಲ್ಲಾರ್. ಚಿದಂಬರಂ, ತಂಜಾವೂರು, ಶ್ರೀರಂಗ. 7.5.2024 ರಿಂದ 7ದಿನ ಸಿಂಗಾಪುರ- ಮಲೇಷಿಯಾ, 12.6.2024 ರಿಂದ 13ದಿನ ಚಾರ್‌ದಾಮ್ ಪ್ರವಾಸ ಕೇದಾರನಾಥ, ಬದರೀನಾಥ, ಇತರೆ ಸ್ಥಳಗಳು. ಶ್ರೀಗುರುರಾಜ ಟ್ರಾವಲ್ಸ್: ಕೋಲಾರ. 9900124333, 9611082432, 8123099913

8 ದಿನಗಳ ಸೌತ್‌ಆಫ್ರಿಕಾ 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್ 7 ದಿನಗಳ ಜಪಾನ್, 7 ದಿನಗಳ ಶ್ರೀಲಂಕಾ, 6 ದಿನಗಳ ಕಾಶ್ಮೀರ, 8 ದಿನಗಳ ಭೂತಾನ್ 5 ದಿನಗಳ ಬಾಕು ಭಟ್ ಟ್ರಾವೆಲ್ಸ್: 9844166555/ 9844037295

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9886213331 : 9901641752
9845114560 : 9731810277
080 - 45557163 / 164
E-mail: dhclassifieds@deccanherald.co.in

ಬ್ಯಾರೇಜ್ ನಿರ್ಮಾಣ ಪೂರ್ಣ ಪಾಕ್‌ಗೆ ರಾವಿ ನದಿ ನೀರು ಸ್ಥಗಿತ

ಪ್ರಜಾವಾಣಿ ವಾರ್ತೆ

ಶ್ರೀನಗರ: ಇಲ್ಲಿನ ಶಾಹ್‌ಪುರ್–ಕಂಡಿ ಬ್ಯಾರೇಜ್ ನಿರ್ಮಾಣ ಪೂರ್ಣಗೊಂಡಿದ್ದು, ಈ ಮೂಲಕ ರಾವಿ ನದಿಯಿಂದ ಪಾಕಿಸ್ತಾನ ಅಭಿಮುಖವಾಗಿ ನೀರಿನ ಹರಿವು ತಡೆಯಲಾಗಿದೆ. ಕಠುವಾ ಮತ್ತು ಸಾಂಬಾ ಜಿಲ್ಲೆಗಳಲ್ಲಿ 32,000 ಹೆಕ್ಟೇರ್ ಭೂಮಿ ನೀರಾವರಿ ಸೌಲಭ್ಯಕ್ಕೆ ಒಳಪಡಲಿದೆ.

ಶಾಹ್‌ಪುರ್–ಕಂಡಿ ಬ್ಯಾರೇಜ್‌ನ ನೀರಾವರಿ ಮತ್ತು ಜಲವಿದ್ಯುತ್ ಉತ್ಪಾದನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಈ ಕುರಿತ ವರದಿ ತಿಳಿಸಿದೆ. ಬ್ಯಾರೇಜ್‌ನ ನಿರ್ಮಾಣ ಕಾರ್ಯಕ್ಕೆ ಕಳೆದ ಮೂರು ದಶಕಗಳಲ್ಲಿ ಹಲವು ತೊಡಕುಗಳು ಎದುರಾಗಿದ್ದವು.

1995ರಲ್ಲಿ ಆಗಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಶಂಕುಸ್ಥಾಪನೆ ನೆರವೇರಿಸಿದ್ದರು. ಬ್ಯಾರೇಜ್ ನಿರ್ಮಾಣಕ್ಕೆ ಜಮ್ಮು ಕಾಶ್ಮೀರ ಹಾಗೂ ಪಂಜಾಬ್ ಸರ್ಕಾರಗಳ ನಡುವೆ ವಿವಾದವಿತ್ತು. 2018ರ ಡಿಸೆಂಬರ್‌ನಲ್ಲಿ ಕೇಂದ್ರದ ಸಮ್ಮತಿಯೊಂದಿಗೆ ನಿರ್ಮಾಣ ಪುನರಾರಂಭವಾಗಿತ್ತು.

ಮೂಲಗಳನ್ನು ಉಲ್ಲೇಖಿಸಿ ಸ್ಥಳೀಯ ಇಂಗ್ಲಿಷ್ ದೈನಿಕ 'ಡೈಲಿ ಎಕ್ಸೆಲ್ಸಿಯರ್' ವರದಿ ಮಾಡಿರುವಂತೆ, ಬ್ಯಾರೇಜ್ ನಿರ್ಮಾಣ ಕಾರ್ಯ ಈಗ ಪೂರ್ಣಗೊಳ್ಳುವ ಮೂಲಕ ಶಾಹ್‌ಪುರ್ ಭಾಗದಿಂದ ನೀರು ಹರಿಯುವಿಕೆಯು ತಗ್ಗಿದೆ.

1960ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಆಗಿದ್ದ ಇಂಡಸ್ ಜಲ ಒಪ್ಪಂದದ (ಐಡಬ್ಲ್ಯೂಟಿ) ಪ್ರಕಾರ ರಾವಿ, ಸಟ್ಲೆಜ್, ಬಿಯಾಸ್ ನದಿಗಳ ನೀರಿನ ಮೇಲೆ ಭಾರತಕ್ಕೆ ವಿಶೇಷ ಹಕ್ಕಿದೆ. ಇಂಡಸ್. ಝೀಲಂ, ಚೆನಾಬ್ ನದಿಗಳ ನೀರಿನ ಮೇಲೆ ಪಾಕಿಸ್ತಾನಕ್ಕೆ ಹಕ್ಕಿದೆ.

ಈ ಒಪ್ಪಂದದ ಅನುಸಾರ, ಭಾರತವು ರಾವಿ ನದಿ ನೀರಿನ ಪೂರ್ಣ ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ. ಈ ಹಿಂದೆ ರಾವಿ ನದಿಯ ನೀರು ಹಳೆಯ ಲಖಾನ್‌ಪುರ್ ಅಣೆಕಟ್ಟಿನ ಮೂಲಕ ಪಾಕಿಸ್ತಾನ ಅಭಿಮುಖವಾಗಿ ಹರಿದು ಹೋಗುತ್ತಿತ್ತು.

ಬ್ಯಾರೇಜ್ ನಿರ್ಮಾಣ ಪೂರ್ಣಗೊಂಡಿರುವುದರಿಂದ ನೀರಾವರಿ ಜೊತೆಗೆ 206 ಮೆಗಾವಾಟ್ ವಿದ್ಯುತ್ ಉತ್ಪಾದನೆಗೂ ಸಹಕಾರಿಯಾಗಲಿದೆ. ಉತ್ಪಾದನೆಯಾಗುವ ವಿದ್ಯುತ್‌ನ ಹೆಚ್ಚಿನ ಅನುಕೂಲ ಪಂಜಾಬ್‌ಗೆ ಸಿಗಲಿದೆ ಎಂದು ವರದಿಯು ತಿಳಿಸಿದೆ.

ಟಿಟಿಡಿ: ಗೌರವ ಪ್ರಧಾನ ಅರ್ಚಕ ವಜಾ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಮಲ ತಿರುಪತಿ ದೇವಸ್ಥಾನಗಳ (ಟಿಟಿಡಿ) ಅಧಿಕಾರಿಗಳು ಮತ್ತು ಇತರ ಅರ್ಚಕರನ್ನು ಟೀಕಿಸಿದ ಆರೋಪ ಎದುರಿಸುತ್ತಿರುವ ಗೌರವ ಪ್ರಧಾನ ಅರ್ಚಕ ರಮಣ ದೀಕ್ಷಿತುಲು ಅವರನ್ನು ಸೇವೆಯಿಂದ ವಜಾಗೊಳಿಸಿದೆ.

ಸೋಮವಾರ ನಡೆದ ಟಿಟಿಡಿ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ದೀಕ್ಷಿತುಲು ಅವರು ಟಿಟಿಡಿ ಅಧಿಕಾರಿಗಳು ಮತ್ತು ಅರ್ಚಕರ ವಿರುದ್ಧ ಆರೋಪ ಮಾಡಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ತಿರುಪತಿ ತಿರುಮಲ ದೇವಸ್ಥಾನದಲ್ಲಿ ಧಾರ್ಮಿಕ ವಿಧಿಗಳು ಆಗಮ ಶಾಸ್ತ್ರಗಳ ಪ್ರಕಾರ ನಡೆಯುತ್ತಿಲ್ಲ. ದೇವಸ್ಥಾನದ ಆವರಣದಲ್ಲಿ ಅನಧಿಕೃತವಾಗಿ ಕೆಲವು ಕಾಮಗಾರಿಗಳು ನಡೆಯುತ್ತಿವೆ. ತಿರುಮಲದಲ್ಲಿ ಕ್ರೈಸ್ತ ಧರ್ಮ ತೀವ್ರವಾಗಿ ವ್ಯಾಪಿಸುತ್ತಿದೆ ಎಂದು ಹೇಳಿರುವುದು ವಿಡಿಯೊದಲ್ಲಿದೆ. 'ವಿಡಿಯೊವನ್ನು ತಿರುಚಲಾಗಿದ್ದು, ನಾನು ಯಾರ ವಿರುದ್ಧ ಆರೋಪ ಮಾಡಿಲ್ಲ' ಎಂದು ದೀಕ್ಷಿತುಲು ಹೇಳಿದ್ದರು.

ವಯನಾಡು: ಸಿಪಿಐ ಸ್ಪರ್ಧೆ

ತಿರುವನಂತಪುರ (ಪಿಟಿಐ): ಕೇರಳದ ಆಡಳಿತಾರೂಢ ಎಲ್‌ಡಿಎಫ್ ಮೈತ್ರಿ ಕೂಟದ ಎರಡನೇ ದೊಡ್ಡ ಪಕ್ಷ ಎನಿಸಿರುವ ಸಿಪಿಐ, ಮುಂಬರುವ ಲೋಕಸಭಾ ಚುನಾವಣೆಗೆ ನಾಲ್ಕು ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರತಿನಿಧಿಸುತ್ತಿರುವ ವಯನಾಡು ಕ್ಷೇತ್ರದಲ್ಲಿ ಹಿರಿಯ ನಾಯಕಿ ಆನಿ ರಾಜಾ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿದೆ. ಸಿಪಿಐ ಪಕ್ಷದ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಅವರ ಪತ್ನಿ ಆನಿ, ಸಿಪಿಐ ಮಹಿಳಾ ಘಟಕದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.

ಇನ್ನೊಬ್ಬ ಹಿರಿಯ ನಾಯಕ ಮತ್ತು ಮಾಜಿ ಸಂಸದ ಪಣ್ಯನ್ ರವೀಂದ್ರನ್ ಅವರು ತಿರುವಂತಪುರ ಕ್ಷೇತ್ರದಲ್ಲಿ ಕಣಕ್ಕಿಳಿಯಲಿದ್ದಾರೆ. ಈ ಕ್ಷೇತ್ರವನ್ನು ಕಾಂಗ್ರೆಸ್‌ನ ಶಶಿ ತರೂರ್ ಪ್ರತಿನಿಧಿಸುತ್ತಿದ್ದಾರೆ.

ಮಾಜಿ ಕೃಷಿ ಸಚಿವ ವಿ.ಎಸ್.ಸುನಿಲ್ ಕುಮಾರ್ ಮತ್ತು ಪಕ್ಷದ ಯೂತ್ ವಿಂಗ್ ಎಐವೈಎಫ್‌ನ ನಾಯಕ ಸಿ.ಎ.ಅರುಣ್‌ಕುಮಾರ್ ಅವರು ಕ್ರಮವಾಗಿ ತ್ರಿಶ್ಶೂರ್ ಹಾಗೂ ಮಾವೇಲಿಕ್ಕರ ಕ್ಷೇತ್ರದಿಂದ ಸ್ಪರ್ಧಿಸುವರು ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಬಿನೊಯ್ ವಿಶ್ವಮ್ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು.

ನನ್ನಿಂದ ತಪ್ಪಾಗಿದೆ: 'ಸುಪ್ರೀಂ'ಗೆ ಕೇಜ್ರಿವಾಲ್

ನವದೆಹಲಿ (ಪಿಟಿಐ): ಬಿಜೆಪಿ ಐಟಿ ಸೆಲ್‌ಗೆ ಸಂಬಂಧಿಸಿದ ಮಾನಹಾನಿಕರ ಎನ್ನಲಾದ ವಿಡಿಯೊವನ್ನು ಮರುಟ್ವೀಟ್ ಮಾಡಿ ತಪ್ಪೆಸಗಿರುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದ್ದಾರೆ.

ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯೊಂದರಲ್ಲಿ ತಮಗೆ ನೀಡಲಾಗಿದ್ದ ಸಮನ್ಸ್ ಅನ್ನು ಎತ್ತಿಹಿಡಿದ ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತಾ ಅವರಿದ್ದ ಪೀಠವು ನಡೆಸಿತು.

7ನೇ ಬಾರಿ ಗೈರು: ಅಬಕಾರಿ ನೀತಿ ಹಗರಣದ ಜತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ ವಿಚಾರಣೆಗೆ ಸತತ ಏಳನೇ ಬಾರಿಯೂ ಅರವಿಂದ ಕೇಜ್ರಿವಾಲ್ ಗೈರು ಹಾಜರಾದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪಾಕ್‌ನ ಪಂಜಾಬ್ ಪ್ರಾಂತ್ಯ ಮರಿಯಂಗೆ ಮುಖ್ಯಮಂತ್ರಿ ಪಟ್ಟ

ಲಾಹೋರ್ (ಪಿಟಿಐ): ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಪುತ್ರಿ, ಪಿಎಂಎಲ್–ಎನ್ ಹಿರಿಯ ನಾಯಕಿ ಮರಿಯಂ ನವಾಜ್ ಅವರು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮೊದಲ ಮಹಿಳಾ ಮುಖ್ಯಮಂತ್ರಿಯಾಗಿದ್ದು, ಸೋಮವಾರ ಪ್ರಮಾಣವಚನ ಸ್ವೀಕರಿಸಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ನಡೆದ ಚುನಾವಣೆಯನ್ನು ಮಾಜಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಕ್ಷದ ಬೆಂಬಲಿತ ಸುನ್ನಿ ಇತ್ತೇಹಾದ್ ಕೌನ್ಸಿಲ್‌ನ (ಎಸ್‌ಐಸಿ) ಶಾಸಕರು ಬಹಿಷ್ಕರಿಸಿದರು. ಈ ವಿದ್ಯಮಾನದ ನಡುವೆಯೇ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಪಾಕಿಸ್ತಾನ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಪಕ್ಷದ ಹಿರಿಯ ಉಪಾಧ್ಯಕ್ಷೆ ಮರಿಯಂ (50) ಗೆಲುವು ಸಾಧಿಸಿದರು.

ಪಿಟಿಐ ಬೆಂಬಲಿತ ಎಸ್‌ಐಸಿ ಪಕ್ಷದ ರಾಣಾ ಅಫ್ತಾಬ್ ಅವರನ್ನು ಸೋಲಿಸಿದ ಮರಿಯಂ, ರಾಜಕೀಯವಾಗಿ ನಿರ್ಣಾಯಕ ಪಾತ್ರ ವಹಿಸಲಿರುವ ಹಾಗೂ 12 ಕೋಟಿ ಜನಸಂಖ್ಯೆ ಇರುವ ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿಯಾಗಿ ಆಯ್ಕೆಯಾದರು.

'ನಮ್ಮ ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಿಳೆಯೊಬ್ಬರು ಪಂಜಾಬ್‌ನ ಮುಖ್ಯಮಂತ್ರಿಯಾಗಲಿದ್ದಾರೆ. ಮರಿಯಂ ನವಾಜ್ ಪಂಜಾಬ್‌ನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ' ಎಂದು ಚುನಾವಣೆಗೂ ಮುನ್ನವೇ, ಪಿಎಂಎಲ್–ಎನ್ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿತ್ತು.

ಪ್ಯಾಲೆಸ್ಟೀನ್ ಪ್ರಧಾನಿ ರಾಜೀನಾಮೆ

ಜೆರುಸಲೇಂ(ಎಪಿ): ಪ್ಯಾಲೆಸ್ಟೀನ್ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವುದಾಗಿ ಮೊಹಮ್ಮದ್ ಅಶ್ತಯೀ ತಿಳಿಸಿದ್ದಾರೆ. ಅಶ್ತಯೀ ಅವರ ಈ ನಡೆಯು ಪ್ಯಾಲೆಸ್ಟೀನ್ ಪ್ರಾಧಿಕಾರದಲ್ಲಿ ಅಮೆರಿಕ ಬೆಂಬಲಿತ ಸುಧಾರಣಾ ಕ್ರಮಗಳಿಗೆ ಅನುವು ಮಾಡಿಕೊಡಬಹುದು ಎಂದು ನಿರೀಕ್ಷಿಸಲಾಗಿದೆ.

ಅಶ್ತಯೀ ಅವರು ಸೋಮವಾರ ಸಲ್ಲಿಸಿರುವ ರಾಜೀನಾಮೆಯನ್ನು ಒಪ್ಪಬೇಕೋ ಬೇಡವೋ ಎಂಬುದನ್ನು ಅಧ್ಯಕ್ಷ ಮಹಮೂದ್ ಅಬ್ಬಾಸ್ ಅವರು ತೀರ್ಮಾನಿಸಬೇಕಿದೆ. ಪಾಶ್ಚಿಮಾತ್ಯ ದೇಶಗಳ ಬೆಂಬಲ ಇರುವ ಪ್ಯಾಲೆಸ್ಟೀನ್ ನಾಯಕತ್ವವು, ಪ್ಯಾಲೆಸ್ಟೀನ್ ಪ್ರಾಧಿಕಾರಕ್ಕೆ ಮತ್ತೆ ಚೈತನ್ಯ ತುಂಬಲು ಅಗತ್ಯವಿರುವ ಸುಧಾರಣೆಗಳನ್ನು ತರುವಂತಹ ಬದಲಾವಣೆಗಳಿಗೆ ಸಿದ್ಧವಿದೆ ಎಂಬುದನ್ನು ಅವರ ರಾಜೀನಾಮೆಯು ಸೂಚಿಸುತ್ತಿದೆ.

ಕೇಂದ್ರ ಸರ್ಕಾರದಿಂದ ಯುವಜನರಿಗೆ 'ಘೋರ ಅನ್ಯಾಯ': ಕಾಂಗ್ರೆಸ್ ಆರೋಪ

ಅಧಿಕಾರಕ್ಕೇರಿದರೆ 'ಅಗ್ನಿಪಥ' ರದ್ದು

ನವದೆಹಲಿ (ಪಿಟಿಐ): ಸೈನಿಕರ ನೇಮಕಾತಿಗಾಗಿ ಜಾರಿಗೆ ತರಲಾಗಿರುವ 'ಅಗ್ನಿಪಥ' ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿರುವ ಕಾಂಗ್ರೆಸ್, ಈ ವ್ಯವಸ್ಥೆಯಿಂದ ಯುವಜನರಿಗೆ 'ಘೋರ ಅನ್ಯಾಯ' ಆಗಿದೆ ಎಂದು ಆರೋಪಿಸಿದೆ.

ಮಲ್ಲಿಕಾರ್ಜುನ ಖರ್ಗೆ

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ 'ಅಗ್ನಿಪಥ' ಯೋಜನೆ ರದ್ದುಗೊಳಿಸಿ ಹಳೆಯ ನೇಮಕಾತಿ ವ್ಯವಸ್ಥೆಯನ್ನು ಮರುಸ್ಥಾಪಿಸುವುದಾಗಿಯೂ ಸೋಮವಾರ ಘೋಷಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಸಂಬಂಧ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದು, ಹಳೆಯ ನೇಮಕಾತಿ ವ್ಯವಸ್ಥೆಯಡಿ ಸೇನೆಗೆ ಸೇರಲು ಬಯಸಿದ್ದ ಲಕ್ಷಾಂತರ ಯುವಜನರಿಗೆ 'ಅಗ್ನಿಪಥ' ಯೋಜನೆಯಿಂದ ಅನ್ಯಾಯ ಆಗಿದೆ. ಅವರಿಗೆ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

'2019ರಿಂದ 2022ರ ವರೆಗೆ ಸುಮಾರು ಎರಡು ಲಕ್ಷ ಯುವ-ಯುವತಿಯರು ಕಠಿಣ ದೈಹಿಕ ಪರೀಕ್ಷೆ ಮತ್ತು ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸೇನೆಗೆ ಸೇರಲು ಅರ್ಹತೆ ಗಳಿಸಿದ್ದರು. ತಮ್ಮ ಕನಸು ಕೊನೆಗೂ ಈಡೇರಲಿದೆ ಎಂದು ನಂಬಿದ್ದ ಅವರು ನೇಮಕಾತಿ ಪತ್ರಕ್ಕಾಗಿ ಕಾಯುತ್ತಿದ್ದರು. ಆದರೆ 2022ರ ಮೇ 31 ರಂದು ಕೇಂದ್ರ ಸರ್ಕಾರವು 'ಅಗ್ನಿಪಥ' ಯೋಜನೆಯನ್ನು ಘೋಷಿಸುವುದರೊಂದಿಗೆ ಅವರ ಕನಸು ನುಚ್ಚುನೂರಾಯಿತು' ಎಂದು ಪತ್ರದಲ್ಲಿ ಬರೆದಿದ್ದಾರೆ.

'ನಮ್ಮ ಯುವಕರು ಈ ರೀತಿ ಸಂಕಟ ಅನುಭವಿಸಲು ಬಿಡುವುದಿಲ್ಲ. ನ್ಯಾಯ ದೊರಕಿಸಿಕೊಡುವಂತೆ ನಿಮ್ಮಲ್ಲಿ ಮನವಿ ಮಾಡುತ್ತೇನೆ' ಎಂದು ಕೋರಿದ್ದಾರೆ.

'ಅಗ್ನಿಪಥ' ಹಲವು ಲೋಪಗಳಿಂದ ಕೂಡಿದೆ ಎಂದಿರುವ ಖರ್ಗೆ, 'ಈ ಯೋಜನೆ ಬಗ್ಗೆ ಸೇನೆಯು ಅತೃಪ್ತಿ ವ್ಯಕ್ತಪಡಿಸಿತ್ತು. ನೌಕಾಪಡೆ ಮತ್ತು ವಾಯುಪಡೆಗೆ ಇದು ಅನಿರೀಕ್ಷಿತವಾಗಿತ್ತು ಎನ್ನುವುದನ್ನು ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ.ನರವಣೆ ಅವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ' ಎಂಬ ಅಂಶವನ್ನೂ ಉಲ್ಲೇಖಿಸಿದ್ದಾರೆ.

'ಅಷ್ಟೇ ಅಲ್ಲದೆ, ಈ ಯೋಜನೆಯು ವೇತನ ಮತ್ತು ಸೌಲಭ್ಯಗಳ ವಿಚಾರದಲ್ಲಿ ಸೈನಿಕರ ನಡುವೆ ತಾರತಮ್ಯಕ್ಕೆ ಕಾರಣವಾಗಿದೆ. ಸೇನೆಯಲ್ಲಿ ಒಂದೇ ರೀತಿಯ ಜವಾಬ್ದಾರಿ ನಿರ್ವಹಿಸುವವರಿಗೂ ಭಿನ್ನ ರೀತಿಯ ವೇತನ, ಸೌಲಭ್ಯಗಳು ದೊರೆಯುತ್ತವೆ. ನಾಲ್ಕು ವರ್ಷಗಳ ಕರ್ತವ್ಯ ಪೂರ್ಣಗೊಳಿಸಿ ಸೇನೆಯಿಂದ ಹೊರಬಂದ ಬಳಿಕ ಅವರು ಹೊಸ ಉದ್ಯೋಗ ಕಂಡುಕೊಳ್ಳಲು ಪರದಾಡಬೇಕಾಗುತ್ತದೆ' ಎಂದು ವಿವರಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಖರ್ಗೆ ಬರೆದಿರುವ ಪತ್ರವನ್ನು 'ಎಕ್ಸ್' ಖಾತೆಯಲ್ಲಿ ಟ್ಯಾಗ್ ಮಾಡಿದ್ದು, 'ಅಗ್ನಿಪಥ' ಯೋಜನೆಯಿಂದ ಲಕ್ಷಾಂತರ ಯುವಕರಿಗೆ ಅನ್ಯಾಯ ಆಗಿದೆ ಎಂದು ದೂರಿದ್ದಾರೆ.

ಮುಖ್ಯಾಂಶಗಳು

- ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಖರ್ಗೆ ಪತ್ರ
- ಯುವಜನರಿಗೆ ನ್ಯಾಯ ದೊರಕಿಸಿಕೊಡಲು ಆಗ್ರಹ
- 2 ಲಕ್ಷ ಯುವಕ-ಯುವತಿಯರ ಕನಸು ಭಗ್ನ: ಆರೋಪ

ಬಿಜೆಪಿ ಸರ್ಕಾರವು ಅಗ್ನಿಪಥ ಯೋಜನೆ ಜಾರಿಗೆ ತಂದು ದೇಶದ ಲಕ್ಷಾಂತರ ಯುವಜನರ ಕನಸನ್ನು ನುಚ್ಚುನೂರು ಮಾಡಿದೆ
ಪ್ರಿಯಾಂಕಾ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಸೇನೆಗೆ ಸೇರಲು ಬಯಸುವ ಆಕಾಂಕ್ಷಿಗಳ ನ್ಯಾಯಕ್ಕಾಗಿ ನಡೆಸುತ್ತಿರುವ ಹೋರಾಟಕ್ಕೆ ನಾವು ಸಾಥ್ ನೀಡುತ್ತೇವೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ರಷ್ಯಾ ಸೇನೆಯಲ್ಲಿ ಸಿಲುಕಿದ್ದ ಕೆಲ ಭಾರತೀಯರ ಬಿಡುಗಡೆ: ಕೇಂದ್ರ

ನವದೆಹಲಿ (ಪಿಟಿಐ): ಭಾರತದ ಒತ್ತಡದ ಹಿಂದೆಯೇ ರಷ್ಯಾದ ಸೇನೆಗೆ ಸಹಾಯಕ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಹಲವು ಭಾರತೀಯರನ್ನು ಸೇವೆಯಿಂದ ಬಿಡುಗಡೆ ಗೊಳಿಸಲಾಗಿದೆ.

ಈ ಕುರಿತು ಹೇಳಿಕೆ ನೀಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯವು, 'ಭಾರತೀಯರ ತ್ವರಿತ ಬಿಡುಗಡೆ ಬೇಡಿಕೆಯನ್ನು ಸರ್ಕಾರ ಆದ್ಯತೆಯಾಗಿ ಪರಿಗಣಿಸಿದ್ದು, ಈ ನಿಟ್ಟಿನಲ್ಲಿ ಸಕ್ರಿಯವಾಗಿದೆ ಎಂದು ಸ್ಪಷ್ಟಪಡಿಸಿದೆ.

ಮಾಧ್ಯಮ ವರದಿಗಳ ಪ್ರಕಾರ, ರಷ್ಯಾ ಸೇನೆಯಲ್ಲಿ ಭದ್ರತಾ ಸಹಾಯಕರಾಗಿ ಹಲವು ಭಾರತೀಯರು ಕೆಲಸ ಮಾಡುತ್ತಿದ್ದಾರೆ. ಇವರ ಮೇಲೆ ಯುದ್ಧದಲ್ಲಿ ಒತ್ತಡ ಹೇರಲಾಗುತ್ತಿದೆ.

ರಷ್ಯಾ ಸೇನೆಯಲ್ಲಿ ಭಾರತೀಯರು ಕೆಲಸ ಮಾಡುತ್ತಿರುವ ಕುರಿತು ನಾವು ಮಾಧ್ಯಮಗಳಲ್ಲಿ ಅಸ್ಪಷ್ಟ ವರದಿಗಳನ್ನು ಗಮನಿಸಿದ್ದೇವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ಇಂತಹ ಪ್ರಕರಣಗಳನ್ನು ಮಾಸ್ಕೊದಲ್ಲಿನ ಭಾರತದ ರಾಯಭಾರ ಕಚೇರಿ ಗಮನಕ್ಕೆ ತರಲಾಗಿದೆ. ಆ ಮೂಲಕ ರಷ್ಯಾ ಸರ್ಕಾರದ ಜೊತೆ ಚರ್ಚಿಸುತ್ತಿದ್ದು, ನವದೆಹಲಿಯ ರಷ್ಯಾ ರಾಯಭಾರ ಕಚೇರಿ ಗಮನವನ್ನು ಸೆಳೆಯಲಾಗಿದೆ ಎಂದಿದೆ.

'ಇಂತಹ ಮಾತುಕತೆಗಳ ಪರಿಣಾಮವಾಗಿ ರಷ್ಯಾ ಸೇನೆಯಲ್ಲಿ ಸಿಲುಕಿದ್ದ ಹಲವು ಭಾರತೀಯರು ಈಗಾಗಲೇ ಬಿಡುಗಡೆಗೊಂಡಿದ್ದಾರೆ' ಎಂದು ಸಚಿವಾಲಯವು ತಿಳಿಸಿದೆ.

ಈ ಸಂಬಂಧ ಕೆಲ ವಾರ ಪ್ರತಿಕ್ರಿಯಿಸಿದ್ದ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು, 'ಇಂತಹ ವಿಕ್ಷಿಪ್ತಗಳಿಂದ ಆದಷ್ಟು ದೂರ ಇರಬೇಕು' ಎಂದು ಭಾರತೀಯ ಪ್ರಜೆಗಳಿಗೆ ಮನವಿ ಮಾಡಿದ್ದರು.

ಭಾರತೀಯ ತ್ವರಿತ ಬಿಡುಗಡೆಗೆ ಕ್ರಮವಹಿಸಬೇಕು ಎಂದು ಎಐಎಂಐಎಂ ನಾಯಕ ಅಸಾದುದ್ದೀನ್ ಒವೈಸಿ ಅವರು ಈ ಮೊದಲು ಆಗ್ರಹಪಡಿಸಿದ್ದರು.

ಡಬ್ಲ್ಯುಟಿಒ ಒಪ್ಪಂದದಿಂದ ಕೃಷಿ ವಲಯ ಕೈಬಿಡಲು ಆಗ್ರಹ

ರೈತರ ಪ್ರತಿಭಟನೆ ಇನ್ನಷ್ಟು ಚುರುಕು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷಿ ವಲಯವನ್ನು ವಿಶ್ವ ವಾಣಿಜ್ಯ ಸಂಘಟನೆ (ಡಬ್ಲ್ಯುಟಿಒ) ಒಪ್ಪಂದದಿಂದ ಕೈಬಿಡಬೇಕು ಎಂದು ಆಗ್ರಹಿಸಿ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ರೈತರು ಮತ್ತೆ ಬೀದಿಗಿಳಿದಿದ್ದು, ಬೇಡಿಕೆ ಈಡೇರಿಕೆಗೆ ಒತ್ತಡ ಹೇರಲು ಪ್ರಮುಖ ಹೆದ್ದಾರಿಗಳಲ್ಲಿ ಟ್ರ್ಯಾಕ್ಟರ್‌ಗಳನ್ನು ನಿಲುಗಡೆ ಮಾಡಿದ್ದರು.

2020–21ನೇ ಸಾಲಿನಲ್ಲಿ ರೈತರ ಬೃಹತ್ ಪ್ರತಿಭಟನೆಯನ್ನು ಯಶಸ್ವಿಯಾಗಿ ಮುನ್ನಡೆಸಿದ್ದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ), ಸೋಮವಾರ ಮಧ್ಯಾಹ್ನ 12 ರಿಂದ 3 ಗಂಟೆಯವರೆಗೂ 'ಡಬ್ಲ್ಯೂಟಿಒ ತೊಲಗಿಸಿ' ಪ್ರತಿಭಟನೆಗೆ ಕರೆ ನೀಡಿತ್ತು.

ಈ ಅವಧಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳುದ್ದಕ್ಕೂ ಟ್ರ್ಯಾಕ್ಟರ್‌ಗಳನ್ನು ನಿಲ್ಲಿಸಿ ಗಮನಸೆಳೆದವು. ಇದರಿಂದಾಗಿ ಪ್ರಮುಖ ಹೆದ್ದಾರಿಗಳಲ್ಲಿ ವಾಹನಗಳ ಸಂಚಾರ ತೀವ್ರ ವ್ಯತ್ಯಯಗೊಂಡಿತ್ತು.

ಈ ಮಧ್ಯೆ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಸಿಗುವಂತೆ ಕಾಯ್ದೆಯ ಖಾತರಿ ಒದಗಿಸಬೇಕು ಎಂಬುದೂ ಸೇರಿ ವಿವಿಧ ಬೇಡಿಕೆಗಳ ಕುರಿತು ಗಮನಸೆಳೆಯಲು ಕೆಲ ರೈತರು ಉತ್ತರ ಪ್ರದೇಶದ ಯಮುನಾ ಎಕ್ಸ್‌ಪ್ರೆಸ್‌ವೇನಲ್ಲಿ ಟ್ರ್ಯಾಕ್ಟರ್ ರ್‍ಯಾಲಿ ನಡೆಸಿದರು.

'ದೆಹಲಿ ಚಲೋ' ಪ್ರತಿಭಟನೆಯ ಭಾಗವಾಗಿ ರೈತರು ಸೋಮವಾರ ಪಂಜಾಬ್ –ಹರಿಯಾಣ ನಡುವಿನ ಶಂಭು ಗಡಿಯಲ್ಲಿ ಧರಣಿ ನಡೆಸಿದ್ದು, ಕಾರ್ಪೊರೇಟ್ ಕಂಪನಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. –ಪಿಟಿಐ ಚಿತ್ರ

ಇನ್ನೊಂದೆಡೆ, ಇದೇ ಬೇಡಿಕೆಗಳ ಈಡೇರಿಕೆಗೆ ಆಗ್ರಹಪಡಿಸುತ್ತಿರುವ ರೈತರು 'ದೆಹಲಿ ಚಲೋ' ಪ್ರತಿಭಟನೆಯ ಭಾಗವಾಗಿ ಈಗಾಗಲೇ ಸಾವಿರಾರು ಸಂಖ್ಯೆಯಲ್ಲಿ ಪಂಜಾಬ್ ಮತ್ತು ಹರಿಯಾಣ ನಡುವಿನ ಖನೌರಿ ಮತ್ತು ಶಂಭು ಗಡಿ ಭಾಗದಲ್ಲಿ ಬೀಡುಬಿಟ್ಟಿದ್ದಾರೆ.

'ದೆಹಲಿ ಚಲೋ' ಪ್ರತಿಭಟನೆಗೆ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ), ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ಕರೆ ನೀಡಿವೆ. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಸಿಗುವಂತ ಕಾನೂನು ಖಾತರಿ ನೀಡಬೇಕು ಎಂಬುದು ಈ ಎರಡೂ ಸಂಘಟನೆಗಳ ಪ್ರಮುಕ ಬೇಡಿಕೆಯಾಗಿದೆ.

ಪಂಜಾಬ್‌ನ ಪ್ರತಿಭಟನ ನಿರತ ರೈತರು ಹರಿಯಾಣದ ಗಡಿ ಭಾಗವಾದ ಶಂಭು ಮತ್ತು ಖನೌರಿಯಲ್ಲಿ ಫೆಬ್ರುವರಿ 13ರಿಂದಲೂ ಬೀಡುಬಿಟ್ಟಿದ್ದಾರೆ. ಫೆಬ್ರುವರಿ 29ರವರೆಗೂ ಈ ಗಡಿಗಳಲ್ಲಿಯೇ ಉಳಿಯಲು ರೈತರು ತೀರ್ಮಾನಿಸಿದ್ದಾರೆ.

ಪ್ರತಿಭಟನೆಯ ಮುಂದಿನ ನಡೆ ಕುರಿತಂತೆ ರೈತರ ಮುಖಂಡರು ಫೆ. 29ರಂದು ತೀರ್ಮಾನಿಸುವರು ಎಂದು ರೈತರ ಮುಖಂಡರಾದ ಸರ್ವಾನ್ ಸಿಂಗ್ ಪಾಂಧೇರ್ ಈ ಮೊದಲು ತಿಳಿಸಿದ್ದರು.

ಎನ್‌ಡಿಎ ಜೊತೆ ತಮಿಳ್ ಮಾನಿಲ ಕಾಂಗ್ರೆಸ್ ಮೈತ್ರಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಕೇಂದ್ರದ ಮಾಜಿ ಸಚಿವ ಜಿ.ಕೆ.ವಾಸನ್ ನೇತೃತ್ವದ ತಮಿಳ್ ಮಾನಿಲ ಕಾಂಗ್ರೆಸ್ (ಟಿಎಂಸಿ), ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸೇರುವುದಾಗಿ ಸೋಮವಾರ ಪ್ರಕಟಿಸಿದೆ.

ಲೋಕಸಭೆ ಚುನಾವಣೆಗೂ ಪಕ್ಷ ಸ್ಪರ್ಧಿಸಲಿದೆ ಎಂದು ಪಕ್ಷದ ನಾಯಕ, ಹಿರಿಯ ಕಾಂಗ್ರೆಸ್ ಮುಖಂಡ ಜಿ.ಕೆ.ಮೂಪನಾರ್ ಅವರ ಪುತ್ರರೂ ಆದ ವಾಸನ್ ಅವರು ಪ್ರಕಟಿಸಿದ್ದಾರೆ.

ದೇಶದ ಹಿತಾಸಕ್ತಿ ದೃಷ್ಟಿಯಿಂದ ಬಿಜೆಪಿ ಜೊತೆ ಕೈಜೋಡಿಸಲು ತೀರ್ಮಾನಿಸಲಾಗಿದೆ ಎಂದು ಅವರು ತಿಳಿಸಿದರು.

ಬಿಜೆಪಿ ಶಿಫಾರಸಿನ ಮೇರೆಗೆ ಎಐಎಡಿಎಂಕೆ ಶಾಸಕರ ಬೆಂಬಲದೊಂದಿಗೆ ವಾಸನ್ ಅವರು 2020ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಈ ಹಿನ್ನೆಲೆಯಲ್ಲಿ ಟಿಎಂಸಿಯ ತೀರ್ಮಾನ ಗಮನಾರ್ಹವಾಗಿದೆ.

ದೇಶದ ಜನತೆ ನರೇಂದ್ರ ಮೋದಿ ಅವರೇ ಮತ್ತೆ ಪ್ರಧಾನಿಯಾಗಬೇಕು ಎಂದು ಬಯಸುತ್ತಿದ್ದಾರೆ. ಇದರೊಂದಿಗೆ ತಮಿಳುನಾಡಿನ ಜನರ ಕಲ್ಯಾಣದ ದೃಷ್ಟಿಯಿಂದಲೂ ಪಕ್ಷವು ಈ ನಿಲುವು ತಳೆದಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಅಡ್ಡಮತದ ಏಟು ಯಾರಿಗೆ?

ಒಂದನೇ ಪುಟದಿಂದ

ಎನ್‌ಡಿಎ ಮೈತ್ರಿಕೂಟದಿಂದ ಬಿಜೆಪಿಯ ನಾರಾಯಣ ಸಾ ಭಾಂಡಗೆ ಮತ್ತು ಜೆಡಿಎಸ್‌ನ ಡಿ. ಕುಪೇಂದ್ರ ರೆಡ್ಡಿ ಸ್ಪರ್ಧಿಸಿದ್ದಾರೆ. ಎರಡೂ ಪಕ್ಷಗಳ ಎಲ್ಲ ಮತಗಳು ಬಿದ್ದರೂ, ಮೈತ್ರಿಕೂಟದ ಒಬ್ಬ ಅಭ್ಯರ್ಥಿ ಗೆದ್ದು, ಮತ್ತೊಬ್ಬ ಅಭ್ಯರ್ಥಿಯ ಗೆಲುವಿಗೆ ಐದು ಮತಗಳ ಕೊರತೆ ಎದುರಾಗಲಿದೆ.

ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಮೂರೂ ಪಕ್ಷಗಳಲ್ಲಿ ಕೆಲವು ಸದಸ್ಯರು ಎದುರಾಳಿಗಳ ಹಿಡಿತಕ್ಕೆ ಸಿಲುಕಿ ಅಡ್ಡ ಮತದಾನ ಮಾಡಬಹುದು ಎಂಬ ಆತಂಕ ಇನ್ನೂ ಮಾಯವಾಗಿಲ್ಲ. ಎನ್‌ಡಿಎ ಮೈತ್ರಿಕೂಟವು ಪಕ್ಷೇತರರು ಮತ್ತು ದರ್ಶನ್ ಪುಟ್ಟಣ್ಣಯ್ಯ ಹಾಗೂ ಜನಾರ್ದನ ರೆಡ್ಡಿ ಅವರ ಮತಗಳನ್ನು ಕಸಿದು ತನ್ನನ್ನು ಇಕ್ಕಟ್ಟಿಗೆ ಸಿಲುಕಿಸಬಹುದು ಎಂಬ ಗುಮಾನಿ ಕಾಂಗ್ರೆಸ್‌ಗೆ ಇದೆ. ಪಕ್ಷದ ಚಟುವಟಿಕೆಗಳಿಂದ ದೂರ ಸರಿದಿರುವ ಬಿಜೆಪಿಯ ಕೆಲವರು ಮತ್ತು ಸಿದ್ದರಾಮಯ್ಯ ಅವರ ಕುರಿತು ಮೃದು ಧೋರಣೆ ಹೊಂದಿರುವ ಜೆಡಿಎಸ್‌ನ ಕೆಲವರು ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತ ಚಲಾಯಿಸಬಹುದು ಎಂಬ ಅನುಮಾನ ವಿರೋಧ ಪಕ್ಷಗಳ ನಾಯಕರಲ್ಲಿದೆ. ಹೀಗಾಗಿ ಅಡ್ಡ ಮತದಾನಕ್ಕೆ ಯತ್ನಿಸಬಹುದಾದ ಸಾಧ್ಯತೆ ಇರುವ ಶಾಸಕರ ಮನವೊಲಿಕೆ ಮೂರೂ ಪಕ್ಷಗಳಲ್ಲಿ ನಡೆದಿದೆ.

ಪೂರ್ಣಮತದ ಭರವಸೆಯಲ್ಲಿ ಬಿಜೆಪಿ

ಬಿಜೆಪಿ ಶಾಸಕರಾದ ಎಸ್.ಟಿ.ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರು ಬಿಜೆಪಿ ಅಭ್ಯರ್ಥಿಗೆ ಮತ ಹಾಕುವುದಾಗಿ ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರಿಗೆ ಮಾತುಕೊಟ್ಟಿದ್ದು, ಎರಡನೇ ಪ್ರಾಶಸ್ತ್ಯದ ಮತವನ್ನು ಜೆಡಿಎಸ್‌ಗೆ ಹಾಕುವುದಿಲ್ಲ ಎಂದು ಅವರು ಹೇಳಿದ್ದಾಗಿ ಮೂಲಗಳು ಹೇಳಿವೆ.

ಬಿಜೆಪಿ 66 ಶಾಸಕರನ್ನು ಹೊಂದಿದ್ದು, 45 ಶಾಸಕರು ಮೊದಲ ಪ್ರಾಶಸ್ತ್ಯದ ಮತಗಳನ್ನು ಪಕ್ಷದ ಅಭ್ಯರ್ಥಿ ನಾರಾಯಣ ಸಾ ಭಾಂಡಗೆ ಅವರಿಗೆ ಚಲಾಯಿಸಲಿದ್ದಾರೆ. ಹೆಚ್ಚುವರಿ 21 ಮತಗಳನ್ನು ಜೆಡಿಎಸ್ ಅಭ್ಯರ್ಥಿಗೆ ವರ್ಗಾಯಿಸಲಿದೆ.

ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಸಂಬಂಧ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಬೆಳಿಗ್ಗೆ ಹೋಟೆಲ್‌ವೊಂದರಲ್ಲಿ ಮಾತುಕತೆ ನಡೆಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಇದ್ದರು. ಬಿಜೆಪಿ ಮತ್ತು ಜೆಡಿಎಸ್‌ನ ಎಲ್ಲ ಶಾಸಕರು ಮಂಗಳವಾರ ಬೆಳಿಗ್ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕರ ಕಚೇರಿಗೆ ಬರಲಿದ್ದಾರೆ. ಅಲ್ಲಿಂದ ಮತ ಚಲಾವಣೆಗೆ ತೆರಳುವರು.

ಕಂದಕೂರ, ಕರೆಮ್ಮನಾಯಕ ನಡೆ ಏನು?

ಜೆಡಿಎಸ್‌ನ ಶರಣಗೌಡ ಕಂದಕೂರ ಮತ್ತು ಕರೆಮ್ಮ ಜಿ. ನಾಯಕ ಪಕ್ಷದ ನಾಯಕರಿಂದ ಅಂತರ ಕಾಯ್ದುಕೊಂಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಶರಣಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರಿತು ಇತ್ತೀಚೆಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದರು. ಈ ಇಬ್ಬರೂ ಶಾಸಕರು ರಾಜ್ಯಸಭೆ ಚುನಾವಣೆಯ ಮತದಾನದ ಕುರಿತು ಪಕ್ಷದ ನಾಯಕರ ಜತೆ ಚರ್ಚಿಸಿರಲಿಲ್ಲ. ಈ ಇಬ್ಬರೂ ರಾಜಾ ವೆಂಕಟಪ್ಪ ನಾಯಕ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಸುರಪುರಕ್ಕೆ ತೆರಳಿದ್ದರು.

ಎಚ್.ಡಿ. ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಸೋಮವಾರ ರಾತ್ರಿ ಶರಣಗೌಡ ಅವರನ್ನು ಭೇಟಿಮಾಡಿ ಮನವೊಲಿಕೆಗೆ ಯತ್ನಿಸಿದರು.

ತೋಳು–ತೊಡೆ ತಟ್ಟಿದವರ ಹಸ್ತಲಾಘವ

ದಶಕದ ಹಿಂದೆ ತೋಳು–ತೊಡೆ ತಟ್ಟಿಕೊಂಡು ಪರಸ್ಪರ ಸವಾಲು ಒಡ್ಡಿದ್ದ ಜಿ. ಜನಾರ್ದನ ರೆಡ್ಡಿ ಹಾಗೂ ಸಿದ್ದರಾಮಯ್ಯ ಇಂದು ಹಸ್ತಲಾಘವ ಮಾಡಿ ಒಂದಾದರು.

ಬಿ.ಎಸ್.ಯಡಿಯೂರಪ್ಪ 2008ರಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಅವರ ಸಂಪುಟದಲ್ಲಿ ಜನಾರ್ದನ ರೆಡ್ಡಿ ಪ್ರವಾಸೋದ್ಯಮ ಸಚಿವರಾಗಿದ್ದರು. ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗದಿದ್ದರು. ಬಳ್ಳಾರಿಯ ಅಕ್ರಮ ಗಣಿಗಾರಿಕೆ ವಿಷಯ ಚರ್ಚೆಗೆ ಬಂದಾಗ, ಜನಾರ್ದನರೆಡ್ಡಿ ಹಾಗೂ ಅಂದು ಶಾಸಕರಾಗಿದ್ದ ಸುರೇಶಬಾಬು ಬಳ್ಳಾರಿಗೆ ಬರುವಂತೆ ಸವಾಲು ಎಸೆದಿದ್ದರು. ಅದನ್ನು ಸ್ವೀಕರಿಸಿದ್ದ ಸಿದ್ದರಾಮಯ್ಯ ತಮ್ಮ ಪಕ್ಷದ ನಾಯಕರ ಜತೆ ಬಳ್ಳಾರಿವರೆಗೆ ಪಾದಯಾತ್ರೆ ನಡೆಸಿದ್ದರು.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರನ್ನು ಸೋಮವಾರ ಭೇಟಿ ಮಾಡಿದ ಜನಾರ್ದನ ರೆಡ್ಡಿ ಅವರ ಜತೆ ಮಾತುಕತೆ ನಡೆಸಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರೆಡ್ಡಿ, 'ಸಿದ್ದರಾಮಯ್ಯ ಮತ್ತು-ಶಿವಕುಮಾರ್ ಅವರು ನನ್ನನ್ನು ಕರೆಸಿಕೊಂಡು ಮಾತುಕತೆ ನಡೆಸಿದರು. ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸುವಂತೆ ಮನವಿ ಮಾಡಿದ್ದಾರೆ. ಯಾರಿಗೆ ಮತ ನೀಡಬೇಕು ಎಂಬುದನ್ನು ನಾನು ಇನ್ನೂ ನಿರ್ಧರಿಸಿಲ್ಲ' ಎಂದರು.

ಜನಾರ್ದನ ರೆಡ್ಡಿ ನೇತೃತ್ವದ ಕೆಆರ್‌ಪಿಪಿ ಚುನಾವಣಾ ಏಜೆಂಟ್ ಆಗಿ ಯೋಗೇಂದ್ರ ವಿಕ್ರಂ ಅವರನ್ನು ನೇಮಿಸಲಾಗಿದೆ. ಯೋಗೇಂದ್ರ ಅವರು ಶಿವಕುಮಾರ್ ಅವರ ಆಪ್ತರು.

'ಮಹಿಳೆಯರಿಗೆ ಕಾಯಂ ನಿಯೋಜನೆ ಹುದ್ದೆ: ತಾಕೀತು

ಒಂದನೇ ಪುಟದಿಂದ...

ಕೇಂದ್ರದ ಪರವಾಗಿ ಹಾಜರಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು 'ಅಲ್ಪಾವಧಿ ನಿಯೋಜನೆಯ ಹುದ್ದೆಗಳಲ್ಲಿ ಇರುವ ಅಧಿಕಾರಿಗಳಿಗೆ (ಎಸ್‌ಎಸ್‌ಸಿಒ) ಕಾಯಂ ನಿಯೋಜನೆಯ ಹುದ್ದೆಯನ್ನು ಕಲ್ಪಿಸುವಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಇವೆ' ಎಂದು ವಿವರಿಸಿದರು.

'ಈ ವಾದಗಳಿಗೆಲ್ಲ 2024ನೆಯ ಇಸವಿಯಲ್ಲಿ ಅರ್ಥವಿಲ್ಲ. ಮಹಿಳೆಯರನ್ನು ಹೊರಗೆ ಇರಿಸಲು ಆಗದು. ನೀವು ಈ ಕೆಲಸ ಮಾಡದೆ ಇದ್ದರೆ, ನಾವೇ ಮಾಡುತ್ತೇವೆ. ಹೀಗಾಗಿ, ಈ ವಿಚಾರವಾಗಿ ಪರಿಶೀಲಿಸಿ' ಎಂದು ಚಂದ್ರಚೂಡ್ ಅವರು ತಾಕೀತು ಮಾಡಿದರು.

ಈ ವಿಚಾರಗಳ ಬಗ್ಗೆ ಗಮನ ನೀಡಲು ಒಂದು ಮಂಡಳಿಯನ್ನು ರಚಿಸಲಾಗಿದೆ ಎಂದು ವೆಂಕಟರಮಣಿ ಅವರು ವಿವರಿಸಿದರು. 'ನೀವು ಮಹಿಳೆಯರಿಗೂ ಅವಕಾಶ ಕಲ್ಪಿಸಬೇಕು' ಎಂದು ಪೀಠವು ಸೂಚಿಸಿತು. ಅರ್ಜಿಯ ವಿಚಾರಣೆಯನ್ನು ಶುಕ್ರವಾರಕ್ಕೆ ನಿಗದಿಪಡಿಸಲಾಗಿದೆ.

ಮಹಿಳೆಯರನ್ನು ಸಮಾನವಾಗಿ ಕಾಣುವ ನೀತಿಯೊಂದನ್ನು ಕರಾವಳಿ ಕಾವಲು ಪಡೆಯು ರೂಪಿಸಬೇಕು ಎಂದು ಪೀಠವು ಈ ಹಿಂದೆ ಸೂಚಿಸಿತ್ತು. ಕರಾವಳಿ ಕಾವಲು ಪಡೆಯಲ್ಲಿ ಅಲ್ಪಾವಧಿ ನಿಯೋಜನೆಯ ಅಧಿಕಾರಿಗಳಾಗಿ ಕೆಲಸ ಮಾಡುತ್ತಿರುವ, ಅರ್ಹ ಮಹಿಳೆಯರಿಗೆ ಕಾಯಂ ನಿಯೋಜನೆಯ ಹುದ್ದೆ ಕಲ್ಪಿಸಬೇಕು ಎಂದು ಕೋರಿ ಕರಾವಳಿ ಕಾವಲು ಪಡೆಯ ಅಧಿಕಾರಿ ಪ್ರಿಯಾಂಕಾ ತ್ಯಾಗಿ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ತ್ರಿಸದಸ್ಯ ಪೀಠವು ನಡೆಸುತ್ತಿದೆ.

'ನೀವು ನಾರಿಶಕ್ತಿಯ ಬಗ್ಗೆ ಮಾತನಾಡುತ್ತೀರಿ. ಅದನ್ನು ಇಲ್ಲಿ ತೋರಿಸಿ...' ಎಂದು ಪೀಠವು ಹಿಂದೆ ಹೇಳಿತ್ತು. ಭೂಸೇನೆ, ವಾಯುಸೇನೆ ಮತ್ತು ನೌಕಾಪಡೆಯಲ್ಲಿ ಮಹಿಳಾ ಅಧಿಕಾರಿಗಳಿಗೆ ಕಾಯಂ ನಿಯೋಜನೆ ಹುದ್ದೆಯನ್ನು ನೀಡುವ ವಿಚಾರವಾಗಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರೂ, ಸರ್ಕಾರವು ಇಲ್ಲಿ 'ಪುರುಷ ಪ್ರಾಧಾನ್ಯ ನಡೆಯನ್ನು ಅನುಸರಿಸುತ್ತಿದೆಯೇ' ಎಂದು ಕೂಡ ಪೀಠವು ಪ್ರಶ್ನಿಸಿತ್ತು.

ಕಾಯಂ ನಿಯೋಜನೆ ಹುದ್ದೆಗಳಲ್ಲಿ ಶೇಕಡ 10ರಷ್ಟನ್ನು ಮಹಿಳೆಯರಿಗೆ ಮೀಸಲಾಗಿ ಇರಿಸಬಹುದು ಎಂಬ ವಿವರಣೆಗೆ ಪ್ರತಿಯಾಗಿ ಪೀಠವು, 'ಶೇ 10ರಷ್ಟು ಮಾತ್ರ ಏಕೆ? ಮಹಿಳೆಯರು ಕಡಿಮೆ ದರ್ಜೆಯವರೇ' ಎಂದು ಖಾರವಾಗಿ ಪ್ರಶ್ನಿಸಿತ್ತು. ಭಾರತೀಯ ನೌಕಾಪಡೆಯು ಮಹಿಳೆಯರಿಗೆ ಕಾಯಂ ನಿಯೋಜನೆ ಹುದ್ದೆ ಕಲ್ಪಿಸಿರುವಾಗ ಕರಾವಳಿ ಕಾವಲು ಪಡೆ ಆ ಕೆಲಸವನ್ನು ಏಕೆ ಮಾಡುತ್ತಿಲ್ಲ ಎಂದು ಕೇಳಿತ್ತು.

ಹೋಟೆಲ್‌ನಲ್ಲಿ ಕೈ ಶಾಸಕರು

ಒಂದನೇ ಪುಟದಿಂದ

ಮತಗಳು ಅಸಿಂಧುವಾಗುವುದನ್ನು ತಪ್ಪಿಸಲು ಹೋಟೆಲ್‌ನಲ್ಲೇ ಶಾಸಕರಿಂದ ಅಣಕು ಮತದಾನವನ್ನೂ ನಡೆಸಲಾಯಿತು. ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಡ್ಡ ಮತದಾನ ಮಾಡದಂತೆ ಶಾಸಕರಿಗೆ ಸೂಚನೆ ನೀಡಲಾಗಿದೆ.

ಜನಾರ್ದನ ರೆಡ್ಡಿ ಮತವೂ ಕಾಂಗ್ರೆಸ್ ಅಭ್ಯರ್ಥಿಗೆ ಬೀಳುವುದು ಖಚಿತ ಎನ್ನಲಾಗಿದೆ. ಗೆಲುವಿಗೆ 45 ಮತಗಳ ಅಗತ್ಯವಿದ್ದರೂ, ತಲಾ 46 ಮತಗಳನ್ನು ಹಂಚಿಕೆ ಮಾಡಲಾಗಿದೆ. ಪ್ರತಿ ಶಾಸಕರಿಗೂ ಪ್ರಥಮ, ದ್ವಿತೀಯ ಮತ್ತು ತೃತೀಯ ಪ್ರಾಶಸ್ತ್ಯದ ಮತಗಳನ್ನು ಯಾವ ಅಭ್ಯರ್ಥಿಗೆ ಚಲಾಯಿಸಬೇಕು ಎಂಬುದನ್ನು ನಿಗದಿಪಡಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಇ.ಡಿಗೆ ರಾಜ್ಯ ಸಹಕರಿಸಬೇಕು'

ನವದೆಹಲಿ (ಪಿಟಿಐ): ಅಪರಾಧ ನಡೆದಿದೆಯೇ ಎಂಬುದನ್ನು ಪತ್ತೆ ಮಾಡುವ ಕೆಲಸದಲ್ಲಿ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ರಾಜ್ಯದ ಆಡಳಿತ ಯಂತ್ರವು ನೆರವು ನೀಡಬೇಕು ಎಂದು ಸುಪ್ರೀಂ ಕೋರ್ಟ್, ತಮಿಳುನಾಡು ರಾಜ್ಯ ಸರ್ಕಾರವನ್ನು ಉದ್ದೇಶಿಸಿ ಹೇಳಿದೆ.

ಹಣದ ಅಕ್ರಮ ವರ್ಗಾವಣೆ ಪ್ರಕರಣವೊಂದರಲ್ಲಿ ಇ.ಡಿ. ತನಿಖೆಯನ್ನು ವಿರೋಧಿಸಿ ತಮಿಳುನಾಡು ಸರ್ಕಾರವು ಮದ್ರಾಸ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದನ್ನು ಸುಪ್ರೀಂ ಕೋರ್ಟ್ ಕಳೆದ ವಾರ ಪ್ರಶ್ನಿಸಿತ್ತು.

ಮರಳು ಗಣಿಗಾರಿಕೆಯಲ್ಲಿ ಅಕ್ರಮ ನಡೆದಿದೆ ಎನ್ನಲಾದ ಪ್ರಕರಣವೊಂದರಲ್ಲಿನ ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ವೆಲ್ಲೂರು, ತಿರುಚಿರಾಪಳ್ಳಿ, ಕರೂರು, ತಂಜಾವೂರು ಮತ್ತು ಅರಿಯಾಲೂರು ಜಿಲ್ಲಾಧಿಕಾರಿಗಳಿಗೆ ಇ.ಡಿ. ಸಮನ್ಸ್ ನೀಡಿತ್ತು. ಇದನ್ನು ಪ್ರಶ್ನಿಸಿ ಈ ಜಿಲ್ಲಾಧಿಕಾರಿಗಳು ಹಾಗೂ ತಮಿಳುನಾಡು ಸರ್ಕಾರದ ಕಡೆಯಿಂದ ಮದ್ರಾಸ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಸಮನ್ಸ್‌ಗೆ ಹೈಕೋರ್ಟ್ ತಡೆ ನೀಡಿತ್ತು.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಇ.ಡಿ. ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪಂಕಜ್ ಮಿತ್ತಲ್ ಅವರು ಇದ್ದ ವಿಭಾಗೀಯ ಪೀಠವು ಇ.ಡಿ. ಅರ್ಜಿಯ ವಿಚಾರಣೆ ನಡೆಸಿತು.

'ಅಪರಾಧ ನಡೆದಿದೆಯೇ ಎಂಬುದನ್ನು ಪತ್ತೆ ಮಾಡುವಲ್ಲಿ ರಾಜ್ಯ ಸರ್ಕಾರ ಹಾಗೂ ಅದರ ಅಧಿಕಾರಿಗಳು ಇ.ಡಿ.ಗೆ ನೆರವು ಒದಗಿಸಬೇಕು' ಎಂದು ಪೀಠವು ಹೇಳಿತು. 'ನೆರವು ಕೊಡುವಂತೆ ರಾಜ್ಯದ ಆಡಳಿತ ಯಂತ್ರವನ್ನು ಕೇಳಿದ್ದಲ್ಲಿ, ಅದರಿಂದ ಆಗಿರುವ ಹಾನಿಯಾದರೂ ಏನು' ಎಂದು ಪ್ರಶ್ನಿಸಿತು.

'ಜಿಲ್ಲಾಧಿಕಾರಿಗಳಿಂದ ಮಾಹಿತಿ ಕೇಳಿದಾಗ ರಾಜ್ಯ ಸರ್ಕಾರಕ್ಕೆ ಆಗುವ ತೊಂದರೆ ಏನು? ಜಿಲ್ಲಾಧಿಕಾರಿಗಳಿಗೆ ವೈಯಕ್ತಿಕವಾಗಿ ತೊಂದರೆ ಉಂಟಾದಲ್ಲಿ ಅವರು ಅರ್ಜಿ ಸಲ್ಲಿಸಬಹುದಿತ್ತು' ಎಂದು ಪೀಠವು ಹೇಳಿತು. ಗಣಿಗಾರಿಕೆಯು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿ ಗುರುತಿಸಲಾಗಿರುವ ಅಪರಾಧ ಅಲ್ಲ ಎಂದು ತಮಿಳುನಾಡು ಪರ ಹಾಜರಾಗಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ವಿವರಿಸಿದರು. ಇ.ಡಿ. ಇರುವುದು ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆಗೆ ಎಂದು ಸಿಬಲ್ ಹೇಳಿದರು.

'ಸರ್ಕಾರದ ಅಧಿಕಾರಿಗಳಿಗೆ ಗಣಿಗಾರಿಕೆಗೆ ಸಂಬಂಧಿಸಿದ ಗುತ್ತಿಗೆ ಒಪ್ಪಂದದ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುವ ಕಾರಣ ಸರ್ಕಾರವು ಅರ್ಜಿ ಸಲ್ಲಿಸಿದೆ' ಎಂದು ಸಿಬಲ್ ತಿಳಿಸಿದರು.

'ಪ್ರಕರಣವು ಗಣಿಗಾರಿಕೆಗೆ ಮಾತ್ರ ಸಂಬಂಧಿಸಿದ್ದಲ್ಲ. ಕ್ರಿಮಿನಲ್ ಪಿತೂರಿ ಮತ್ತು ವಂಚನೆಯ ಆರೋಪಗಳೂ ಇಲ್ಲಿವೆ. ಈ ಬಗ್ಗೆಯೂ ತನಿಖೆ ನಡೆಯುತ್ತಿದೆ. ಆದರೆ ರಾಜ್ಯ ಸರ್ಕಾರವು ಆರೋಪಿಗಳನ್ನು ರಕ್ಷಿಸಲು ಯತ್ನಿಸುತ್ತಿರುವಂತಿದೆ' ಎಂದು ಇ.ಡಿ. ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ದೂರಿದರು.

ಗ್ಯಾನವಾಪಿ: ಪೂಜೆಗೆ ಇಲ್ಲ ತಡೆ

ಪ್ರಯಾಗರಾಜ್ (ಪಿಟಿಐ): ಗ್ಯಾನವಾಪಿ ಮಸೀದಿಯ 'ವ್ಯಾಸ ತೆಹಖಾನಾ'ದಲ್ಲಿ ಪೂಜೆ ಸಲ್ಲಿಸಲು ಜಿಲ್ಲಾ ನ್ಯಾಯಾಲಯ ಅವಕಾಶ ಕಲ್ಪಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.

ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ಸಲ್ಲಿಸಿದ್ದ ಎರಡು ಅರ್ಜಿಗಳನ್ನು ಹೈಕೋರ್ಟ್‌ನ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಅವರು ವಜಾಗೊಳಿಸಿದರು. 'ವ್ಯಾಸ ತಹಖಾನಾ'ದಲ್ಲಿ ಪೂಜೆ ಮುಂದುವರಿಯಲಿದೆ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

'ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದ ನಂತರ ಹಾಗೂ ವಾದ–ಪ್ರತಿವಾದಗಳನ್ನು ಆಲಿಸಿದ ನಂತರ, ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಿದ ಆದೇಶದಲ್ಲಿ ಮಧ್ಯಪ್ರವೇಶ ಮಾಡಬೇಕಾದ ಅಗತ್ಯವು ಕೋರ್ಟ್‌ಗೆ ಕಂಡುಬಂದಿಲ್ಲ' ಎಂದು ನ್ಯಾಯಮೂರ್ತಿ ಅಗರ್ವಾಲ್ ಹೇಳಿದ್ದಾರೆ.

ಗ್ಯಾನವಾಪಿ ಮಸೀದಿಯ ವ್ಯವಹಾರಗಳನ್ನು ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ನೋಡಿಕೊಳ್ಳುತ್ತದೆ. ಸಮಿತಿಯು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಶೈಲೇಂದ್ರ ಕುಮಾರ್ ಪಾಠಕ್ ಎನ್ನುವವರು ಅರ್ಜಿಯೊಂದನ್ನು ಸಲ್ಲಿಸಿ, 'ವ್ಯಾಸ ತಹಖಾನಾದಲ್ಲಿ ನನ್ನ ಅಜ್ಜ ಸೋಮನಾಥ ವ್ಯಾಸ ಅವರು 1993ರ ಡಿಸೆಂಬರ್‌ವರೆಗೂ ಪೂಜೆ ಸಲ್ಲಿಸುತ್ತಿದ್ದರು' ಎಂದು ಹೇಳಿದ್ದರು. ಆದರೆ ಮುಲಾಯಂ ಸಿಂಗ್ ಯಾದವ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಆದ ನಂತರದಲ್ಲಿ ಪೂಜೆಯನ್ನು ನಿಲ್ಲಿಸಲಾಯಿತು ಎಂದು ಕೂಡ ಹೇಳಿದ್ದರು.

ಆದರೆ ಅಲ್ಲಿ ಯಾವ ವಿಗ್ರಹಗಳೂ ಇಲ್ಲ. ಹೀಗಾಗಿ ಅಲ್ಲಿ ಪೂಜೆ ಸಲ್ಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸಮಿತಿಯ ಪರ ವಕೀಲರು ಹೇಳಿದ್ದರು.

ಮರೆಯಾದ ಮಧುರ ಗಾನ ಗಾರುಡಿಗ

• ವಿಶಾಖ ಎನ್.

ನುಡಿ ನಮನ

1994ರಲ್ಲಿ ತೆರೆಕಂಡ 'ಮೊಹ್ರಾ' ಹಿಂದಿ ಸಿನಿಮಾದಲ್ಲಿ ಸ್ವರ ಸಂಯೋಜಕ ವಿಜು ಶಾ ಆಸಕ್ತಿಕರ ಹಿಂದೂಸ್ತಾನಿ ರಾಗಗಳನ್ನಿಟ್ಟು ಮಟ್ಟುಗಳನ್ನು ಹಾಕಿದ್ದರು. ಆ ಸಿನಿಮಾದ ಒಂದು ಹಾಡು ಸುನಿಲ್ ಶೆಟ್ಟಿ ಬಂಡೆಯಂಥ ದೇಹಕ್ಕೆ ಹೊರತೇ ಆದಂತಹ ಭಾವದ್ದು. 'ನಾ ಕಜರೆ ಕೀ ಧಾರ್... ನಾ ಮೋತಿಯೋಂ ಕೆ ಹಾರ್' ಎಂಬ ಹೆಣ್ಣಿನ ಸಹಜ ಸೌಂದರ್ಯ ವರ್ಣನೆಯ ಹಾಡು ಅದು. ಅದರಲ್ಲಿನ ಪಂಕಜ್ ಉಧಾಸ್ ಕಂಠ ಸಾಹಸಪ್ರಧಾನ ಸಿನಿಮಾಗಳಲ್ಲೂ ಸಂಗೀತದ ದೊಡ್ಡ 'ರಿಲೀಫ್' ಹೇಗಿರುತ್ತಿತ್ತು ಎನ್ನುವುದಕ್ಕೆ ಸಾಕ್ಷಿಯಂತೆ ಇತ್ತು.

ಕ್ರಿಕೆಟ್‌ನಲ್ಲಿ ರಾಹುಲ್ ದ್ರಾವಿಡ್ ಅವರ ತುಸುವೂ ಧಾವಂತವೇ ಇಲ್ಲದ ಧೋರಣೆಯೊಂದಿದೆ. ಪಂಕಜ್ ಗೀತಚೌಕಟ್ಟಿನಲ್ಲೂ ಅಂಥದ್ದೇ ಒಂದು ಧೋರಣೆ ಕಾಣುತ್ತದೆ. ಗೀತಸಾಹಿತ್ಯಕ್ಕೆ ಮೃದುತ್ವವನ್ನು ಸವರಿದಂತೆ ಅವರು ಹಾಡುತ್ತಿದ್ದರು. ಕಣ್ಣುಮುಚ್ಚಿ ಕೇಳುತ್ತಾ ಹೋದರೆ ತಂತಾನೇ ನಿದ್ರೆ ಆವರಿಸಿಕೊಳ್ಳುವಷ್ಟು ಪ್ರಭಾವಿ ಗಾಯನ.

'ಸಾಜನ್' ಹಿಂದಿ ಸಿನಿಮಾದ 'ಜಿಯೆ ತೋ ಜಿಯೆ ಕೈಸೆ' ಹಾಡನ್ನು ಕೇಳಿದರೆ, ಪಂಕಜ್ ಹೇಗೆ ಶ್ರುತಿಯ ತಲೆಮೇಲೆ ಕೂತಂತೆ ಶಾರೀರ ದಾಟಿಸುತ್ತಿದ್ದರೆನ್ನುವುದು ಅರಿವಿಗೆ ಬಾರದೇ ಇರದು.

ಹಾಡುಗಳ ಮೂಲಕವೇ ಸಂವಹನ ಮಾಡುತ್ತಾ ಬಂದಿದ್ದ ಪಂಕಜ್ ಇನ್ನು ಭೌತಿಕವಾಗಿ ನಮ್ಮೊಡನೆ ಇರುವುದಿಲ್ಲ. ಅವರ ಗಾನ ಪ್ರತಿಭೆ ಮಾತ್ರ ಸದಾ ಎಲ್ಲಿಯೋ ಅನುರಣವಾಗುತ್ತಲೇ ಇರುತ್ತದೆ; ಯಾರದ್ದೋ ಮೊಬೈಲ್‌ನಲ್ಲೋ, ಕಾರಿನ ಪ್ಲೇಯರ್‌ನಲ್ಲೋ ಅಥವಾ ಸಮಾರಂಭದ ಗ್ರಾಮಾಫೋನ್‌ನಲ್ಲೋ.

ಪಂಕಜ್, ರಾಜಸ್ಥಾನದ ಜೇತ್‌ಪುರದವರು. ತಂದೆ ಕೇಶೂಭಾಯಿ ಉಧಾಸ್ ಸರ್ಕಾರಿ ಕೆಲಸದಲ್ಲಿದ್ದರು. ಜಮೀನ್ದಾರರ ಕುಟುಂಬ. ಮೂವರು ಗಂಡುಮಕ್ಕಳಲ್ಲಿ ಪಂಕಜ್ ಕೊನೆಯವರು. ಮನಹರ್ ಉಧಾಸ್ ಹಾಗೂ ನಿರ್ಮಲ್ ಉಧಾಸ್ ಅವರ ಅಣ್ಣಂದಿರು. ಮೂವರೂ ಹಿಂದೂಸ್ತಾನಿ ಸಂಗೀತಗಾರರು. ವೀಣಾ ವಾದಕ ಅಬ್ದುಲ್ ಕರೀಂ ಖಾನ್ ಅವರಿಂದ ಕೇಶೂಭಾಯಿ ಉಧಾಸ್ ಸ್ವ–ಆಸಕ್ತಿಯಿಂದ ದಿಲ್‌ರುಬಾ ಕಲಿತರು. ಪಂಕಜ್‌ಗೆ ಆ ವಾದ್ಯದ ನಾದದಲೆಯೇ ಜೋಗುಳವಾದ ದಿನಗಳಿದ್ದವು.

ಸಂಗೀತ ಹೀಗೆ ಮನೆಯಲ್ಲಿ ಎಲ್ಲರಿಗೂ ಹರಡಿಕೊಂಡಿತು. ಪಂಕಜ್ ಅವರಿಗೆ ತಬಲಾ ಅಲ್ಲದೆ ಗಿಟಾರ್, ಹಾರ್ಮೋನಿಯಂ, ಪಿಯಾನೊ, ಪಿಟೀಲು ನುಡಿಸುವುದೂ ಗೊತ್ತಿತ್ತು.

ಭಾರತ–ಚೀನಾ ಯುದ್ಧ ನಡೆದಿದ್ದ ಸಂದರ್ಭದಲ್ಲಿ ಪಂಕಜ್ ವೇದಿಕೆ ಏರಿ, 'ಯೇ ಮೇರೆ ವತನ್ ಕೇ ಲೋಗೊ' ಹಾಡು ಹಾಡಿ, ಬಹುಮಾನದ ರೂಪದಲ್ಲಿ ₹51 ಪಡೆದಾಗ ಅವರಿಗೆ ಇನ್ನೂ ಹನ್ನೊಂದು ವಯಸ್ಸು.

ರಾಜ್‌ಕೋಟ್‌ನ ಸಂಗೀತ ನಾಟ್ಯ ಅಕಾಡೆಮಿಗೆ ತಂದೆ ಸೇರಿಸಿದ್ದರಿಂದ ಪಂಕಜ್ ಅಲ್ಲಿ ಸಂಗೀತದ ಮೂಲ ಪಾಠಗಳನ್ನು ಕಲಿತರು. ಕುಟುಂಬ ಆಮೇಲೆ ಮುಂಬೈಗೆ ಸ್ಥಳಾಂತರಗೊಂಡರೂ ಕಲಿಕೆ ನಿಲ್ಲಲಿಲ್ಲ. ನವರಂಗ್ ಅವರಲ್ಲಿ ಹಾಡುಗಾರಿಕೆಯ ಸಾಣೆಗೆ ಒಳಗಾಗುವ ಮೊದಲೇ ತಬಲಾ ನುಡಿಸುವುದರಲ್ಲಿ ಪಳಗಿದರು. ಗಜಲ್‌ಗಳಲ್ಲಿ ಪಳಗಲೆಂದೇ ಅವರು ಉರ್ದು ಕಲಿತರು. ಕೆನಡಾ ಹಾಗೂ ಅಮೆರಿಕದಲ್ಲಿ ಹತ್ತು ತಿಂಗಳು ಗಜಲ್‌ಗಳ ಕಛೇರಿಗಳನ್ನು ನೀಡಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡರು.

ಅಷ್ಟೆಲ್ಲ ರಿಯಾಜ್‌ನ ನಂತರ 1980ರಲ್ಲಿ ಅವರು 'ಆಹಟ್' ಹಿಂದಿ ಆಲ್ಬಂ ಹೊರತಂದರು. ಅವರ ಮಧುರ ಕಂಠದ ಜೇನಸವಿ ರಸಿಕರೆದೆಗೆ ಇಳಿಯಿತು. ಸಹಜವಾಗಿಯೇ ಚಿತ್ರಗೀತೆಗಳಲ್ಲಿ ಹಾಡುವ ಅವಕಾಶಗಳೂ ಹುಡುಕಿಕೊಂಡು ಬಂದಿತು. 'ಕಾಮ್ನಾ' ಹಿಂದಿ ಸಿನಿಮಾದಲ್ಲಿ ಉಷಾ ಖನ್ನಾ ಅವರ ಸಂಯೋಜನೆಯ ಗೀತೆಗೆ ಅವರು ದನಿಯಾದರು. ಇದು ಅವರು ಹಾಡಿದ ಮೊದಲ ಚಿತ್ರಗೀತೆ. ಸಿನಿಮಾ ಸೋತರೂ ಈ ಹಾಡಿನ ಕಂಠ ಚಿತ್ರಗಳಿಗೆ ಸ್ವರ ಸಂಯೋಜನೆ ಮಾಡುವವರಿಗೆ ಹಿಡಿಸಿತು. 'ನಾಮ್' ಸಿನಿಮಾದಲ್ಲಿ 'ಚಿಟ್ಟಿ ಆಯೀ ಹೈ' ಹಾಡನ್ನು ಅವರು ಹಾಡಿದ್ದೇ ಅಲ್ಲದೆ, ತೆರೆಮೇಲೆ ಕೂಡ ಕಾಣಿಸಿಕೊಂಡರು. 'ಫಾಯಲ್' ಸಿನಿಮಾದ 'ಮಾಹಿಯಾ ತೇರಿ ಕಸಮ್' ಗೀತೆಗೆ ಲತಾ ಮಂಗೇಷ್ಕರ್ ಅವರೊಟ್ಟಿಗೆ ದನಿಯಾದದ್ದು ಇನ್ನೊಂದು ಜಿಗಿತ.

2011ರ ಹೊತ್ತಿಗೆ 50ಕ್ಕೂ ಹೆಚ್ಚು ಆಲ್ಬಂಗಳನ್ನು ಹೊರತಂದಿದ್ದ ಪಂಕಜ್ ಉಧಾಸ್, ಆಮೇಲೆ ಕಛೇರಿಗಳಿಗೇ ತಮ್ಮ ಬದುಕನ್ನು ಹೆಚ್ಚು ಮೀಸಲಿಟ್ಟರು. ಶಂಕರ್–ಜೈಕಿಶನ್, ಲಕ್ಷ್ಮೀಕಾಂತ್ ಪ್ಯಾರೆಲಾಲ್, ಬಪ್ಪಿ ಲಹರಿ, ನದೀಮ್–ಶ್ರವಣ್, ಆನಂದ್–ಮಿಲಿಂದ್ ಅವರಿಂದ ಹಿಡಿದು ಆನಂದ್ ರಾಜ್ ಆನಂದ್ ಅವರವರೆಗೆ ಹಲವು ಸಂಯೋಜಕರ ನೂರಾರು ಹಾಡುಗಳಿಗೆ ಪಂಕಜ್ ದನಿಯಾದರು. 2016ರಲ್ಲಿ 'ದಿಲ್ ತೋ ದೀವಾನಾ ಹೈ' ಚಿತ್ರದ 'ರಾತ್ ಭರ್ ತನ್‌ಹಾ ರಹಾ' ಎಂಬ ಗೀತೆ ಅವರ ಹಳೆಯ ಛಾಪನ್ನು ನೆನಪಿಸಿತ್ತು.

ಕೋವಿಡ್ ಕಾಲದಲ್ಲಿ ಅವರು ಕನಲಿದ್ದರು. ಆರೋಗ್ಯದಲ್ಲಿ ಆಗಿದ್ದ ತುಸು ಏರುಪೇರಿನಿಂದಾಗಿ ಮತ್ತೆ ಹಾಡಲು ಆದೀತೋ ಇಲ್ಲವೋ ಎಂಬ ವಿಷಯ ಅವರನ್ನು ಬಹುಕಾಲ ಕಾಡಿತ್ತು. ಆಮೇಲೆ ಎರಡು ವರ್ಷಗಳ ನಂತರ ಉತ್ತರ ಪ್ರದೇಶದ ರಾಂಪುರದಲ್ಲಿ ಅವರ ಕಛೇರಿ ಏರ್ಪಾಟಾಯಿತು. ಆ ಕಛೇರಿ ಶುರುವಾಗುವ ಎರಡು ದಿನ ಅವರು ಹಾಡಲು ಆದೀತೋ ಇಲ್ಲವೋ ಎಂದೇ ಚಡಪಡಿಸಿದ್ದರು. ವೇದಿಕೆ ಏರಿದಾಗ, ಎದುರಲ್ಲಿ ಇದ್ದ ಆರು ಸಾವಿರಕ್ಕೂ ಹೆಚ್ಚು ಪ್ರೇಕ್ಷಕರನ್ನು ಕಂಡು ಅವರ ಕಣ್ಣಂಚಿನಲ್ಲಿ ನೀರು ತುಂಬಿಕೊಂಡಿತ್ತು.

'ಚಿಟ್ಟಿ ಆಯೀ ಹೈ' ಗೀತೆಯಲ್ಲಿನ ಭಾವಗಳ ಏರಿಳಿತವನ್ನು ಉಳಿಸಿ, ತಮಗೆ ಯಾವುದೋ ಪತ್ರ ಬಂತೇನೋ ಎನ್ನುವಂತೆ ಪಂಕಜ್ ಕಣ್ಮುಚ್ಚಿದ್ದಾರೆ. ಅವರ ಹಾಡುಗಳು ಮಾತ್ರ ಈಗಲೂ ಕಣ್ಣು ಪಿಳುಪಿಳಿಸುತ್ತಿವೆ.

ಗಾಯಕ ಪಂಕಜ್ ಉಧಾಸ್ ನಿಧನ

ಒಂದನೇ ಪುಟದಿಂದ ...

1986ರಲ್ಲಿ ತೆರೆಕಂಡ 'ನಾಮ್' ಹಿಂದಿ ಸಿನಿಮಾದ 'ಚಿಟ್ಟಿ ಆಯಿ ಹೈ' ಹಾಡು ಪಂಕಜ್ ಅವರಿಗೆ ಜನಪ್ರಿಯತೆ ತಂದುಕೊಟ್ಟಿತು. 'ಚಾಂದಿ ಜೈಸಾ ರಂಗ್ ಹೈ', 'ಏಕ್ ಹಿ ಮಕ್ಸದ್', 'ಆಜ್ ಫಿರ್ ತುಮ್‌ಪೆ', 'ಜಿಯೆ ತೊ ಜಿಯೆ ಕೈಸೆ', 'ನಾ ಕಜರೆ ಕೀ ಧಾರ್' ಚಿತ್ರಗೀತೆಗಳಲ್ಲಿನ ಪಂಕಜ್ ಅವರ ಮಧುರ ಮೆಲುದನಿಯ ಸಂಗೀತ ರಸಿಕರ ಮನದಲ್ಲಿ ಮನೆ ಮಾಡಿದೆ.

ಅವರು ಗಜಲ್‌ಗಳ ಆಲ್ಬಂಗಳಿಂದಲೂ ಛಾಪು ಮೂಡಿಸಿದ್ದರು. 1980ರಲ್ಲಿ ಹೊರಬಂದ 'ಆಹಟ್' ಅವರ ಮೊದಲ ಆಲ್ಬಂ. 'ನಶಾ', 'ತರನ್ನುಮ್', 'ಮೆಹ್‌ಫಿಲ್', 'ಏಕ್ ಧುನ್ ಪ್ಯಾರ್ ಕಿ' ಅವರ ಆಲ್ಬಂಗಳಲ್ಲಿ ಪ್ರಮುಖವಾದವು.

ಹಲವು ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿದ್ದವು. 2006ರಲ್ಲಿ ಪದ್ಮಶ್ರೀ ಪುರಸ್ಕಾರವೂ ಅವರಿಗೆ ಸಂದಿತ್ತು.

ಪಂಕಜ್ ಅವರಿಗೆ ಪತ್ನಿ ಫರೀದಾ ಉಧಾಸ್ ಹಾಗೂ ಪುತ್ರಿಯರಾದ ನಯಾಬ್ ಹಾಗೂ ರೇವಾ ಇದ್ದಾರೆ.

ತವರು ನೆಲದಲ್ಲಿ ಸತತ 17ನೇ ಸರಣಿ ಜಯಿಸಿದ ಭಾರತ • 3–1ರಿಂದ ಕೈವಶ • ರೋಹಿತ್ ಅರ್ಧ ಶತಕ

ಇಂಗ್ಲೆಂಡ್ 'ಸವಾಲ್' ಗೆದ್ದ ಗಿಲ್–ಜುರೇಲ್

ಪ್ರಜಾವಾಣಿ ವಾರ್ತೆ

ರಾಂಚಿ: ಚೇಸಿಂಗ್ ಮಾಸ್ಟರ್ ವಿರಾಟ್ ಕೊಹ್ಲಿ ಗೈರುಹಾಜರಿಯಲ್ಲಿಯೂ ಭಾರತವನ್ನು ಗೆಲುವಿನ ಗುರಿ ಮುಟ್ಟಿಸುವ ಯುವ ಬ್ಯಾಟರ್‌ಗಳು ಈಗ ತಂಡದಲ್ಲಿದ್ದಾರೆ.

ಜಾರ್ಖಂಡ್ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಸೋಮವಾರ ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್‌ನಲ್ಲಿ ತಂಡಕ್ಕೆ 5 ವಿಕೆಟ್‌ಗಳ ಗೆಲುವಿನ ಕಾಣಿಕೆ ನೀಡಿದ ಶುಭಮನ್ ಗಿಲ್ (ಅಜೇಯ 52; 124ಎ) ಮತ್ತು ಧ್ರುವ ಜುರೇಲ್ (39; 77ಎ) ಅವರೇ ಆ ಯುವಜೋಡಿ. ಅವರಿಂದಾಗಿ ಭಾರತವು ಐದು ಪಂದ್ಯಗಳ ಸರಣಿಯನ್ನು 3–1ರಿಂದ ಕೈವಶ ಮಾಡಿಕೊಂಡಿತು. ಸ್ವದೇಶದಲ್ಲಿ ಸತತ 17ನೇ ಟೆಸ್ಟ್ ಸರಣಿ ಜಯದ ದಾಖಲೆಯನ್ನೂ ಬರೆಯಿತು.

ಬೆನ್ ಸ್ಟೋಕ್ಸ್ ಮತ್ತು ಕೋಚ್ ಬ್ರೆಂಡನ್ ಮೆಕ್ಕಲಂ ಮುಂದಾಳತ್ವದಲ್ಲಿ ಇಂಗ್ಲೆಂಡ್ ಸೋತ ಮೊದಲ ಸರಣಿ ಇದೆ. 192 ರನ್‌ಗಳ ಗುರಿ ಸಾಧಾರಣ ಎಂದು ಮೇಲ್ನೋಟಕ್ಕೆ ಕಂಡಿತು. ಆದರೆ, ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ನಾಲ್ಕನೇ ದಿನದಾಟ ಸುಲಭವಾಗಿರಲಿಲ್ಲ.

ಆರಂಭಿಕ ಜೋಡಿ ರೋಹಿತ್ ಶರ್ಮಾ ಮತ್ತು ಯಶಸ್ವಿ ಜೈಸ್ವಾಲ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 84 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿದರು. ಆದರೂ ನಂತರದ 36 ರನ್‌ಗಳ ಅಂತರದಲ್ಲಿ ಭಾರತದ ಐದು ವಿಕೆಟ್‌ಗಳು ಪತನವಾಗಲು ಇಂಗ್ಲೆಂಡ್ ಸ್ಪಿನ್ನರ್ ಶೋಯಬ್ ಬಷೀರ್ (79ಕ್ಕೆ3), ಟಾಮ್ ಹಾರ್ಟ್ಲಿ (70ಕ್ಕೆ1) ಮತ್ತು ಜೋ ರೂಟ್ (26ಕ್ಕೆ1) ಕಾರಣರಾದರು.

ಊಟಕ್ಕಿಂತ ಮುಂಚಿನ ಅವಧಿಯಲ್ಲಿ ಟಾಮ್ ಬೌಲಿಂಗ್‌ನಲ್ಲಿ ಜೈಸ್ವಾಲ್ ಅವರ ಕ್ಯಾಚ್ ಅನ್ನು ಆಕರ್ಷಕವಾಗಿ ಡೈವ್ ಮಾಡಿ ಪಡೆದ ಜಿಮ್ಮಿ ಆ್ಯಂಡರ್ಸನ್ ಮಿಂಚಿದರು. ವಿರಾಮಕ್ಕೂ ಮುನ್ನವೇ ರೋಹಿತ್ ಮತ್ತು ರಜತ್ ಪಾಟೀದಾರ್ ಪೆವಿಲಿಯನ್ ಸೇರಿಯಾಗಿತ್ತು.

ವಿರಾಮದ ನಂತರದ ಎರಡನೇ ಓವರ್‌ನಲ್ಲಿ ಬಷೀರ್ ಅವರ ಸತತ ಎರಡು ಎಸೆತಗಳಲ್ಲಿ ಜಡೇಜ ಮತ್ತು ಸರ್ಫರಾಜ್ ಖಾನ್ ಔಟಾದರು.

ಆದರೆ ಇನ್ನೊಂದು ಬದಿಯಲ್ಲಿ ಶಾಂತಚಿತ್ತರಾಗಿ ಈ ವಿಕೆಟ್ ಪತನಕ್ಕೆ ಸಾಕ್ಷಿಯಾಗಿದ್ದ ಶುಭಮನ್ ಗಿಲ್ ಮನದಲ್ಲಿ ಗೆಲುವಿನ ಲಕ್ಷ್ಯವೊಂದೇ ಹರಳುಗಟ್ಟಿತ್ತು. ಅವರಿಗೆ ಜುರೇಲ್ ಜೊತೆಯಾದರು. 6ನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ ಸೇರಿ ಎದುರಿಸಿದ 136 ಎಸೆತಗಳೂ ಕುತೂಹಲ ಕೆರಳಿಸಿದವು. ಉಭಯ ತಂಡಗಳ ಬೆಂಬಲಿಗರನ್ನೂ ತುದಿಗಾಲಿನಲ್ಲಿ ನಿಲ್ಲಿಸಿದ್ದವು. ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಫೀಲ್ಡಿಂಗ್ ನಿಯೋಜನೆ, ಬೌಲಿಂಗ್ ಸಂಯೋಜನೆಗಳ ಪ್ರಯೋಗಗಳು ನಿರಂತರವಾಗಿ ನಡೆದವು. ಆದರೆ, ಗಿಲ್–ಜುರೇಲ್ ಜೋಡಿಯ ಏಕಾಗ್ರತೆ ಭಂಗವಾಗಲಿಲ್ಲ. ಯಾವುದೇ ಅವಸರಪಡದೇ ತಣ್ಣಗೆ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. 'ಹನಿಗೂಡಿದರೆ ಹಳ್ಳ' ಎಂಬಂತೆ ಒಂಟಿ, ಜೋಡಿ ರನ್‌ಗಳನ್ನು ಕಲೆಹಾಕುತ್ತ ವಿಕೆಟ್ ಉಳಿಸಿಕೊಂಡು ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಅವರ ಅಜೇಯ ಜೊತೆಯಾಟದಲ್ಲಿ ಸೇರಿದ 72 ರನ್‌ಗಳು ಗೆಲುವಿಗೆ ಕಾರಣವಾದವು.

ಭಾರತದ ಗೆಲುವಿಗೆ 20 ರನ್‌ಗಳ ಅಗತ್ಯವಿದ್ದ ಸಂದರ್ಭದಲ್ಲಿ ಗಿಲ್ ತಮ್ಮ ಬ್ಯಾಟಿಂಗ್ ವೇಗ ಬದಲಿಸಿದರು. ಬಷೀರ್ ಎಸೆತವನ್ನು ಗಿಲ್ ಲಾಂಗ್ ಆಫ್‌ಗೆ ಸಿಕ್ಸರ್ ಎತ್ತಿದರು. ಅಲ್ಲಿಯವರೆಗೂ ಗಿಲ್ ಒಂದೇ ಒಂದು ಬೌಂಡರಿ ಕೂಡ ಹೊಡೆಯದೇ ತಾಳ್ಮೆಯಿಂದ ಆಡಿದ್ದರು. ಅದೇ ಓವರ್‌ನಲ್ಲಿ ಇನ್ನೊಂದು ಎಸೆತವನ್ನು ಸಿಕ್ಸರ್‌ಗೆತ್ತಿ ತಮ್ಮ ಅರ್ಧಶತಕದ ಗಡಿಯನ್ನು ದಾಟಿದರು. ಟೆಸ್ಟ್‌ನಲ್ಲಿ ಅವರ ಆರನೇ ಅರ್ಧಶತಕ-ವಾಗಿದೆ. ನಂತರದ ಓವರ್‌ನಲ್ಲಿ ಧ್ರುವ ಅವರು ಟಾಮ್ ಬೌಲಿಂಗ್‌ನಲ್ಲಿ ತಂಡಕ್ಕೆ ಅಗತ್ಯವಿದ್ದ ಆರು ರನ್‌ಗಳನ್ನು ಒಂದು ಬೌಂಡರಿ ಹಾಗೂ ಡಬಲ್ ರನ್ ಮೂಲಕ ಪೂರೈಸಿದರು. ಭಾರತದ ಡ್ರೆಸ್ಸಿಂಗ್ ಕೋಣೆಯಲ್ಲಿ ಸಂಭ್ರಮ ಮನೆ ಮಾಡಿತು. ವಿಜಯದ ರನ್ ಗಳಿಸಿದ ಧ್ರುವ ತಮ್ಮ ಜೀವನದ ಎರಡನೇ ಟೆಸ್ಟ್‌ನಲ್ಲಿಯೇ ಪಂದ್ಯಶ್ರೇಷ್ಠ ಗೌರವ ಗಳಿಸಿದರು.



39* ರನ್ | 77 ಎಸೆತ | 75 ನಿಮಿಷ | 2 ಬೌಂಡರಿ

52* ರನ್ | 124 ಎಸೆತ | 159 ನಿಮಿಷ | 2 ಸಿಕ್ಸರ್

ಭಾರತದ ಶುಭಮನ್ ಗಿಲ್ –ಪಿಟಿಐ ಚಿತ್ರ

ಭಾರತದ ಧ್ರುವ ಜುರೇಲ್ –ಎಎಫ್‌ಪಿ ಚಿತ್ರ

72* ರನ್ | 136 ಎಸೆತ — ಆರನೇ ವಿಕೆಟ್‌ಗೆ ಜೊತೆಯಾಟ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: **ಇಂಗ್ಲೆಂಡ್ 353 (104.5 ಓವರ್‌ಗಳಲ್ಲಿ)** **ಭಾರತ 307 (103.2 ಓವರ್‌ಗಳಲ್ಲಿ)**
ಎರಡನೇ ಇನಿಂಗ್ಸ್: **ಇಂಗ್ಲೆಂಡ್ 145 (53.5 ಓವರ್‌ಗಳಲ್ಲಿ)** **ಭಾರತ 5 ವಿಕೆಟ್‌ಗೆ 192 (61 ಓವರ್‌ಗಳಲ್ಲಿ)** **(ಭಾನುವಾರ ವಿಕೆಟ್ ನಷ್ಟವಿಲ್ಲದೆ 40)**
ರೋಹಿತ್ ಸಿ ಫೋಕ್ಸ್ ಬಿ ಹಾರ್ಟ್ಲಿ 55 (81ಎ, 4x5, 6x1)
ಯಶಸ್ವಿ ಸಿ ಆ್ಯಂಡರ್ಸನ್ ಬಿ ರೂಟ್ 37 (44ಎ, 4x5)
ಶುಭಮನ್ ಗಿಲ್ ಔಟಾಗದೆ 52 (124ಎ, 6x2)
ರಜತ್ ಸಿ ಪೋಪ್ ಬಿ ಬಷೀರ್ 0 (6ಎ)
ರವೀಂದ್ರ ಸಿ ಬೆ ಸ್ಟೋ ಬಿ ಬಷೀರ್ 4 (33ಎ)
ಸರ್ಫರಾಜ್ ಸಿ ಪೋಪ್ ಬಿ ಬಷೀರ್ 0 (1ಎ)
ಧ್ರುವ ಜುರೇಲ್ ಔಟಾಗದೆ 39 (77ಎ, 4x2)
ಇತರೆ: 5 (ಬೈ 4, ಲೆಗ್ ಬೈ 1)
ವಿಕೆಟ್ ಪತನ: 1-84 (ಯಶಸ್ವಿ ಜೈಸ್ವಾಲ್, 17.3), 2-99 (ರೋಹಿತ್ ಶರ್ಮಾ ; 25.1), 3-100 (ರಜತ್ ಪಾಟೀದಾರ್; 26.2), 4-120 (ರವೀಂದ್ರ ಜಡೇಜ; 38.1), 5-120 (ಸರ್ಫರಾಜ್ ಖಾನ್; 38.2)
ಬೌಲಿಂಗ್: ಜೋ ರೋಟ್ 7–0–26–1; ಟಾಮ್ ಹಾರ್ಟ್ಲಿ 25–2–70–1; ಶೋಯೆಬ್ ಬಷೀರ್ 26–4–79–3, ಜೇಮ್ಸ್ ಆ್ಯಂಡರ್ಸನ್ 3–1–12–0
ಪಂದ್ಯದ ಆಟಗಾರ: ಧ್ರುವ ಜುರೇಲ್

ಫಲಿತಾಂಶ: ಭಾರತಕ್ಕೆ 5 ವಿಕೆಟ್ ಜಯ

ಯುವಪಡೆ ಶ್ಲಾಘಿಸಿದ ಕೊಹ್ಲಿ, ಸಚಿನ್

ಗಂಡುಮಗುವಿನ ತಂದೆಯಾದ ಸಂಭ್ರಮದಲ್ಲಿರುವ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಸೋಮವಾರ ಭಾರತ ತಂಡದ ಜಯವನ್ನು ಶ್ಲಾಘಿಸಿದ್ದಾರೆ.

'ಹೌದು (ಭಾರತದ ಬಾವುಟ) ಯುವ ತಂಡದಿಂದ ಅದ್ಭುತ ಸರಣಿ ಗೆಲುವು. ಕೆಚ್ಚು, ಧೃಡತೆ ಹಾಗೂ ಪುಟಿದೇಳುವ ಛಾತಿಯ ಯುವಪಡೆ ಇದು' ಎಂದು ಕೊಹ್ಲಿ 'ಎಕ್ಸ್'ನಲ್ಲಿ ಸಂದೇಶ ಹಾಕಿದ್ದಾರೆ. ವಿರಾಟ್ ಈ ಸರಣಿಯಲ್ಲಿ ಆಡಿಲ್ಲ.

ಭಾರತ ತಂಡದ ಜಯವನ್ನು ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಕೂಡ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

'ಈಗ ಸ್ಕೋರು 3–ವನ್ (ಜಯ). ಮತ್ತೊಮ್ಮೆ ಭಾರತ ತಂಡವು ಒತ್ತಡದ ಪರಿಸ್ಥಿತಿಯಿಂದ ಮೇಲೆದ್ದು ಬಂದು ಜಯಿಸಿದೆ. ಇದು ಯುವಪಡೆಯ ಗೆಲುವು. ತಮ್ಮ ಟೆಸ್ಟ್ ಜೀವನದ ಮೊದಲ ಸ್ಪೆಲ್‌ನಲ್ಲಿಯೇ ಮಿಂಚಿದ ಆಕಾಶ ದೀಪ್, ಧ್ರುವ ಜುರೇಲ್ ಅವರು ಕುಲದೀಪ್ ಯಾದವ್ ಅವರೊಂದಿಗಿನ ಜೊತೆಯಾಟ, ಶುಭಮನ್ ಗಿಲ್ ಆಟ ಅಮೋಘ. ಸೀನಿಯರ್ ಆಟಗಾರರಾದ ಅಶ್ವಿನ್, ಜಡೇಜ ಮತ್ತು ರೋಹಿತ್ ಅವರೂ ತಮ್ಮ ಹೊಣೆಯನ್ನು ಉತ್ತಮವಾಗಿ ನಿಭಾಯಿಸಿದ್ದಾರೆ' ಎಂದು ಸಂದೇಶ ಹಾಕಿದ್ದಾರೆ.

'ಐವರು ವಿಶ್ವದರ್ಜೆಯ ಆಟಗಾರರು ತಂಡದಲ್ಲಿ ಇಲ್ಲ. ಟಾಸ್ ಸೋಲು, ಮೊದಲ ಇನಿಂಗ್ಸ್ ಹಿನ್ನಡೆ ಆದರೂ ಭಾರತ ಗೆದ್ದಿತು. ಇದೊಂದು ಸ್ಫೂರ್ತಿದಾಯಕ ಗೆಲುವು' ಎಂದು ಇಂಗ್ಲೆಂಡ್ ಮಾಜಿ ನಾಯಕ ಮೈಕೆಲ್ ವಾನ್ ಹೇಳಿದ್ದಾರೆ.

ಮಾರ್ಚ್ 7 ರಿಂದ ಧರ್ಮಶಾಲಾದಲ್ಲಿ ಐದನೇ ಟೆಸ್ಟ್ ಆರಂಭವಾಗಲಿದ್ದು, ಅಲ್ಲಿಯವರೆಗೂ ಇಂಗ್ಲೆಂಡ್ ತಂಡವು, ಬೆಂಗಳೂರು ಮತ್ತು ಚಂಡೀಗಢದಲ್ಲಿ ಬಿಡುವು ಕಳೆಯಲಿದೆ.

ಟೆಸ್ಟ್: ತವರಿನಲ್ಲಿ ಸತತ ಸರಣಿ ಗೆಲುವಿನ ದಾಖಲೆ

ತಂಡ	ಸತತ ಗೆಲುವು	ಅವಧಿ
ಭಾರತ	17	2013ರಿಂದ ಈತನಕ
ಆಸ್ಟ್ರೇಲಿಯಾ	10	1994-2000
ಆಸ್ಟ್ರೇಲಿಯಾ	10	2004-2008
ವೆಸ್ಟ್ ಇಂಡೀಸ್	8	1976-1986
ವೆಸ್ಟ್ ಇಂಡೀಸ್	7	1998-2001
ದಕ್ಷಿಣ ಆಫ್ರಿಕಾ	7	2009-2012

ಡಬ್ಲ್ಯುಟಿಸಿ ರ‍್ಯಾಂಕಿಂಗ್ ಪಟ್ಟಿ

ಕ್ರಮಾಂಕ	ತಂಡ	ಪಂದ್ಯ	ಜಯ	ಸೋಲು	ಡ್ರಾ	ಗೆಲುವಿನ ಸರಾಸರಿ
1	ನ್ಯೂಜಿಲೆಂಡ್	4	3	1	0	75
2	ಭಾರತ	8	5	2	1	64.58
3	ಆಸ್ಟ್ರೇಲಿಯಾ	10	6	3	1	55
4	ಬಾಂಗ್ಲಾದೇಶ	2	1	1	0	50
5	ಪಾಕಿಸ್ತಾನ	5	2	3	0	36.66

ಡೆಲ್ಲಿ ಕ್ಯಾಪಿಟಲ್ಸ್ ತಂಡದ ರಾಧಾ ಯಾದವ್ –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಡೆಲ್ಲಿ ಕ್ಯಾಪಿಟಲ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಡಗೈ ಸ್ಪಿನ್ನರ್ ರಾಧಾ ಯಾದವ್ ಮತ್ತು ಮಧ್ಯಮವೇಗಿ ಮರಿಝಾನ್ ಕಾಪ್ ಅವರ ನಿಖರ ದಾಳಿಯ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಯು.ಪಿ. ವಾರಿಯರ್ಸ್ ವಿರುದ್ಧ ಜಯಭೇರಿ ಬಾರಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ರಾಧಾ ಮತ್ತು ಕಾಪ್ ದಾಳಿಯ ಮುಂದೆ ವಾರಿಯರ್ಸ್ ಯು.ಪಿ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 119 ರನ್ ಗಳಿಸಿತು. ಅದಕ್ಕುತ್ತರವಾಗಿ ಡೆಲ್ಲಿ ತಂಡವು 14.3 ಓವರ್‌ಗಳಲ್ಲಿ 1 ವಿಕೆಟ್‌ಗೆ 123 ರನ್ ಗಳಿಸಿ, 9 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಮಾಡುವ ನಿರ್ಧಾರ ಮಾಡಿತು. ತಂಡದ ನಾಯಕಿ ಮೆಗ್ ಲ್ಯಾನಿಂಗ್ ನಿರ್ಧಾರವನ್ನು ತಂಡದ ಬೌಲರ್‌ಗಳು ಸಮರ್ಥಿಸಿಕೊಂಡರು. ದಕ್ಷಿಣ ಆಫ್ರಿಕಾದ ಕಾಪ್ (5ಕ್ಕೆ3) ಅಗ್ರಕ್ರಮಾಂಕದ ಬ್ಯಾಟರ್‌ಗಳ ವಿಕೆಟ್ ಕಬಳಿಸಿದರು.

ಮಹಾರಾಷ್ಟ್ರದ ಹುಡುಗಿ ರಾಧಾ ಯಾದವ್ (20ಕ್ಕೆ4) ಮಧ್ಯಮ ಕ್ರಮಾಂಕದ ಬ್ಯಾಟ-ರ್‌ಗಳನ್ನು ಪೆವಿಲಿಯನ್‌ಗೆ ಮರಳಿ ಕಳಿಸಿದರು. ಇದರಿಂದಾಗಿ ತಂಡವು 12 ಓವರ್‌ಗಳಲ್ಲಿ ಕೇವಲ 57 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು. ಯುಪಿ ತಂಡದ ಐದನೇ ಕ್ರಮಾಂಕದ ಬ್ಯಾಟರ್ ಶ್ವೇತಾ ಸೆಹ್ರಾವತ್ (45; 42ಎ, 4X5, 6X1) ಅವರೊಬ್ಬರೇ ದಿಟ್ಟ ಹೋರಾಟ ನಡೆಸಿದರು.

ಒಂದು ಕಡೆ ವಿಕೆಟ್‌ಗಳು ಪತನ-ವಾಗುತ್ತಿದ್ದರೂ ಶ್ವೇತಾ 107. 14ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಇದರಿಂದಾಗಿ ತಂಡವು ನೂರರ ಗಡಿ ದಾಟಲು ಸಾಧ್ಯವಾಯಿತು. ಇಲ್ಲದಿದ್ದರೆ ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಇತ್ತು.

ಗುರಿ ಬೆನ್ನಟ್ಟಿದ ಡೆಲ್ಲಿ ತಂಡದ ಆರಂಭಿಕ ಜೋಡಿ ಮೆಗ್ ಲ್ಯಾನಿಂಗ್ (51; 43ಎ, 4X6) ಮತ್ತು ಶಫಾಲಿ ವರ್ಮಾ (ಔಟಾಗದೆ 64; 43ಎ, 4X6, 6X4) ಅರ್ಧಶತಕ ಗಳಿಸಿ ತಂಡದ ಜಯವನ್ನು ಸುಲಭಗೊಳಿಸಿದರು.

ಸಂಕ್ಷಿಪ್ತ ಸ್ಕೋರ್: ಯು.ಪಿ. ವಾರಿಯರ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 119 (ಅಲಿಸಾ ಹೀಲಿ 13, ಗ್ರೇಸ್ ಹ್ಯಾರಿಸ್ 17, ಶ್ವೇತಾ ಸೆಹ್ರಾವತ್ 45, ಮರಿಜಾನೆ ಕಾಪ್ 5ಕ್ಕೆ3, ಅರುಂಧತಿ ರೆಡ್ಡಿ 16ಕ್ಕೆ1, ರಾಧಾ ಯಾದವ್ 20ಕ್ಕೆ4) ಡೆಲ್ಲಿ ಕ್ಯಾಪಿಟಲ್ಸ್: 14.3 ಓವರ್‌ಗಳಲ್ಲಿ 1 ವಿಕೆಟ್‌ಗೆ 123 (ಮೆಗ್ ಲ್ಯಾನಿಂಗ್ 51, ಶಫಾಲಿ ವರ್ಮಾ ಔಟಾಗದೆ 64) ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ 9 ವಿಕೆಟ್ ಜಯ. ಇಂದಿನ ಪಂದ್ಯ,

ರಾಯಲ್ ಚಾಲೆಂಜರ್ಸ್–ಗುಜರಾತ್ ಜೇಂಟ್ಸ್. ರಾತ್ರಿ 7.30. ಸ್ಪೋರ್ಟ್ಸ್18

ಸೈಕ್ಲಿಂಗ್: ಭಾರತಕ್ಕೆ 18 ಪದಕ

ನವದೆಹಲಿ (ಪಿಟಿಐ): ಇಲ್ಲಿ ನಡೆದ ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ-ಲ್ಲಿ ಭಾರತವು ಒಂಬತ್ತು ಚಿನ್ನ, ಆರು ಬೆಳ್ಳಿ ಮತ್ತು ಮೂರು ಕಂಚಿನ ಪದಕ ಗೆದ್ದು, ತನ್ನ ಅಭಿಯಾನವನ್ನು ಕೊನೆಗೊಳಿಸಿದೆ. ಈ ಪದಕಗಳಲ್ಲಿ ಎಂಟು ಚಿನ್ನ ಮತ್ತು ನಾಲ್ಕು ಬೆಳ್ಳಿ ಪ್ಯಾರಾ ಸೈಕ್ಲಿಸ್ಟ್‌ಗಳ ಕೊಡುಗೆಯಾಗಿದೆ.

ಮಲೇಷ್ಯಾವು 19 ಚಿನ್ನ ಸೇರಿದಂತೆ ಒಟ್ಟು 37 ಪದಕಗಳೊಂದಿಗೆ ಪಟ್ಟಿಯಲ್ಲಿ ಅಗ್ರ-ಸ್ಥಾನದಲ್ಲಿದೆ. ಜಪಾನ್ (17 ಚಿನ್ನ ಸೇರಿದಂತೆ 24 ಪದಕ) ಮತ್ತು ಕೊರಿಯಾ (9 ಚಿನ್ನ ಸೇರಿ 23 ಪದಕ) ನಂತರದ ಸ್ಥಾನದಲ್ಲಿವೆ.

ಸೋಮವಾರ ಜೂನಿಯರ್ ಮಹಿಳೆಯರ ವಿಭಾಗದ ಮ್ಯಾಡಿಸನ್ ಈವೆಂಟ್‌ನಲ್ಲಿ ಭಾರತದ ಹರ್ಷಿತಾ ಜಾಖಡ್ ಮತ್ತು ಧನ್ಯಧಾ ಜೆ.ಪಿ. ಕಂಚಿನ ಪದಕ ಗೆದ್ದರು. ಈ ಮೂಲಕ ಭಾರತದ ಪದಕಗಳ ಸಂಖ್ಯೆ 18ಕ್ಕೆ ಏರಿಕೆಯಾಯಿತು. ಇದು ಹರ್ಷಿತಾ ಅವರಿಗೆ ಕೂಟದಲ್ಲಿ ಮೂರನೇ ಪದಕವಾಗಿದೆ. ಈ ಹಿಂದೆ ಅವರು ವೈಯಕ್ತಿಕ ಪರ್ಸ್ಯೂ-ಟ್‌ನಲ್ಲಿ ಬೆಳ್ಳಿ ಮತ್ತು ಟೀಂ ಪರ್ಸ್ಯೂಟ್ ಸ್ಪರ್ಧೆಯಲ್ಲಿ ಕಂಚು ಜಯಿಸಿದ್ದರು.

ಜಯದ ಭರವಸೆ ಮೂಡಿಸಿದ ವಿದ್ವತ್, ವೈಶಾಖ

ರಣಜಿ ಕ್ರಿಕೆಟ್: ಕುತೂಹಲ ಘಟ್ಟದಲ್ಲಿ ಕ್ವಾರ್ಟರ್ • ಬ್ಯಾಟರ್‌ಗಳಿಗೆ ಸತ್ವಪರೀಕ್ಷೆ

ಪ್ರಜಾವಾಣಿ ವಾರ್ತೆ

ನಾಗ್ಪುರ: ಕರ್ನಾಟಕ ತಂಡಕ್ಕೆ ಈ ಬಾರಿಯ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ನಾಲ್ಕರ ಘಟ್ಟ ಪ್ರವೇಶಿಸಲು ಕೊನೆಯ ಅವಕಾಶವೊಂದು ಇದೆ.

ವೇಗದ ಜೋಡಿ ವಿದ್ವತ್ ಕಾವೇರಪ್ಪ (61ಕ್ಕೆ6) ಮತ್ತು ವೈಶಾಖ ವಿಜಯ ಕುಮಾರ್ (81ಕ್ಕೆ4) ಅವರ ಅಮೋಘ ಬೌಲಿಂಗ್‌ನಿಂದ ಸೃಷ್ಟಿಯಾಗಿರುವ ಈ ಅವಕಾಶದಿಂದಾಗಿ ವಿದರ್ಭ ಎದುರಿನ ಕ್ವಾರ್ಟರ್ ಫೈನಲ್ ಪಂದ್ಯವು ಈಗ ಕುತೂಹಲ ಘಟ್ಟ ತಲುಪಿದೆ. ಕೊನೆಯ ದಿನವಾದ ಮಂಗಳವಾರವು ರಾಜ್ಯದ ಬ್ಯಾಟರ್ ಹಾಗೂ ಆತಿಥೇಯ ಬೌಲರ್‌ಗಳ ಪಾಲಿಗೆ ಸತ್ವಪರೀಕ್ಷೆಯಾಗಲಿದೆ.

372 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿರುವ ಕರ್ನಾಟಕದ ಆರಂಭಿಕ ಜೋಡಿ ಆರ್. ಸಮರ್ಥ್ (40; 69ಎ, 4X5) ಮತ್ತು ಮಯಂಕ್ ಅಗರವಾಲ್ (ಬ್ಯಾಟಿಂಗ್ 61; 77ಎ, 4X9, 6X1) ಮೊದಲ ವಿಕೆಟ್‌ಗೆ 101 ರನ್‌ಗಳ ಬುನಾದಿ ಹಾಕಿದ್ದಾರೆ. ಅದರಿಂದಾಗಿ ಸೋಮವಾರ ದಿನದಾಟದ ಮುಕ್ತಾಯಕ್ಕೆ ತಂಡವು 26 ಓವರ್‌ಗಳಲ್ಲಿ 1 ವಿಕೆಟ್‌ಗೆ 103 ರನ್ ಗಳಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ ತಂಡವು 174 ರನ್‌ಗಳ ದೊಡ್ಡ ಹಿನ್ನಡೆ ಅನುಭವಿಸಲು ಕಾರಣರಾಗಿದ್ದ 'ಬ್ಯಾಟರ್'ಗಳು ತಮ್ಮ ತಪ್ಪು ತಿದ್ದಿಕೊಳ್ಳಲು ಕೂಡ ಈಗ ಅವಕಾಶವಿದೆ. ಕೊನೆಯ ದಿನದಂದು ತಾಳ್ಮೆ, ಎಚ್ಚರಿಕೆ ಮತ್ತು ಯೋಜನಾಬದ್ಧ-ವಾಗಿ ಆಡಿದರೆ ಗೆಲುವಿಗೆ ಅಗತ್ಯವಿರುವ 268 ರನ್‌ಗಳ ಸವಾಲನ್ನು ಮೀರಿನಿಲ್ಲ-ಬಹುದು. ಅದರಿಂದಾಗಿ ವಿದ್ವತ್ ಮತ್ತು ವೈಶಾಖ ಅವರ ಶ್ರಮಕ್ಕೂ ಗೆಲುವಿನ ಮೆರಗು ಬರುವುದು ಖಚಿತ.

ಅಮೋಘ ಬೌಲಿಂಗ್: ಸಿವಿಲ್ ಲೈನ್ಸ್‌ನಲ್ಲಿರುವ ವಿಸಿಎ ಕ್ರೀಡಾಂಗಣದಲ್ಲಿ ಭಾನುವಾರ ದಿನದಾಟದ ಮುಕ್ತಾಯಕ್ಕೆ ಆತಿಥೇಯ ತಂಡವು ತನ್ನ ಎರಡನೇ ಇನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 50 ರನ್ ಗಳಿಸಿತ್ತು. ನಾಲ್ಕನೇ ದಿನದಾಟದಲ್ಲಿ ವಿದರ್ಭ ಬ್ಯಾಟರ್‌ಗಳ ಊಹೆಗೂ ನಿಲುಕದಂತೆ ಕರ್ನಾಟಕದ ಬೌಲರ್‌ಗಳು ಪುಟಿದೆದ್ದರು. ಬ್ಯಾಟರ್‌ಗಳಿಗೆ ನೆರವಾಗುವ ಪಿಚ್‌ನಲ್ಲಿ ವಿದ್ವತ್ ಮತ್ತು ವೈಶಾಖ ಮಿಂಚಿದರು. ವಿ. ಕೌಶಿಕ್ ವಿಕೆಟ್ ಗಳಿಸದಿದ್ದರೂ ಶಿಸ್ತಿನ ದಾಳಿ ನಡೆಸಿದರು.

ಅದರಿಂದಾಗಿ ವಿದರ್ಭ ತಂಡವು 57.2 ಓವರ್‌ಗಳಲ್ಲಿ 196 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಧ್ರುವ ಶೋರೆ (57; 98ಎ, 4X9) ಮತ್ತು ಕನ್ನಡಿಗ ಕರುಣ್ ನಾಯರ್ (34; 56ಎ, 4X5) ವಿದರ್ಭ ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು.

ಆದರೆ ಬೆಂಕಿಚೆಂಡಿನಂತಹ ಎಸೆತಗಳನ್ನು ಪ್ರಯೋಗಿಸಿದ ವಿದ್ವತ್ ಹಾಗೂ ವೈಶಾಖ ದಾಳಿಗೆ ಬ್ಯಾಟಿಂಗ್ ಪಡೆ ನಲುಗಿತು. ಮಯಂಕ್ ಮತ್ತು ಸಮರ್ಥ್ ಅವರ ಜೊತೆಯಾಟದ ಮುಂದೆ ವಿದರ್ಭ ಬೌಲರ್‌ಗಳು ಬಸವಳಿದರು. ದಿನದಾಟ ಮುಗಿಯುವಲ್ಲಿ ಇನ್ನೂ ಮೂರು ಓವರ್‌ಗಳು ಬಾಕಿಯಿದ್ದಾಗ ಸಮರ್ಥ್ ಅವರನ್ನು ಬೌಲ್ಡ್ ಮಾಡಿದ ಸರ್ವಟೆ ಜೊತೆಯಾಟವನ್ನು ಮುರಿದರು.

ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತಂಡವು ಒಂದೊಮ್ಮೆ ಇಲ್ಲಿ ಗೆದ್ದರೆ ಇತಿಹಾಸ ಬರೆಯಲಿದೆ. ಅತಿ ದೊಡ್ಡ ಮೊತ್ತವನ್ನು ಬೆನ್ನತ್ತಿ ಗೆದ್ದ ದಾಖಲೆ ಇದಾಗಲಿದೆ. 2000–01ರಲ್ಲಿ ಆಂಧ್ರ ತಂಡವು 263 ರನ್‌ಗಳ ಗುರಿಯನ್ನು ಬೆನ್ನತ್ತಿ ಗೆದ್ದಿರುವುದು ದಾಖಲೆಯಲ್ಲಿದೆ.

ಸ್ಕೋರ್: ಮೊದಲ ಇನಿಂಗ್ಸ್: ವಿದರ್ಭ: 143.1 ಓವರ್‌ಗಳಲ್ಲಿ 60. ಕರ್ನಾಟಕ: 90.3 ಓವರ್‌ಗಳಲ್ಲಿ 286. ಎರಡನೇ ಇನಿಂಗ್ಸ್: ವಿದರ್ಭ: 57.2 ಓವರ್‌ಗಳಲ್ಲಿ 196 (ಅಥರ್ವ ತೈಡೆ 25, ಧ್ರುವ ಶೋರೆ 57, ಕರುಣ್ ನಾಯರ್ 34, ಆದಿತ್ಯ ಸರ್ವಟೆ 29, ವಿದ್ವತ್ ಕಾವೇರಪ್ಪ 61ಕ್ಕೆ6, ವೈಶಾಖ ವಿಜಯಕುಮಾರ್ 81ಕ್ಕೆ4) ಕರ್ನಾಟಕ: 26 ಓವರ್‌ಗಳಲ್ಲಿ 1 ವಿಕೆಟ್‌ಗೆ 103 (ಆರ್. ಸಮರ್ಥ್ 40, ಮಯಂಕ್ ಅಗರವಾಲ್ ಬ್ಯಾಟಿಂಗ್ 61, ಅನೀಶ್ ಬ್ಯಾಟಿಂಗ್ 1, ಆದಿತ್ಯ ಸರ್ವಟೆ 10ಕ್ಕೆ1)

ವಿಕೆಟ್ ಪಡೆದ ಸಂಭ್ರಮದಲ್ಲಿ ಕರ್ನಾಟಕ ವಿದ್ವತ್ ಕಾವೇರಪ್ಪ ಪಿಟಿಐ ಚಿತ್ರ.

ಸೆಮಿಫೈನಲ್‌ಗೆ ಮಧ್ಯಪ್ರದೇಶ

ಇಂದೋರ್: ಅನುಭವ್ ಅಗರ್‌ವಾಲ್ ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಮಧ್ಯಪ್ರದೇಶ ತಂಡವು ರಣಜಿ ಟ್ರೋಫಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಆಂಧ್ರ ವಿರುದ್ಧ 4 ರನ್‌ಗಳ ಜಯ ಸಾಧಿಸಿತು. ಈ ಮೂಲಕ ತಮಿಳುನಾಡು ಬಳಿಕ ಮಧ್ಯಪ್ರದೇಶ ತಂಡವು ಸೆಮಿಫೈನಲ್ ಹಂತ ಪ್ರವೇಶಿಸಿತು.

ಮುಂಬೈಗೆ ಉತ್ತಮ ಮುನ್ನಡೆ: ಹಾರ್ದಿಕ್ ತಮೋರೆ ಅವರ ಶತಕದ ನೆರವಿನಿಂದ ಮುಂಬೈ ತಂಡವು ರಣಜಿ ಟ್ರೋಫಿಯ ಎಂಟರ ಘಟ್ಟದ ಪಂದ್ಯದಲ್ಲಿ ಬರೋಡಾ ವಿರುದ್ಧ 415 ರನ್‌ಗಳ ಮುನ್ನಡೆ ಪಡೆದಿದೆ. ನಾಲ್ಕನೇ ದಿನದಾಟದ ಅಂತ್ಯಕ್ಕೆ ಮುಂಬೈ ಎರಡನೇ ಇನಿಂಗ್ಸ್‌ನಲ್ಲಿ 102 ಓವರ್‌ಗಳಲ್ಲಿ 9 ವಿಕೆಟ್‌ಗೆ 379 ರನ್ ಗಳಿಸಿದೆ. ಬರೋಡಾ ತಂಡದ ಭಾರ್ಗವ್ ಭಟ್ ಏಳು ವಿಕೆಟ್ ಪಡೆದು ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಮಧ್ಯಪ್ರದೇಶ 81.1 ಓವರ್‌ಗಳಲ್ಲಿ 234. ಆಂಧ್ರ 68.3 ಓವರ್‌ಗಳಲ್ಲಿ 172. ಎರಡನೇ ಇನಿಂಗ್ಸ್: ಮಧ್ಯಪ್ರದೇಶ 40.5 ಓವರ್‌ಗಳಲ್ಲಿ 107. ಆಂಧ್ರ 69.2 ಓವರ್‌ಗಳಲ್ಲಿ 165 (ಹನುಮವಿಹಾರಿ 55, ಅಶ್ವಿನ್ ಹೆಬ್ಬಾರ್ 22; ಅನುಭವ್ ಅಗರ್‌ವಾಲ್ 52ಕ್ಕೆ 6, ಕುಲ್ವಂತ್ ಖೆಜ್ರೋಲಿಯಾ 40ಕ್ಕೆ 2). ಫಲಿತಾಂಶ: ಮಧ್ಯಪ್ರದೇಶ ತಂಡಕ್ಕೆ 4 ರನ್ ಜಯ ಬಿಕೆಸಿ ಮೈದಾನ, ಮುಂಬೈ: ಮೊದಲ ಇನಿಂಗ್ಸ್: ಮುಂಬೈ 140.4 ಓವರ್‌ಗಳಲ್ಲಿ 384. ಬರೋಡಾ 110.3 ಓವರ್‌ಗಳಲ್ಲಿ 348. ಎರಡನೇ ಇನಿಂಗ್ಸ್: ಮುಂಬೈ 102 ಓವರ್‌ಗಳಲ್ಲಿ 9 ವಿಕೆಟ್‌ಗೆ 379 (ಹಾರ್ದಿಕ್ ತಮೋರೆ 114, ಪೃಥ್ವಿ ಶಾ 87, ಶಮ್ಸ್ ಮುಲಾನಿ 54; ಭಾರ್ಗವ್ ಭಟ್ 142ಕ್ಕೆ 7)

ಶೂಟಿಂಗ್: ಐಶ್ವರಿ ದಾಖಲೆ ಸ್ಕೋರ್

ಭೋಪಾಲ್ (ಪಿಟಿಐ): ಒಲಿಂಪಿಯನ್ ಶೂಟರ್ ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಅವರು ಸೋಮವಾರ ಇಲ್ಲಿ ನಡೆದ ಪುರುಷರ 50 ಮೀಟರ್ ರೈಫಲ್ (3ಪಿ) ರಾಷ್ಟ್ರೀಯ ಟ್ರಯಲ್ಸ್‌ನಲ್ಲಿ ವಿಶ್ವದಾಖಲೆಯ ಸ್ಕೋರ್‌ನೊಂದಿಗೆ ಚಿನ್ನ ಗೆದ್ದರು.

ಐಶ್ವರಿ ಪ್ರತಾಪ್

ಇಲ್ಲಿ ನಡೆದ ಫೈನಲ್‌ನಲ್ಲಿ 466.4 ಸ್ಕೋರ್ ಸಂಪಾದಿಸಿದರು. ಪ್ರಸ್ತುತ ಈ ವಿಭಾಗದಲ್ಲಿ ವಿಶ್ವದಾಖಲೆಯ ಸ್ಕೋರ್ 466.1 ಇದೆ. ಭಾರತೀಯ ನೌಕಾಪಡೆಯ ನೀರಜ್ ಕುಮಾರ್ ಮತ್ತು ಮಧ್ಯಪ್ರದೇಶದ ಗೋಲ್ಡಿ ಗುರ್ಜರ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು.

ಆಕರ್ಷಿ ಚಾಂಪಿಯನ್

ನವದೆಹಲಿ (ಪಿಟಿಐ): ಭಾರತದ ಆಕರ್ಷಿ ಕಶ್ಯಪ್ ಅವರು ಉಗಾಂಡಾ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಸೋಮವಾರ ನಡೆದ ಫೈನಲ್‌ನಲ್ಲಿ ಆಕರ್ಷಿ ಅವರು 25-23, 21-18 ರಿಂದ ಸ್ವದೇಶದ ಶ್ರುತಿ ಮುಂಡಾದ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ರಘು ಮರಿಸ್ವಾರಿ 14–21ರಿಂದ ವಿಯೆಟ್ನಾಂನ ಲೆ ಡಕ್ ಫಾಟ್ ಅವರಿಗೆ ಸೋತು, ರನ್ನರ್ಸ್ ಅಪ್ ಸ್ಥಾನ ಪಡೆದರು.

ಪ್ರೊ ಕಬಡ್ಡಿ ಲೀಗ್: ಡೆಲ್ಲಿ, ಗುಜರಾತ್‌ಗೆ ನಿರಾಸೆ

ಸೆಮಿಗೆ ಪಟ್ನಾ, ಹರಿಯಾಣ

• ವಿಕ್ರಂ ಕಾಂತಿಕೆರೆ

ಹೈದರಾಬಾದ್: ಪಟ್ನಾ ಪೈರೇಟ್ಸ್ ಮತ್ತು ಹರಿಯಾಣ ಸ್ಟೀಲರ್ಸ್ ತಂಡಗಳು ಪ್ರೊ ಕಬಡ್ಡಿ ಲೀಗ್ 10ನೇ ಆವೃತ್ತಿಯ ಸೆಮಿಫೈನಲ್ ಪ್ರವೇಶಿಸಿದವು.

ಗಚ್ಚಿಬೌಲಿಯ ಜಿಎಂಸಿ ಬಾಲಯೋಗಿ ಕ್ರೀಡಾ ಸಂಕೀರ್ಣದಲ್ಲಿ ಸೋಮವಾರ ನಡೆದ ಎಲಿಮಿನೇಟರ್ ಪಂದ್ಯಗಳಲ್ಲಿ ದಬಂಗ್ ಡೆಲ್ಲಿ ವಿರುದ್ಧ ಪಟ್ನಾ ಪೈರೇಟ್ಸ್ 37–35ರಲ್ಲಿ ಹಾಗೂ ಗುಜರಾತ್ ಜೈಂಟ್ಸ್ ವಿರುದ್ಧ ಹರಿಯಾಣ ಸ್ಟೀಲರ್ಸ್ 42–25ರಲ್ಲಿ ಜಯ ಸಾಧಿಸಿತು.

ಮೊದಲ ಪಂದ್ಯದಲ್ಲಿ ಉಭಯ ತಂಡಗಳ ನಾಯಕರು ಅಮೋಘ ರೇಡಿಂಗ್ ಮೂಲಕ ಮಿಂಚಿದರು. ಆದರೆ ಕೊನೆಯ ಕ್ಷಣಗಳಲ್ಲಿ 'ಮ್ಯಾಜಿಕ್' ಮಾಡಿದ ಪಟ್ನಾ ನಾಲ್ಕನೇ ಬಾರಿ ಪ್ರಶಸ್ತಿ ಗೆಲ್ಲುವ ನಿರೀಕ್ಷೆ ಮೂಡಿಸಿತು.

ಆರಂಭದಲ್ಲಿ ಸಮಬಲದ ಹೋರಾಟ ತೋರಿದ ಡೆಲ್ಲಿ ನಂತರ ಸತತ ತಪ್ಪು ಎಸಗಿ ಪಾಯಿಂಟ್‌ಗಳನ್ನು ಕಳೆದುಕೊಂಡಿತು. 10ನೇ ನಿಮಿಷದಲ್ಲಿ ಪಟ್ನಾ ನಾಯಕ ಸಚಿನ್ ಇಬ್ಬರನ್ನು ಔಟ್ ಮಾಡುವ ಮೂಲಕ ಎದುರಾಳಿ ಅಂಗಣವನ್ನು ಖಾಲಿ ಮಾಡಿದರು. ಈ ಮೂಲಕ ತಂಡ 12–5ರ ಮುನ್ನಡೆ ಗಳಿಸಲು ನೆರವಾದರು. ಏಕಾಂಗಿ ಹೋರಾಟ ಮಾಡಿದ ಡೆಲ್ಲಿ ನಾಯಕ ಆಶು ಮಲಿಕ್ 15ನೇ ನಿಮಿಷದಲ್ಲಿ ಸೂಪರ್ ರೇಡ್ ಮೂಲಕ ಹಿನ್ನಡೆಯನ್ನು 13–14ಕ್ಕೆ ಇಳಿಸಿದರು. ಮೊದಲಾರ್ಧದ ಅಂತ್ಯಕ್ಕೆ ಡೆಲ್ಲಿ 20–19ರ ಮುನ್ನಡೆ ಸಾಧಿಸಿತು.

ದ್ವಿತೀಯಾರ್ಧದ ಆರಂಭದಲ್ಲಿ ಎರಡೂ ತಂಡಗಳು ಎಚ್ಚರಿಕೆಯ ಆಟವಾಡಿದವು. 29ನೇ ನಿಮಿಷದಲ್ಲಿ ಪಂದ್ಯ 25–25ರಲ್ಲಿ ಸಮ ಆಯಿತು. ನಂತರ ಡೆಲ್ಲಿ ಮುನ್ನಡೆ ಸಾಧಿಸಿತು.

ಪಂದ್ಯ ಮುಕ್ತಾಯಕ್ಕೆ 3 ನಿಮಿಷ ಇದ್ದಾಗ 1 ಪಾಯಿಂಟ್ ಮುನ್ನಡೆ ಸಾಧಿಸಿದ ಪಟ್ನಾ ಕೊನೆಯ ನಿಮಿಷದಲ್ಲಿ ಚಾಣಾಕ್ಷ ಆಟವಾಡಿ ಡೆಲ್ಲಿಯನ್ನು ಆಲ್ ಔಟ್ ಮಾಡಿ ಪಂದ್ಯಕ್ಕೆ ಮಹತ್ವದ ತಿರುವು ನೀಡಿತು. ಆಶು ಮಲಿಕ್ 19 ಪಾಯಿಂಟ್ ಗಳಿಸಿದರೆ ಸಚಿನ್ 9 ಪಾಯಿಂಟ್ ಕಲೆ ಹಾಕಿದರು.

ಗುಜರಾತ್‌ಗೆ ನಿರಾಸೆ: ಮಾಜಿ ರನ್ನರ್ ಅಪ್ ಗುಜರಾತ್ ಒಮ್ಮೆಯೂ ಫೈನಲ್ ಪ್ರವೇಶಿಸದ ಹರಿಯಾಣ ವಿರುದ್ಧ ನಿರಾಸೆ ಅನುಭವಿಸಿತು. ಆರಂಭದಿಂದಲೇ ಆಧಿಪತ್ಯ ಸ್ಥಾಪಿಸಿದ ಹರಿಯಾಣ ನಿರಂತರ ಮುನ್ನಡೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಹರಿಯಾಣ ತಂಡಕ್ಕಾಗಿ ರೇಡರ್ ವಿನಯ್ 12 ಪಾಯಿಂಟ್ ಗಳಿಸಿದರೆ ಶಿವಂ 8, ಡಿಫೆಂಡರ್ ಮೋಹಿತ್ ನಂದಾಲ್ 7 ಪಾಯಿಂಟ್ ತಮ್ಮದಾಗಿಸಿ-ಕೊಂಡರು. ಗುಜರಾತ್‌ಗೆ ರೇಡರ್‌ಗಳಾದ ಪ್ರತೀಕ್ ದಹಿಯಾ ಮತ್ತು ರಾಕೇಶ್ ತಲಾ 5 ಪಾಯಿಂಟ್ ತಂದುಕೊಟ್ಟರು.

ಸೆಮಿಫೈನಲ್ ಮುಖಾಮುಖಿ
ಪುಣೇರಿ ಪಲ್ಟನ್–ಪಟ್ನಾ ಪೈರೇಟ್ಸ್
ಜೈಪುರ್ ಪಿಂಕ್ ಪ್ಯಾಂಥರ್ಸ್–ಹರಿಯಾಣ ಸ್ಟೀಲರ್ಸ್

ದಬಂಗ್ ಡೆಲ್ಲಿ ಡಿಫೆಂಡರ್‌ಗಳಿಂದ ತಪ್ಪಿಸಿಕೊಳ್ಳುವ ಯತ್ನದಲ್ಲಿ ಪಟ್ನಾ ಪೈರೇಟ್ಸ್ ನಾಯಕ ಸಚಿನ್

ಕುಸ್ತಿ: ಬಜರಂಗ್, ಸಾಕ್ಷಿಗೆ ಆಹ್ವಾನ

ನವದೆಹಲಿ: ಮಾರ್ಚ್ 10–11ರಂದು ನಡೆಯುವ ರಾಷ್ಟ್ರೀಯ ಕುಸ್ತಿ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳುವಂತೆ ಕುಸ್ತಿಪಟು-ಗಳಾದ ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್ ಮತ್ತು ನಿವೃತ್ತಿ ಘೋಷಿಸಿರುವ ಸಾಕ್ಷಿ ಮಲಿಕ್ ಅವರಿಗೆ ಭಾರತ ಕುಸ್ತಿ ಸಂಸ್ಥೆ (ಡಬ್ಲ್ಯುಎಫ್‌ಐ) ಸೋಮವಾರ ಆಹ್ವಾನ ನೀಡಿದೆ.

ಏ.11ರಿಂದ 16 ರವರೆಗೆ ಕಿರ್ಗಿ-ಸ್ತಾನದಲ್ಲಿ ನಡೆಯುವ ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್ ಮತ್ತು ಏ.19 ರಿಂದ 21ರವರೆಗೆ ಅದೇ ಸ್ಥಳದಲ್ಲಿ ಏಷ್ಯನ್ ಒಲಿಂಪಿಕ್ ಗೇಮ್ಸ್ ಕ್ವಾಲಿಫೈಯರ್ ಟೂರ್ನಿಗೆ ತಂಡಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಇಂಡೋ-ಗಲ್ಫ್ ಥ್ರೋಬಾಲ್: ಭಾರತಕ್ಕೆ ಬೆಳ್ಳಿ

ಬೆಂಗಳೂರು: ಭಾರತ ಮಹಿಳೆಯರ ತಂಡವು ಇಂಡೋ–ಗಲ್ಫ್ ಇಂಟರ್‌ನ್ಯಾಷನಲ್ ಥ್ರೋಬಾಲ್ ಟೂರ್ನಿಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದೆ.

ಸಂಪೂರ್ಣ ಹೆಗಡೆ ನಾಯಕತ್ವದ ಭಾರತ ತಂಡವು ಫೈನಲ್ ಪಂದ್ಯದಲ್ಲಿ ಅಮೆರಿಕ ತಂಡದ ವಿರುದ್ಧ ಪರಾಭವಗೊಂಡು ಎರಡನೇ ಸ್ಥಾನ ಪಡೆಯಿತು.

ಅಮೆರಿಕ ಚಾಂಪಿಯನ್ ಆಗಿ ಹೊರಹೊಮ್ಮಿತು.

ಟೂರ್ನಿಯಲ್ಲಿ ಭಾರತ, ಅಮೆರಿಕ, ಸೌದಿ ಅರೇಬಿಯಾ ಮತ್ತು ಬೆಹರೇನ್‌ನ ನಾಲ್ಕು ತಂಡಗಳು ಪಾಲ್ಗೊಂಡಿದ್ದವು. ಭಾರತವು ಲೀಗ್ ಹಂತದಲ್ಲಿ ಎಲ್ಲಾ ಆರು ಪಂದ್ಯಗಳನ್ನು ಗೆದ್ದುಕೊಂಡಿತ್ತು.

ಇಂಡೋ–ಗಲ್ಫ್ ಇಂಟರ್‌ನ್ಯಾಷನಲ್ ಥ್ರೋಬಾಲ್ ಟೂರ್ನಿಯಲ್ಲಿ ಬೆಳ್ಳಿ ಪದಕ ಜಯಿಸಿದ ಭಾರತ ತಂಡದಲ್ಲಿದ್ದ (ನಿಂತವರು) ವಿವೇಕ್ ಹೆಗ್ಡೆ (ಮೀಡಿಯಾ), ಎನ್‌.ಎಸ್ ಸುಬ್ರಹ್ಮಣ್ಯ (ಕೋಚ್), ಪಾವನಿ ಚೋಡಿಸೆಟ್ಟಿ, ಕಲ್ಪನಾ ಚಲ್ಲಾ, ಸಂಪೂರ್ಣ ಹೆಗ್ಡೆ, ಅನಿತಾ ವೀಣಾ, ದೀಪಾ ಹೆಬ್ಬಾರ್, ಕೀರ್ತನಾ ಪರಮೇಶ್ವರನ್, ಸಂತೋಷ್ ಡಿ (ರೆಫ್ರಿ), (ಕುಳಿತವರು) ಪ್ರಿಶಾ ಉತ್ಪಲಾಕ್ಷಿ ಶ್ರೀನಿವಾಸನ್, ರಚಿತಾ ವಿಜಯ್, ತನೀಶಾ ಜೈನ್

ಮುಂದೆಂದೂ ಆಂಧ್ರ ತಂಡಕ್ಕೆ ಆಡುವುದಿಲ್ಲವೆಂದ ಬ್ಯಾಟರ್ ಹನುಮವಿಹಾರಿ

ಆಂಧ್ರ ಕ್ರಿಕೆಟ್ ಸಂಸ್ಥೆ ವಿರುದ್ಧ ಬಂಡಾಯ

ಬೆಂಗಳೂರು (ಪಿಟಿಐ): 'ಆಂಧ್ರ ಕ್ರಿಕೆಟ್ ಸಂಸ್ಥೆಯ ಕೀಳು ಧೋರಣೆಯು ನನ್ನ ಆತ್ಮಗೌರವಕ್ಕೆ ಚ್ಯುತಿ ತಂದಿದೆ. ಮುಂದೆಂದೂ ನಾನು ಈ ತಂಡಕ್ಕೆ ಆಡುವುದಿಲ್ಲ' ಎಂದು ಕ್ರಿಕೆಟಿಗ ಹನುಮ ವಿಹಾರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೋಮವಾರ ಇಂದೋರ್‌ನಲ್ಲಿ ನಡೆದ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಮಧ್ಯಪ್ರದೇಶದ ಎದುರು ಆಂಧ್ರ ತಂಡವು ಸೋತ ನಂತರ ಹನುಮವಿಹಾರಿ ಬರೆದಿರುವ ಪತ್ರವು ಚರ್ಚೆಗೆ ಗ್ರಾಸವಾಗಿದೆ. ತಮ್ಮನ್ನು ನಾಯಕತ್ವದಿಂದ ಕೆಳಗಿಳಿಸಿದ ಸಂಸ್ಥೆಯು ರಾಜೀನಾಮೆ ಪಡೆದಿತ್ತು ಎಂದೂ ಆರೋಪಿಸಿದ್ದಾರೆ. ಪಂದ್ಯ-ವೊಂದರಲ್ಲಿ ನಾನು ತಂಡದಲ್ಲಿರುವ ಒಬ್ಬ ಆಟಗಾರ (ರಾಜಕಾರಣಿಯ ಮಗ) ನಿಗೆ ಜೋರು ಮಾಡಿದ್ದು ಇದಕ್ಕೆ ಕಾರಣ ಎಂದಿದ್ದಾರೆ.

ಈ ಬಾರಿಯ ರಣಜಿ ಟ್ರೋಫಿಯ ಆರಂಭಿಕ ಪಂದ್ಯವು ಹೋದ ಬಾರಿಯ ರನ್ನರ್ಸ್ ಅಪ್ ಬಂಗಾಳ ವಿರುದ್ಧ ಇತ್ತು. ಅದರಲ್ಲಿ ಆಂಧ್ರ ತಂಡಕ್ಕೆ ಹನುಮ ನಾಯಕತ್ವ ವಹಿಸಿದ್ದರು. ಆದರೆ ಆ ಪಂದ್ಯ ಮುಗಿಯು-ತ್ತಿದ್ದಂತೆ ನಾಯಕತ್ವದಿಂದ ಕೆಳಗಿಳಿದಿದ್ದ ಹನುಮವಿಹಾರಿ 'ವೈಯಕ್ತಿಕ ಕಾರಣಗಳಿಂದ ನಾಯಕನ ಜವಾಬ್ದಾರಿ ಬಿಡುತ್ತಿರುವುದಾಗಿ' ತಿಳಿಸಿದ್ದರು.

ನಂತರದ ಪಂದ್ಯಗಳಲ್ಲಿ ತಂಡವನ್ನು ರಿಕಿ ಭುಯ್ ಮುನ್ನಡೆಸಿದ್ದರು.

ಹನುಮವಿಹಾರಿ

'ಟೂರ್ನಿಯ ಮೊದಲ ಪಂದ್ಯದಲ್ಲಿ ನಾನು ನಾಯಕನಾಗಿದ್ದೆ. ಆ ಪಂದ್ಯದ ಸಂದರ್ಭದಲ್ಲಿ ತಮ್ಮ ತಂಡದ 17ನೇ ಆಟಗಾರನ (ಪ್ರಭಾವಿ ರಾಜಕಾರಣಿಯ ಮಗ) ಮೇಲೆ ರೇಗಾಡಿದ್ದೆ. ಆತ ತನ್ನ ತಂದೆಗೆ ನನ್ನ ಬಗ್ಗೆ ದೂರಿದ್ದ. ಅವರ ತಂದೆಯು ನನ್ನ ಮೇಲೆ ಕ್ರಮ ಕೈಗೊಳ್ಳುವಂತೆ ಆಂಧ್ರ ಕ್ರಿಕೆಟ್ ಸಂಸ್ಥೆ ಮೇಲೆ ಒತ್ತಡ ಹಾಕಿದರು. ಆದರೆ ಬಂಗಾಳ ಎದುರಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 410 ರನ್‌ಗಳ ಮೊತ್ತವನ್ನು ಯಶಸ್ವಿಯಾಗಿ ಬೆನ್ನಟ್ಟಿದ್ದೆವು. ಪಂದ್ಯ ಡ್ರಾ ಆಗಿತ್ತು. ಅದರೂ ನನ್ನನ್ನು ನಾಯಕತ್ವದಿಂದ ಕೆಳಗಿಳಿಸ-ಲಾಯಿತು ' ಎಂದು ವಿಹಾರಿ ಇನ್ಸ್ಟಾಗ್ರಾಮ್‌ನಲ್ಲಿ ಬರೆ-ದುಕೊಂಡಿದ್ದಾರೆ.

ತಂಡದ ಆಟಗಾರ ಕೆ.ಎನ್. ಪೃಥ್ವಿ ರಾಜ್ ಅವರು ವಿಹಾರಿ ಹೇಳಿಕೆಗೆ ಪ್ರತ್ಯುತ್ತರ ಬರೆದಿದ್ದಾರೆ.

'ಅವರು (ವಿಹಾರಿ) ಬರೆದಿರುವ ಆ ವ್ಯಕ್ತಿ ನಾನೇ. ನೀವೆಲ್ಲರೂ ಕಾಮೆಂಟ್ ಬಾಕ್ಸ್‌ನಲ್ಲಿ ಹುಡುಕಾಟ ಮಾಡುತ್ತಿರುವವನು ನಾನೇ. ಅವರ ಹೇಳಿಕೆಗಳೆಲ್ಲವೂ ಸುಳ್ಳು. ಆಟ (ಕ್ರಿಕೆಟ್) ಕ್ಕಿಂತ ಯಾರೂ ದೊಡ್ಡವರಲ್ಲ. ಎಲ್ಲದಕ್ಕಿಂತಲೂ ನನಗೆ ಆತ್ಮಗೌರವ ದೊಡ್ಡದು' ಎಂದು ರಾಜ್ ಬರೆದಿದ್ದಾರೆ.

'ವೈಯಕ್ತಿಕ ನಿಂದನೆ ಮತ್ತು ಅಶ್ಲೀಲ ಭಾಷೆ ಬಳಕೆ ಯಾವುದೇ ವೇದಿಕೆಯಲ್ಲಿಯೂ ಸಹ್ಯವಲ್ಲ. ಆ ದಿನ ಏನಾಗಿತ್ತು ಎಂಬುದನ್ನು ತಂಡದಲ್ಲಿರುವ ಎಲ್ಲರಿಗೂ ಗೊತ್ತಿದೆ. ತಮ್ಮನ್ನು ಚಾಂಪಿಯನ್ ಎಂದು ಕರೆದುಕೊಳ್ಳುವ ನೀವು ಅನುಕಂಪ ಗಿಟ್ಟುಸುವ ತಂತ್ರ ಮಾಡುತ್ತಿದ್ದೀರಿ. ನಿಮಗೆ ಹೇಗೆ ಬೇಕೋ ಹಾಗೆ ಆಡಿ' ಎಂದು ರಾಜ್ ಅವರು ಹನುಮವಿಹಾರಿ ಉದ್ದೇಶಿಸಿ ಬರೆದಿದ್ದಾರೆ.

ಇದರ ನಂತರ ವಿಹಾರಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಪತ್ರವೊಂದನ್ನು ಪೋಸ್ಟ್ ಮಾಡಿದ್ದಾರೆ. ಅದರಲ್ಲಿ 'ಇಡೀ ತಂಡಕ್ಕೆ ಎಲ್ಲವೂ ಗೊತ್ತಿದೆ' ಎಂಬ ಒಂದು ಸಾಲಿನ ಸಂದೇಶವಿದೆ. ಜೊತೆಗೆ ಸಹ ಆಟಗಾರರ ಹಸ್ತಾಕ್ಷರಗಳೂ ಇವೆ. ಹೋದ ವರ್ಷದ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್‌ನಲ್ಲಿ ಹನುಮ ಅವರ ಬಲ ಮುಂಗೈಗೆ ಗಾಯವಾಗಿತ್ತು. ಅದರಿಂದಾಗಿ ಅವರು ಎಡಗೈ ಬ್ಯಾಟಿಂಗ್ ಮಾಡಿದ್ದರು. ಆದರೂ ಆಂಧ್ರ ಆ ಪಂದ್ಯದಲ್ಲಿ ಸೋತಿತ್ತು.